ಕೇರಳ ಪಾಠಾವಳಿ

KERALA READER

# ಕನ್ನಡ

# KANNADA

## ಮುಂದುವರಿದ ಪಠ್ಯ

## ADVANCED TEXT

ತರಗತಿ

IX

ಕೇರಳ ಸರಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ **(SCERT)** ಕೇರಳ

2010

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

*Prepared by*:
State Council of Educational Research and Training (SCERT)
Poojappura, Thiruvananthapuram -12, Kerala.
*Website*: www.scertkerala.gov.in
*e-mail*: scertkerala@asianetindia.com
*Phone* : 0471-2341883, *Fax* : 0471-2341869

*first Edition* : 2010
*Typesetting* : SCERT Computer Lab

©
Government of Kerala
Department of Education

ಪ್ರಿಯ ವಿದ್ಯಾರ್ಥಿಗಳೇ,

ಕನ್ನಡ ಭಾಷೆ ಮತ್ತು ಸಾಹಿತ್ಯದ ವಿಶಾಲ ಪ್ರಪಂಚಕ್ಕೆ ನಿಮಗೆ ಹಾರ್ದಿಕ ಸ್ವಾಗತ.

ಕನ್ನಡ ಭಾಷೆಯ ಭವ್ಯತೆ, ಸೊಗಸು ಮತ್ತು ಸವಿಯನ್ನು ಚೆನ್ನಾಗಿ ತಿಳಿದುಕೊಳ್ಳುವ ಸುಸಂದರ್ಭವಿದು.

ಓದುತ್ತಾ ಆಲೋಚಿಸುತ್ತಾ ಅನುಭವಗಳನ್ನು ಪರಸ್ಪರ ಹಂಚಿಕೊಳ್ಳುತ್ತಾ ಮುಂದುವರಿಯೋಣ.

ನಮ್ಮ ಮನಸ್ಸಿನಲ್ಲಿ ಹೊಳೆಯುವ ಹೊಸ ಆಶಯಗಳನ್ನು ಇತರರಿಗೆ ತಿಳಿಸಬೇಡವೇ?

ಮನಸ್ಸುಗಳ ಸಾಮರಸ್ಯವನ್ನು ಬಲಪಡಿಸಲು ಸಮರ್ಥ ಮಾಧ್ಯಮವೆಂದರೆ ಭಾಷೆ.

ನಮ್ಮ ಪೂರ್ವಿಕರ ಹಲವು ಚಿಂತನೆಗಳನ್ನು ಮತ್ತು ಪಡೆದ ವಿಪುಲವಾದ ಅನುಭವಗಳನ್ನು ನಮ್ಮದಾಗಿಸಲು ಈ ಅಧ್ಯಯನವು ನಮಗೆ ಸಹಕಾರಿಯಾಗುವುದು.

ನಮ್ಮ ಭಾವನೆಗಳನ್ನು ಮತ್ತು ಚಿಂತನೆಗಳನ್ನು ಸಾಹಿತ್ಯ ವಾಹಿನಿಯಲ್ಲಿ ಸೇರಿಸಿಕೊಳ್ಳಲು ಈ ಹೊತ್ತಗೆಯು ಕೈದೀವಿಗೆಯಾಗಲಿ.

ಪ್ರೀತಿಪೂರ್ವಕ,

**ಪ್ರೊ. ಎಂ.ಎ. ಖಾದರ್**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ. ಕೇರಳ

# TEXT BOOK DEVELOPMENT COMMITTEE

## STD. IX - KANNADA AT

**Advisor**

Dr. P. Srikrishna Bhat, Professor (Rtd), Govt. College, Kasaragod.

**Chairman**

C.H. Rama Bhat, HOD Kannada, Govt. College, Kasaragod.

## Participants

K. Chandrakumar, HSA, SVVHS, Kodlamogaru.
M. Prakash, HSST, GHSS, Bangramanjeshwar.
M. Radhakrishna, HSA, GVHSS, Mulleria.
K. Ravikumar, HSST, GHSS, Kumbla.
K. Shashikala, Trainer, BRC, Manjeshwar.
M. Shashikala, HM, GHSS, Kasaragod.
K. Savul Hameed, HSST, GVHSS, Mulleria.
P. Shivashankara, HSA, SVVHS, Miyapadavu.
M. Vishalaksha Puthrakala, HSA, SGKHS Kudlu.

**Academic Co-ordinator**

Dr. M. Sasi Nadar, Asst. Prof. SCERT.

**Artist**

Venkatakrishna Bhat, LDC SHSS, Edneer.

**Experts**

Dr. Harikrishna Bharanya, HOD Kannada, MK University, Madurai.
Dr. Mahalinga Bhat, HOD Kannada, St. Aloysius College, Mangalore.

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ **(SCERT),** ಕೇರಳ
ವಿದ್ಯಾಭವನ, ಪೂಜಪ್ಪುರ, ತಿರುವನಂತಪುರ 695012

# ಅನುಕ್ರಮಣಿಕೆ

ಪುಟ ಸಂಖ್ಯೆ


**1. ನೆಲದ ಕಂಪು ಅಳಿಯದಿರಲಿ ............................................ 7**

- ಎಲ್ಲೆಡೆ ಬೀಸುತ್ತಿದೆ ಆಧುನಿಕತೆಯ ಗಾಳಿ ............................ 9
- ಸಂಸ್ಕೃತಿಯ ನಾಡು ...................................................... 14
- ಟಿ.ವಿ. ಇಲ್ಲದ ಮನೆ ಸಂಭ್ರಮ ........................................ 19

**2. ನಾಗರಿಕತೆಯ ಅಂಚು ................................................. 23**

- ಸಾಕವ್ವನ ಕೋಳಿ ........................................................ 24
- ಪಟ್ನಪ್ನೋರ ವಾಸ ನಿತ್ಯ ಉಪವಾಸ! .................................. 28
- ಹಳ್ಳಿ ಮುಳುಗೋಗ್ತದೆ ................................................... 31

**3. ಊಟ ಬಲ್ಲವನಿಗೆ ರೋಗವಿಲ್ಲ ....................................... 37**

- ಜಾಹೀರಾತು ದುನಿಯಾ .................................................. 38
- ಭರತೇಶನ ಆರೋಗಣೆ.................................................... 42
- ಅಡುಗೆ ಮತ್ತು ಆರೋಗ್ಯ ................................................ 45

**4. ಬದುಕು; ಬದುಕಲು ಬಿಡು .......................................... 49**

- ವೀರ ಲಕ್ಷ್ಮಮ್ಮ ........................................................... 50
- ಹಾಲಜ್ಜನ ಅಳಲು ........................................................ 55
- ನಿದ್ರಾಭರದೊಳಿರ್ದರ ಕೊಲುವುದುಚಿತವೆ? ........................ 60

**5. ಮನವು ಹೂವಾಗಲಿ .................................................... 65**

- ಇನ್ನಿನಿಸು ನೀ ಮಹಾತ್ಮಾ ಬದುಕಬೇಕಿತ್ತು! ........................ 66
- ಭರತಮಾತೆ................................................................ 68
- ಬಭ್ರುವಾಹನನ ಮೂಡಿಗೆಯೊಳಂಬಾಗಿರ್ದಳು .................... 73

**6. ಬಾಳ ಸಂಜೆಗೆ ಬೇಕು ಊರುಗೋಲು ............................. 77**

- ಮುದುಪಂಗೆ ಕಟ್ಟಿದ ವೀರಪಟ್ಟಂ ...................................... 79
- ಹೊಸಚಿಗುರು ಹಳೆಬೇರು... ........................................... 82
- ಬಾಳ ಸಂಜೆ................................................................ 84

# ಭಾರತದ ಸಂವಿಧಾನ

ಭಾಗ 4(ಕ)

## ಮೂಲಭೂತ ಕರ್ತವ್ಯಗಳು

**51ಕ. ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ. –**

(1) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(2) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(3) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುವುದು ಹಾಗೂ ಸಂರಕ್ಷಿಸುವುದು.

(4) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ, ಹಾಗೆ ಮಾಡುವುದು.

(5) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಸಮಾನ ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(6) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(7) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(8) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣಾ ಪ್ರವೃತ್ತಿಯನ್ನು ಅಭಿವೃದ್ಧಿಗೊಳಿಸುವುದು.

(9) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(10) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಸಮರ್ಪಕವಾಗಿ ಶ್ರಮಿಸುವುದು.

(11) ಆರು ಮತ್ತು ಹದಿನಾಲ್ಕು ವರ್ಷಗಳ ನಡುವಣ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಬಾಲಕರಿಗೋ ಅಥವಾ ಆಯಾ ಸಂದರ್ಭಾನುಸಾರ, ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# 1

# ನೆಲದ ಕಂಪು ಅಳಿಯದಿರಲಿ

## ನಲುಗಿ ಹೋಗುತ್ತಿರುವ ಕನ್ನಡ ಪದಗಳು

ಇತ್ತೀಚೆಗೆ ಮಾಧ್ಯಮಗಳಲ್ಲಿ; ಬಹುಮುಖ್ಯವಾಗಿ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಕೆಲವು ಕಾರ್ಯಕ್ರಮಗಳನ್ನು ಪ್ರಿಯ ಕನ್ನಡಿಗರು ವೀಕ್ಷಿಸುತ್ತಿರಬಹುದು. ಎಫ್.ಎಂ. ರೇಡಿಯೋಗಳಲ್ಲಿ, ಕೆಲವು ಖಾಸಗಿ ಟೆಲಿವಿಷನ್ ಚಾನೆಲ್‌ಗಳಲ್ಲಿ ಇತ್ತೀಚೆಗೆ ಪಡ್ಡೆ ಹುಡುಗರು ನಡೆಸುತ್ತಿರುವ ಕಾರ್ಯಕ್ರಮಗಳು ಹಾಗೂ ಗೃಹಿಣಿಯರು ನಡೆಸಿಕೊಡುತ್ತಿರುವ ಹೊಸ ಭಕ್ಷ್ಯ ಭೋಜ್ಯಗಳ ತಯಾರಿ ಕಾರ್ಯಕ್ರಮಗಳು ಪ್ರಸಾರವಾಗುತ್ತಿವೆ. ಈ ಕಾರ್ಯಕ್ರಮಗಳನ್ನು ನಡೆಸಿಕೊಡುವವರು ಒಂದು ವಾಕ್ಯವನ್ನಾದರೂ ಪೂರ್ತಿ ಕನ್ನಡದಲ್ಲಿ ಮಾತನಾಡುವುದಿಲ್ಲ. ಆಶ್ಚರ್ಯವೆಂದರೆ ಒಂದು ವಾಕ್ಯವನ್ನು ಪೂರ್ತಿ ಇಂಗ್ಲಿಷ್‌ನಲ್ಲೂ ಮಾತನಾಡುವುದಿಲ್ಲ. ಕನ್ನಡಾಂಗ್ಲವೆಂಬ ಹೊಸದೊಂದು ರೀತಿಯ 'ವಿದ್ಯುನ್ಮಾನ ಮಾಧ್ಯಮ ಭಾಷಾಶೈಲಿ' ಯೊಂದನ್ನು ರೂಪಿಸಿಕೊಂಡಿದ್ದಾರೆ. ಆ ರೀತಿಯ ಭಾಷಾ ಶೈಲಿಯನ್ನು ಬಳಸುವುದು ಆ ಮಾಧ್ಯಮಗಳಿಗೆ ಒಂದು ಘನತೆ ತಂದುಕೊಡುತ್ತದೆಂಬುದು ಅಲ್ಲಿಯ ಪ್ರಮೇಯ ಇರಬಹುದು. ವಿಚಿತ್ರವೆಂದರೆ ಈ ರೀತಿಯ ಪ್ರಮೇಯ ಭಾರತೀಯ ಆಧುನಿಕ ಭಾಷೆಗಳಲ್ಲಿ, ಕನ್ನಡದಲ್ಲಿ ಕಂಡಷ್ಟು ಢಾಳಾಗಿ, ಬೇರೆ ಭಾಷೆಗಳಲ್ಲಿ ಕಂಡುಬರುತ್ತಿಲ್ಲ. ಯುವಜನಾಂಗದ ಈ ಆಧುನಿಕ ಪ್ರವೃತ್ತಿಯಿಂದಾಗಿ ಕನ್ನಡದ ಅನೇಕ ಪದಗಳು ಬಳಕೆಯಿಂದ ವಂಚಿತವಾಗುತ್ತಿವೆ.

ನನ್ನ ಗೆಳೆಯರೊಬ್ಬರು ಹೇಳುತ್ತಿದ್ದರು, ಇತ್ತೀಚೆಗೆ ಅವರು ತಮ್ಮ ಸ್ವಂತ ಊರಿಗೆ ಹೋಗಿದ್ದರಂತೆ. ಅವರ ಹಳೆಯ ಗೆಳೆಯ ಒತ್ತಾಯ ಮಾಡಿ ಊಟಕ್ಕೆ ಆಮಂತ್ರಿಸಿದ. 'ಮನೆಯಲ್ಲಿ ಸ್ವೀಟ್ಸ್ ಮಾಡಿಸಿದ್ದೇನೆ' ಎಂದು ಹೇಳಿದ. ಅವನು ಹೇಳಿದ ಸ್ವೀಟ್ಸ್ ಪಾಯಸ ಆಗಿತ್ತು. ಅವನಿಗೆ ಪಾಯಸ ಎನ್ನುವುದಕ್ಕೆ ಮುಜುಗರ. ಸ್ವೀಟ್ಸ್ ಅಂದರೆ ಅದಕ್ಕೊಂದು ಘನತೆ. ಈ ಸ್ವೀಟ್ಸ್ ಎನ್ನುವ ಸಾಮಾನ್ಯೀಕರಣದ ಒಂದು ಪದ ನಮ್ಮ ಅನೇಕ ಥರಾವರಿಯ ಸಿಹಿ ತಿಂಡಿಗಳೆಲ್ಲವನ್ನೂ ಒಂದೇ ಏಟಿಗೆ ನುಂಗಿ ಹಾಕಿ ಬಿಟ್ಟಿದೆ. ಇದೊಂದು ಸಣ್ಣ ಉದಾಹರಣೆ ಅಷ್ಟೆ. ಈ ರೀತಿಯ ಇಂಗ್ಲಿಷ್ ಪದಗಳ ಸಾಮಾನ್ಯೀಕರಣಕ್ಕೆ ಸಿಕ್ಕಿ ನಮ್ಮ ಕನ್ನಡದ ನೂರಾರು ಪದಗಳು ಈಗಾಗಲೇ ನಲುಗಿಹೋಗಿವೆ. ಈ ಪ್ರಕ್ರಿಯೆಯಿಂದಾಗಿ ಕನ್ನಡ ಬಳಕೆಯ ವಲಯಗಳು ಸಂಕುಚಿತವಾಗುತ್ತಿವೆ.

***– ಪ್ರೊ. ಲಿಂಗದೇವರು ಹಳೆಮನೆ***

❒ "ಆಧುನಿಕ ಪ್ರವೃತ್ತಿಯಿಂದಾಗಿ ಕನ್ನಡದ ಅನೇಕ ಪದಗಳು ಬಳಕೆಯಿಂದ ವಂಚಿತವಾಗುತ್ತವೆ." ಲೇಖಕರ ಈ ತಳಮಳಕ್ಕೆ ಕಾರಣಗಳನ್ನು ತರಗತಿಯಲ್ಲಿ ಚರ್ಚಿಸಿ, ನಿಮ್ಮ ನಿಲುವನ್ನು ಬರೆದು ಮಂಡಿಸಿರಿ.



# ಎಲ್ಲೆಡೆ ಬೀಸುತ್ತಿದೆ ಆಧುನಿಕತೆಯ ಗಾಳಿ

ವಿಜ್ಞಾನ ಮತ್ತು ತಂತ್ರಜ್ಞಾನ ಒಳ್ಳೆಯದೆ? ಕೆಟ್ಟದ್ದೆ? ಎಂಬ ಚರ್ಚೆ ಇಂದು ನಿನ್ನೆಯದಲ್ಲ. ಹಲವಾರು ವರ್ಷಗಳಿಂದ ಈ ವಿಷಯದ ಬಗ್ಗೆ ಬೇರೆ ಬೇರೆ ಮಟ್ಟಗಳಲ್ಲಿ ಚರ್ಚೆ, ಸಮೀಕ್ಷೆ, ಸಂಶೋಧನೆಗಳು ನಡೆಯುತ್ತಿವೆ. ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಪ್ರತಿ ವರ್ಷವೂ ಯಾವುದಾದರೊಂದು ಚರ್ಚಾಸ್ಪರ್ಧೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ವಿಷಯ ಇದ್ದೇ ಇರುತ್ತಿತ್ತು. ವಿಷಯದ ಪರವಾಗಿ ಮಾತನಾಡುವವರು ವಿದ್ಯುತ್ ಶಕ್ತಿ, ಯಂತ್ರಗಳು, ದೂರವಾಣಿ, ರೇಡಿಯೋ, ವೈದ್ಯವಿಜ್ಞಾನದ ಸಾಧನೆಗಳು ಮುಂತಾದವುಗಳನ್ನು ಬಾಯ್ತುಂಬಾ ಹೊಗಳಿ ವಿಜ್ಞಾನಕ್ಕೆ ಜೈ ಅನ್ನುತ್ತಿದ್ದರು. ವಿರೋಧಿಗಳು ವಿಜ್ಞಾನ ಮತ್ತು ತಂತ್ರಜ್ಞಾನದ ಅತಿಯಾದ ಬಳಕೆಯಿಂದ ಆಗುವ ಅನಾಹುತಗಳನ್ನು ಪಟ್ಟಿಮಾಡಿ ಟೀಕಿಸುತ್ತಿದ್ದರು. 'ಹೊಸ ಚಿಗುರು ಹಳೆ ಬೇರು.... ಋಷಿವಾಕ್ಯದೊಡನೆ ವಿಜ್ಞಾನ, ಕಲೆ ಮೇಳವಿಸೆ ಜಸವು ಜನಜೀವನಕೆ ಮಂಕುತಿಮ್ಮ' ಎಂಬ ಡಿವಿಜಿಯವರ ಕಗ್ಗದ ಸಾಲುಗಳನ್ನು ಎಲ್ಲರೂ ಉಲ್ಲೇಖಿಸುತ್ತಿದ್ದರು. ಹೀಗಾಗಿ ಯಾರಿಗೆ ಬಹುಮಾನ ಕೊಡುವುದು? ಎಂದು ನಿರ್ಧರಿಸಲಾಗದೆ ನಿರ್ಣಾಯಕರು ತೊಳಲಾಡುತ್ತಿದ್ದರು.

ಒಂದೆಡೆ ತಂತ್ರಜ್ಞಾನದ ಸಾಧಕ – ಬಾಧಕಗಳ ಬಗ್ಗೆ ಚರ್ಚೆ ನಡೆಯುತ್ತಲೇ ಇದೆ. ಇನ್ನೊಂದು ಕಡೆಯಿಂದ ಈ ಚರ್ಚೆಗೂ ನನಗೂ ಸಂಬಂಧವೇ ಇಲ್ಲವೆಂಬಂತೆ ತಂತ್ರಜ್ಞಾನ ಆಗಮಿಸಿ ಎಲ್ಲಾ ರಂಗಗಳನ್ನೂ ಆಕ್ರಮಿಸಿಕೊಂಡಿದೆ. ಜಾಗತೀಕರಣದ ಇಂದಿನ ದಿನಗಳಲ್ಲಂತೂ ತಂತ್ರಜ್ಞಾನದಿಂದ ನಮ್ಮ ಬದುಕಿನಲ್ಲಿ ಆಗುತ್ತಿರುವ ಬದಲಾವಣೆಯ ವೇಗವನ್ನು ಗಮನಿಸಿದರೆ ಅಚ್ಚರಿಯಾಗುತ್ತದೆ.

ಯಂತ್ರವೆ ಮಿತ್ರ ಯಂತ್ರವೆ ಆಳು
ಯಂತ್ರವೆ ನಮ್ಮನಾಳುತಿದೆ
ಖಾಸಗಿ ಜೀವನವನ್ನೂ ಕೂಡಾ
ಯಂತ್ರ ನಿಯಂತ್ರಣ ಮಾಡುತಿದೆ

ನನ್ನ ಬಾಲ್ಯದಲ್ಲಿ ಅಂದರೆ ಸುಮಾರು ೪೦ ವರ್ಷಗಳ ಹಿಂದೆ ನಮ್ಮ ಊರಿನಲ್ಲಿ ಶ್ರೀಮಂತರ ಮನೆಗಳಲ್ಲೂ ಶೌಚಾಲಯ ಇರಲಿಲ್ಲ. ಗಂಡಸರು ಹೆಂಗಸರು ಎಂಬ ಭೇದವಿಲ್ಲದೆ ಎಲ್ಲರೂ –

ಮನೆಯೇ ದೇವಾಲಯ
ಬಯಲೇ ಶೌಚಾಲಯ

ಎನ್ನುತ್ತ ಪ್ರಾತಃವಿಧಿಗಳನ್ನು ತೀರಿಸಬೇಕಾದ ಪರಿಸ್ಥಿತಿ ಇತ್ತು. ಆಧುನಿಕತೆಯ ಪ್ರಭಾವದಿಂದಾಗಿ ನಾಲ್ಕೈದು ವರ್ಷಗಳಲ್ಲಿ ನಮ್ಮೂರಿನ ಬಹಳಷ್ಟು ಮನೆಗಳ ಹಿತ್ತಿಲಿನಲ್ಲಿ ಶೌಚಾಲಯಗಳ ನಿರ್ಮಾಣವಾಯಿತು. ಮೊದಲು ಮನೆಯಿಂದ ಹೊರಗೆ ದೂರದಲ್ಲಿ ಇರುತ್ತಿದ್ದ ಶೌಚಾಲಯ ನಂತರದ ದಿನಗಳಲ್ಲಿ ಮನೆಯ ಒಳಗೆ ಬಂತು. ಬಚ್ಚಲುಮನೆ ಮತ್ತು ಪಾಯಿಖಾನೆಗಳ ನಡುವೆ ಇದ್ದ ಪ್ರತ್ಯೇಕತೆಯ ಗೋಡೆ ಮಾಯವಾಯಿತು. ಆಮೇಲೆ ಶೌಚಾಲಯ ಶಯ್ಯಾಗೃಹವನ್ನೂ ಪ್ರವೇಶಿಸಿತು. ಈಗಿನವರು ಮನೆಯ ಎಲ್ಲಾ ಕೋಣೆಗಳಿಗೂ ಅಟ್ಯಾಚ್ಡ್ ಬಾತ್‌ರೂಮ್ ಇದ್ದರೆ ಉತ್ತಮ ಅನ್ನುತ್ತಾರೆ. ಮುಂದೊಂದು ದಿನ ಅದು ಅಡುಗೆಮನೆಯ ಒಳಗೂ ಬಂದೀತು.

ಹತ್ತು ವರ್ಷಗಳ ಹಿಂದೆ ಇದೇ ಬೆಳಗಾವಿಯಲ್ಲಿ ನಾನು ಬಾಡಿಗೆಮನೆ ಹುಡುಕುತ್ತಿದ್ದಾಗ ವೆಸ್ಟರ್ನ್ ಕಮೋಡ್



(ಪಾಶ್ಚಾತ್ಯ ಶೈಲಿಯ ಸಂಡಾಸು) ಇದೆ ಎಂಬ ಕಾರಣಕ್ಕೆ ಕೆಲವು ಮನೆಗಳನ್ನು ಬಿಟ್ಟಿದ್ದೆ. ಹತ್ತು ವರ್ಷಗಳ ನಂತರ ಪುನಃ ಬೆಳಗಾವಿಗೆ ಬಂದು ವಾಸಕ್ಕೆ ಮನೆ ಹುಡುಕುತ್ತಿದ್ದಾಗ ನಾನು ಹೇಳಿದ್ದು –

ಕಮೋಡು ಇರಲೇ ಬೇಕು

ಎಷ್ಟೇ ಆಗಲಿ ಬಾಡಿಗೆ

ಒಗ್ಗಿ ಹೋಗಿದೆ ಬಾಡಿ

ಕಮೋಡಿಗೆ

ಅದರ ಮೋಡಿಗೆ!

ತಂತ್ರಜ್ಞಾನದಿಂದ ಶೌಚಾಲಯದಲ್ಲೂ ಕ್ರಾಂತಿ ನಡೆದಿದೆ. ಕೆಲವು ಪಂಚತಾರಾ ಹೋಟೇಲ್‌ಗಳ ಬಾತ್‌ರೂಮ್ ಹೊಕ್ಕರೆ ಅವುಗಳ ಅಚ್ಚುಕಟ್ಟುತನ ಹಾಗೂ ಸ್ವಚ್ಛತೆಯನ್ನು ಕಂಡು ಖುಷಿಯಾಗುತ್ತದೆ. ಆದರೆ ನಲ್ಲಿ ತಿರುಗಿಸುವುದು ಹೇಗೆ? ಯಾವುದನ್ನು ತಿರುಗಿಸಿದರೆ ಬಿಸಿನೀರು ಬರುತ್ತದೆ? ಯಾವುದನ್ನು ತಿರುಗಿಸಿದರೆ ತಣ್ಣೀರು ಬರುತ್ತದೆ? ಎಂಬುದು ತಿಳಿಯದೆ ಗೊಂದಲವಾಗುತ್ತದೆ. ಹೋಟೇಲ್ ಹುಡುಗನನ್ನು ಕರೆದು ವಿಚಾರಿಸಲು ಸ್ವಾಭಿಮಾನ ಅಡ್ಡ ಬರುತ್ತದೆ. ಒಮ್ಮೆ ಬಹಳಷ್ಟು ಯೋಚಿಸಿ ಕೊನೆಗೆ ಯಾವುದೋ ಒಂದು ನಲ್ಲಿಯನ್ನು ತಿರುಗಿಸಿದಾಗ ಇದ್ದಕ್ಕಿದ್ದಂತೆ ತಣ್ಣೀರಿನ ಶವರ್ ಮೈಮೇಲೆ ಬೀಳತೊಡಗಿತು! ದೆಹಲಿಯ ಅತ್ಯಾಧುನಿಕ ಹೋಟೇಲ್ ಒಂದರಲ್ಲಿ ಬಾತ್‌ರೂಮಿನೊಳಗೆ ಬಕೆಟ್ ಮತ್ತು ಮಗ್ ಇರಲೇ ಇಲ್ಲ. ಹೋಟೇಲ್ ಪರಿಚಾರಕನನ್ನು ಕರೆದು ವಿಚಾರಿಸಿದೆ. “ಸ್ನಾನ ಮಾಡಲು ಶವರ್ ಇದೆ. ಕಮೋಡಿನ ಪಕ್ಕದಲ್ಲಿ ಫ್ಲೆಕ್ಸಿಬಲ್ ಪೈಪ್ ಇದೆ. ಬೇಕಿದ್ದರೆ ಟಿಶ್ಯೂ ಪೇಪರ್ ಕೂಡಾ ಇದೆ. ಮಗ್ ಯಾಕೆ?” ಅಂತ ಕೇಳಿದ. ನಾನು ಆತನಿಗೆ ಐದು ರೂಪಾಯಿ ಟಿಪ್ಸ್ ಕೊಟ್ಟು “ಇದೆಲ್ಲ ನನಗೆ ಅಭ್ಯಾಸ ಇಲ್ಲ. ಹೇಗಾದರೂ ಮಾಡಿ ಒಂದು ಬಕೆಟ್ ಮತ್ತು ಮಗ್ ತೆಗೆದುಕೊಂಡು ಬಾ” ಅಂತ ವಿನಂತಿಸಿಕೊಂಡೆ.

ವ್ಯಾಪಾರಿಗಳು ಹೊಗಳುವ ಕಲೆಯಲ್ಲಿ ನಿಷ್ಣಾತರಾಗಿರುತ್ತಾರೆ. ಮಾರಾಟ ಮಾಡುವ ವಸ್ತುಗಳ ಗುಣಮಟ್ಟ ಅತ್ಯುತ್ತಮವಾಗಿದ್ದು, ಬೆಲೆ ಕಡಿಮೆಯಾಗಿದ್ದರೆ ಸಾಲದು. ಇಂದಿನ ಸ್ಪರ್ಧಾಯುಗದಲ್ಲಿ ನಿಮ್ಮ ವಸ್ತುಗಳ ಗುಣಗಾನ ಮಾಡದಿದ್ದರೆ ವ್ಯಾಪಾರ ಆಗುವುದಿಲ್ಲ. ಆದ್ದರಿಂದಲೇ ಇಂದು ಹೊಗಳುವ ಕಲೆ ‘ಜಾಹೀರಾತು’ ಎಂಬ ಗೌರವಾನ್ವಿತ ಹೆಸರಿನಲ್ಲಿ ಬೃಹತ್ ಉದ್ಯಮವಾಗಿ ಬೆಳೆದು ನಿಂತಿದೆ. ಹಿಂದೆಲ್ಲ ಪತ್ರಿಕೆಗಳಲ್ಲಿ ವಾರ್ತೆಗಳ ನಡುವೆ ಅಲ್ಲೊಂದು ಇಲ್ಲೊಂದು ಜಾಹೀರಾತು ಇರುತ್ತಿತ್ತು. ಈಗ ಸುದ್ದಿಯನ್ನು ಜಾಹೀರಾತುಗಳ ನಡುವೆ ಹುಡುಕಿ ಹುಡುಕಿ ಓದಬೇಕು. ಜಾಹೀರಾತನ್ನೇ ಸುದ್ದಿಯ ರೂಪದಲ್ಲಿ ಪ್ರಕಟಿಸಿ, ಕಾಟಾಚಾರಕ್ಕೆ ಎಂಬಂತೆ ಕೊನೆಯಲ್ಲಿ ಇದೊಂದು ಜಾಹೀರಾತು ಅಂತ ಹಾಕಿರುತ್ತಾರೆ. ಈಗೀಗ ಅದೂ ಇರೋದಿಲ್ಲ.

ಟಿ.ವಿ. ಯಲ್ಲಂತೂ ನೋಡುವುದೇ ಬೇಡ. ಸುಮ್ಮನೆ ರಿಮೋಟ್ ಹಿಡಿದುಕೊಂಡು ಚಾನೆಲ್ ಬದಲಿಸುತ್ತಾ ಹೋದರೆ ಬಹಳಷ್ಟು ಚಾನೆಲ್‌ಗಳಲ್ಲಿ ಕಾಣಸಿಗುವುದು ಜಾಹೀರಾತು. ಆ ಕಪ್ಪು ಈ ಕಪ್ಪು ಎಂಬ ಹೆಸರಲ್ಲಿ ವರ್ಷದುದ್ದಕ್ಕೂ ನಡೆಯುತ್ತಿರುವ ಕ್ರಿಕೆಟ್ ಮ್ಯಾಚುಗಳನ್ನು ಕೋಟಿಗಟ್ಟಲೆ ಹಣ ಸುರಿದು ಪ್ರಾಯೋಜಿಸುವವರು ಹಾಗೆ ಮಾಡುವುದು ಕ್ರಿಕೆಟ್ ಮೇಲಿನ ಪ್ರೀತಿಯಿಂದಲ್ಲ. ನಿಜವಾಗಿ ಅದು ಜಾಹೀರಾತಿನ ಇನ್ನೊಂದು ವೈಖರಿ. ಉತ್ಪನ್ನದ ಗುಣಮಟ್ಟ ಹೇಗೇ ಇದ್ದರೂ ಅದನ್ನು ಜಗತ್ತಿನ ಎಂಟನೇ ಅದ್ಭುತ ಎಂಬಂತೆ ಹೊಗಳುವ ಕಲೆಯೇ ಜಾಹೀರಾತು. ಕಪ್ಪನ್ನು ಬಿಳಿ ಎಂದು ಸಾಧಿಸುವುದು ಅಷ್ಟೊಂದು ಸುಲಭವಲ್ಲ. ಇದಕ್ಕಾಗಿ ಜಾಹೀರಾತು ಏಜನ್ಸಿಗಳು ಬಗೆಬಗೆಯ ಕಸರತ್ತುಗಳನ್ನು ನಡೆಸುತ್ತವೆ. ಲಕ್ಷಗಟ್ಟಲೆ ಹಣ ಚೆಲ್ಲಿ ಸಿನಿಮಾ ತಾರೆಯರನ್ನು ಬಳಸಿಕೊಳ್ಳುತ್ತಾರೆ.



ಅವರು ಏನು ಮಾಡಿದರೂ ಜನ ನೋಡುತ್ತಾರೆ. ಅದನ್ನೇ ಅನುಕರಿಸುತ್ತಾರೆ ಎಂಬುದು ಅವರ ಲೆಕ್ಕಾಚಾರ. ಜಾಹೀರಾತುಗಳಲ್ಲಿ ನಟನಟಿಯರು ಹಣ ತೆಗೆದುಕೊಂಡ ತಪ್ಪಿಗೆ ಯಾವುದೋ ಉತ್ಪನ್ನವನ್ನು ಹೊಗಳಲು ಏನೇನೋ ಸರ್ಕಸ್ ಮಾಡುತ್ತಾರೆ. ಅವರು ತಾರೆಯರಾದ್ದರಿಂದ ಏನು ಮಾಡಿದರೂ ಚಂದ.

ಹೊಗಳುವ ಕಲೆಯಾದ ಜಾಹೀರಾತನ್ನು ಕಲಿಸುವ ಶಿಕ್ಷಣ ಸಂಸ್ಥೆಗಳೇ ಇವೆ. ಆದರೆ ತರಕಾರಿ ಮಾರುಕಟ್ಟೆಗೆ ಹೋಗಿ ನೋಡಿ. ಬಹುಶಃ ಶಾಲೆಯ ಮೆಟ್ಟಲನ್ನೇ ಹತ್ತಿರದ ಅಲ್ಲಿನ ವ್ಯಾಪಾರಿಗಳು ತಮ್ಮ ಉತ್ಪನ್ನಗಳನ್ನು ಹೊಗಳುವ ವೈಖರಿಯನ್ನು ಕಂಡರೆ, ಜಾಹೀರಾತಿನಲ್ಲಿ ಸ್ನಾತಕೋತ್ತರ ಶಿಕ್ಷಣ ಪಡೆದವರು ಆಶ್ಚರ್ಯಪಡಬೇಕು. ಕಳೆದ ಭಾನುವಾರ ಮಾರ್ಕೆಟ್ಟಿಗೆ ಹೋಗಿದ್ದೆ. "ಬನ್ನಿ ಸ್ವಾಮೀ, ಸಕ್ರೆ ಸಕ್ರೆ ಕೇಜಿಗೆ ಬರೀ ಎಂಟು ರೂಪಾಯಿ" ಎಂದು ಹೆಂಗಸೊಬ್ಬಳು ಕೂಗುತ್ತಿದ್ದದ್ದು ಕೇಳಿಸಿತು. ಸಕ್ಕರೆಯ ಬೆಲೆ ಕೆ.ಜಿ. ಗೆ ಹದಿನಾರು ರೂಪಾಯಿಯಿಂದ ಎಂಟು ರೂಪಾಯಿಗೆ ಕುಸಿದದ್ದು ಯಾವಾಗ ಅಂತ ಆಶ್ಚರ್ಯವಾಯ್ತು. ಕುತೂಹಲದಿಂದ ಆ ಕಡೆ ನೋಡಿದೆ. ಸಕ್ರೆ, ಸಕ್ರೆ ಎಂದು ಆ ಹೆಂಗಸು ಮಾರುತ್ತಾ ಇದ್ದದ್ದು ಕಲ್ಲಂಗಡಿ ಹಣ್ಣು!

ಇಲಿ ಇಲಿ ಇಲಿ
ಕಿಂದರಿ ಜೋಗಿಯ
ಹಿಂದೋಡದ ಇಲಿ
ಬೋನಿಗೆ ಬೀಳದ ಜಾಣ ಇಲಿ
ಕಚೇರಿ, ಶಾಲೆ, ಕಾಲೇಜುಗಳಲ್ಲಿ
ಮನೆ ಮನೆಯಲ್ಲಿ ಇಲಿ
ಕಂಪ್ಯೂಟರ್ ಬಳಿ!

ಆಧುನಿಕ ತಂತ್ರಜ್ಞಾನದಿಂದಾಗಿ ಈಗ ಎಲ್ಲೆಡೆಯಲ್ಲೂ ಕಂಪ್ಯೂಟರ್ ಮತ್ತು ಮೌಸ್‌ಗಳು ರಾರಾಜಿಸುತ್ತಿವೆ. ಎರಡು ದಶಕಗಳ ಹಿಂದೆ ಪರಿಸ್ಥಿತಿ ಹೀಗಿರಲಿಲ್ಲ. ಉದಾಹರಣೆಗೆ ಕಂಪ್ಯೂಟರೀಕರಣದಿಂದ ನಿರುದ್ಯೋಗ ಸಮಸ್ಯೆ ಇನ್ನಷ್ಟು ಹೆಚ್ಚಾಗುತ್ತದೆ ಎಂದು ಬ್ಯಾಂಕುಗಳ ಕಾರ್ಮಿಕಸಂಘಗಳು ಅದನ್ನು ವಿರೋಧಿಸುತ್ತಿದ್ದವು. ಆ ಸಂಘಗಳನ್ನು ಒಪ್ಪಿಸಲು ಆಡಳಿತವರ್ಗ ವೇತನ ಹೆಚ್ಚಳ, ವಿಶೇಷ ಭತ್ತೆ ಮುಂತಾದ ಆಮಿಷಗಳನ್ನು ಒಡ್ಡಬೇಕಾಗಿತ್ತು. ಆದರೂ ಕಾರ್ಮಿಕ ಸಂಘಗಳ – 'ಗ್ರಾಮೀಣ ಶಾಖೆಗಳಲ್ಲಿ ಕಂಪ್ಯೂಟರ್ ಹಾಕಕೂಡದು. ನಗರ ಹಾಗೂ ಅರೆನಗರ ಶಾಖೆಗಳಲ್ಲಿ ಬೇಕಾದರೆ ಹಾಕಿಕೊಳ್ಳಿ' ಎಂಬಂಥ ಶರತ್ತುಗಳೊಂದಿಗೆ ಒಲ್ಲದ ಮನಸ್ಸಿನಿಂದ ಕಂಪ್ಯೂಟರೀಕರಣಕ್ಕೆ ಅನುಮತಿ ನೀಡುತ್ತಿದ್ದವು.

ಜಾಗತೀಕರಣದಿಂದಾಗಿ ಪರಿಸ್ಥಿತಿ ಬದಲಾಯಿತು. ಹೊಸದಾಗಿ ಆರಂಭವಾದ ಖಾಸಗಿ ಬ್ಯಾಂಕುಗಳು ಮತ್ತು ವಿದೇಶಿ ಬ್ಯಾಂಕುಗಳು ಸಂಪೂರ್ಣ ಕಂಪ್ಯೂಟರೀಕೃತ ಶಾಖೆ ಹಾಗೂ ಎ.ಟಿ.ಎಂ.ಗಳ ಮೂಲಕ ಗ್ರಾಹಕರನ್ನು ಆಕರ್ಷಿಸತೊಡಗಿದವು. ಅವುಗಳ ಸ್ಪರ್ಧೆಯನ್ನು ಎದುರಿಸಲು ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಹಳೆಯ ಖಾಸಗಿ ಬ್ಯಾಂಕುಗಳು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲೇ ಬೇಕಾಯಿತು. ಈಗ ಬ್ಯಾಂಕುಗಳಲ್ಲಿ ಮಾತ್ರವಲ್ಲ ಎಲ್ಲ ಉದ್ಯಮಗಳಲ್ಲೂ ತಂತ್ರಜ್ಞಾನಕ್ಕೆ ಮಹತ್ವ ನೀಡಲಾಗುತ್ತಿದೆ. ಲೆಡ್ಜರ್ ಖರೀದಿಸಲು ದುಡ್ಡಿಲ್ಲದ ಸರಕಾರಿ ಕಚೇರಿಗಳಲ್ಲೂ ಕಂಪ್ಯೂಟರ್‌ಗಳು ಕಂಗೊಳಿಸುತ್ತಿವೆ. ಹೋಟೇಲ್‌ಗಳಲ್ಲಿ ಸಪ್ಲೈಯರ್‌ಗಳು ಲೆಮೆನ್‌ರೈಸ್,



ಕರ್ಡ್‌ರೈಸ್, ಜೇರಾರೈಸ್ ಅಂದಷ್ಟೇ ಸಲೀಸಾಗಿ ಕಚೇರಿಗಳಲ್ಲಿ ಹಿರಿಯ ಅಧಿಕಾರಿಗಳು 'ಕಂಪ್ಯೂಟರೈಸ್' ಅನ್ನುತ್ತಿದ್ದಾರೆ! ಕಾರ್ಮಿಕ ಮುಖಂಡರ ಮೇಜಿನ ಮೇಲೂ ಕಂಪ್ಯೂಟರ್ ಬಂದು ಕುಳಿತಿದೆ.

ಆಧುನಿಕ ತಂತ್ರಜ್ಞಾನದಿಂದಾಗಿ ಟಿಕೆಟ್ ಕಾದಿರಿಸುವುದು, ಪ್ರಯಾಣ, ಬ್ಯಾಂಕಿಂಗ್ ಮುಂತಾದವುಗಳು ಹಿಂದೆಂದಿಗಿಂತಲೂ ಸುಲಭವಾಗಿದೆ. ಮೊಬೈಲ್ ಹಾಗೂ ಇಂಟರ್‌ನೆಟ್‌ಗಳಿಂದಾಗಿ ಜಗತ್ತಿನ ಯಾವುದೇ ಮೂಲೆಯಲ್ಲಿರುವ ವ್ಯಕ್ತಿಯೊಂದಿಗೆ ಸಂಪರ್ಕ ಸಾಧಿಸುವುದು ಸಾಧ್ಯವಾಗಿದೆ. "ಇಷ್ಟಾದರೂ ಆಧುನಿಕ ತಂತ್ರಜ್ಞಾನದ ಸಂಪೂರ್ಣ ಪ್ರಯೋಜನವನ್ನು ನಾವು ಪಡೆದುಕೊಳ್ಳುತ್ತಿದ್ದೇವೆಯೇ?" ಅಂತ ಕೇಳಿದರೆ ಇಲ್ಲ ಅಂತಲೇ ಹೇಳಬೇಕಾಗುತ್ತದೆ. ಬ್ಯಾಂಕುಗಳಲ್ಲಿ ತರುಣ ಜನಾಂಗದ ಗ್ರಾಹಕರು ಮಾತ್ರ ಎ.ಟಿ.ಎಂ., ನೆಟ್ ಬ್ಯಾಂಕಿಂಗ್ ಮುಂತಾದ ಆಧುನಿಕ ಸೌಲಭ್ಯಗಳನ್ನು ಬಳಸಿಕೊಳ್ಳುತ್ತಿದ್ದಾರೆ.

ಐವತ್ತು ದಾಟಿದವರಲ್ಲಿ ಬಹಳಷ್ಟು ಮಂದಿಗೆ ಟೆಕ್ನಾಲಜಿ ಅಂದರೆ ಅಲರ್ಜಿ. ಹುಲಿಗೆ ಹೆದರದ ಇವರು ಕಂಪ್ಯೂಟರ್ ಇಲಿಗೆ ಹೆದರುತ್ತಾರೆ.

ನನ್ನ ಮಿತ್ರರೊಬ್ಬರು ಒಂದು ಕಚೇರಿಯ ಮುಖ್ಯಸ್ಥರಾಗಿ ಅಧಿಕಾರ ಸ್ವೀಕರಿಸಿದ ತಕ್ಷಣ ಮಾಡಿದ ಮೊದಲ ಕೆಲಸವೆಂದರೆ ಅವರ ಮೇಜಿನ ಮೇಲಿದ್ದ ಕಂಪ್ಯೂಟರನ್ನು ಕ್ಯಾಬಿನ್‌ನಿಂದ ಹೊರಗೆ ಸ್ಥಳಾಂತರಿಸಿದ್ದು! ಕೆಲವು ಹಿರಿಯ ಅಧಿಕಾರಿಗಳು ಮೇಜಿನ ಮೇಲೆ ಕಂಪ್ಯೂಟರ್ ಇಟ್ಟುಕೊಳ್ಳುವುದು ಕೇವಲ ಪ್ರದರ್ಶನಕ್ಕಾಗಿ. ಅದನ್ನು ಸ್ವಿಚ್ ಆನ್ ಮಾಡೋದು ಹೇಗೆಂಬುದೂ ಅವರಿಗೆ ಗೊತ್ತಿರುವುದಿಲ್ಲ. ವಿಸಿಟಿಂಗ್ ಕಾರ್ಡ್‌ನಲ್ಲಿ ಇ–ಮೇಲ್ ವಿಳಾಸ ಮುದ್ರಿಸಿಕೊಂಡಿರುವವರಲ್ಲಿ ಅನೇಕರಿಗೆ ಮೇಲ್ ಓದುವುದು ಮತ್ತು ಉತ್ತರಿಸುವುದು ಹೇಗೆಂಬುದು ತಿಳಿದಿರುವುದಿಲ್ಲ. ನಮ್ಮ ಮನೆಯಲ್ಲಿ ಅತ್ಯಾಧುನಿಕ ಪಿ.ಸಿ. ಇದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳಬಹುದೆಂಬುದನ್ನು ತಿಳಿದುಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಹೀಗಾಗಿ ಅದು ಮಕ್ಕಳ ಆಟಕ್ಕಷ್ಟೇ ಬಳಕೆಯಾಗುತ್ತದೆ.

ಎಲ್ಲರ ಕೈಗಳಲ್ಲೂ ಈಗ ಮೊಬೈಲ್ ಮಿಂಚುತ್ತಿದೆ ಎಂಬ ಕಾರಣಕ್ಕೆ ನಾವು ತಂತ್ರಜ್ಞಾನದಲ್ಲಿ ಪ್ರಗತಿ ಸಾಧಿಸಿದ್ದೇವೆ ಎಂದು ಕೆಲವರು ಹೇಳುತ್ತಾರೆ. ಆದರೆ ಬಹಳಷ್ಟು ಮಂದಿಗೆ ಮೊಬೈಲ್ ಅಂದರೆ ಅದೊಂದು ಪುಟ್ಟ ಕಂಪ್ಯೂಟರ್ ಎಂಬುದು ಗೊತ್ತಿರುವುದಿಲ್ಲ. ಮಾಮೂಲಿ ಫೋನಿನ ಹಾಗೆ ಕರೆ ಮಾಡಲು ಮತ್ತು ಸ್ವೀಕರಿಸಲು ಮಾತ್ರ ಅದನ್ನು ಬಳಸುತ್ತಾರೆ. Missed Call ವಿವರಗಳನ್ನು ನೋಡುವುದು, ಕಾಲ್ ಮಾಡಿದವರ ನಂಬರನ್ನು ಸೇವ್ ಮಾಡಿಕೊಳ್ಳುವುದು, ಅಲರಾಂ, ರಿಮೈಂಡರ್, ಕ್ಯಾಲ್ಕುಲೇಟರ್ ಮುಂತಾದ ಸೌಲಭ್ಯಗಳನ್ನು ಉಪಯೋಗಿಸುವುದು ಹೇಗೆಂಬುದನ್ನು ಅವರು ಕಲಿಯುವುದಿಲ್ಲ. ಅವೆಲ್ಲಾ ಬೇಡ. ಮೊಬೈಲ್ ರಿಂಗಿಂಗ್ ವಾಲ್ಯೂಂ ಕಮ್ಮಿ ಮಾಡಬಹುದು ಮತ್ತು ಮೊಬೈಲ್ ಅನ್ನು Silent mode ನಲ್ಲಿ ಇಟ್ಟುಕೊಳ್ಳಬಹುದೆಂಬುದೂ ಅನೇಕರಿಗೆ ತಿಳಿದಿರುವುದಿಲ್ಲ. ಆದ್ದರಿಂದ ಸಭೆ, ಸಮಾರಂಭಗಳಲ್ಲಿ ಯಾರದೊ ಮೊಬೈಲ್ ದೊಡ್ಡ ಸ್ವರದಲ್ಲಿ ರಿಂಗ್ ಆಗುತ್ತದೆ. ಎಲ್ಲರೂ ಅಸಹನೆಯಿಂದ ಅತ್ತ ನೋಡುತ್ತಾರೆ. ಕರೆ ಬಂದವರು ನಿಸರ್ಗದ ಕರೆ ಬಂದವರಂತೆ ಹೊರಗೆ ಓಡುತ್ತಾರೆ!

ಮುಗಿಸುವ ಮುನ್ನ:

ಎಲ್ಲೆಡೆ ಬೀಸುತ್ತಿದೆ
ಆಧುನಿಕತೆಯ ಗಾಳಿ
ಕಾರಣ
ಜಾಗತೀಕರಣ

***– ಎಚ್. ಡುಂಡಿರಾಜ್***



**ಎಚ್. ಡುಂಡಿರಾಜ್**

ಇವರು ೧೯೫೬ ಆಗಸ್ಟ್ ೧೮ ರಂದು ಉಡುಪಿ ಜಿಲ್ಲೆಯ ಹಟ್ಟಿಕುದ್ರು ಎಂಬಲ್ಲಿ ಜನಿಸಿದರು. ಇವರು ಕಲಿತದ್ದು ಕೃಷಿ ವಿಜ್ಞಾನ. ಈಗ ಕಾರ್ಪೊರೇಶನ್ ಬ್ಯಾಂಕಿನಲ್ಲಿ ಮುಖ್ಯ ಪ್ರಬಂಧಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕವಿ, ನಾಟಕಕಾರ, ಅಂಕಣಕಾರ, ನಟ ಹಾಗೂ ಒಳ್ಳೆಯ ವಾಗ್ಮಿಯಾಗಿರುವ ಡುಂಡಿರಾಜ್, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕಡೆಂಗೋಡ್ಲು ಪ್ರಶಸ್ತಿ ಮುಂತಾದ ಹಲವು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಖಿಲಭಾರತ ಸಾಹಿತ್ಯ ಸಮ್ಮೇಳನದ ಹನಿಗವನಗೋಷ್ಠಿ ಹಾಗೂ ಚುಟುಕುಗೋಷ್ಠಿಗಳ ಅಧ್ಯಕ್ಷತೆ ವಹಿಸಿದ್ದಾರೆ. ಆರು ಕವನ ಸಂಕಲನ, ಆರು ಹನಿಗವನ ಸಂಗ್ರಹ, ಆರು ನಾಟಕ ಹಾಗೂ ಎರಡು ಪ್ರಬಂಧ ಸಂಕಲನಗಳನ್ನು ಡುಂಡಿರಾಜರು ರಚಿಸಿರುತ್ತಾರೆ. ಪ್ರಸ್ತುತ ಪಾಠಭಾಗವನ್ನು ಅವರ 'ಪರವಾಗಿಲ್ಲ' ಎಂಬ ಪ್ರಬಂಧ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

- ❒ ಈ ಪಾಠದಲ್ಲಿ ನಿಮಗೆ ಮೆಚ್ಚುಗೆಯಾದ ಭಾಗ ಯಾವುದು? ಸಮರ್ಥಿಸಿ ಬರೆಯಿರಿ.
- ❒ ನಮ್ಮ ದೈನಂದಿನ ಜೀವನದಲ್ಲಿ ತಂತ್ರಜ್ಞಾನದಿಂದಾಗಿ ಆದ ಬದಲಾವಣೆ ಏನೆಂಬುದನ್ನು ಈ ಪಾಠಭಾಗದ ಆಧಾರದಿಂದ ಬರೆಯಿರಿ.
- ❒ ಗ್ರಾಮೀಣ ಕೃಷಿ ಮೇಳದ ಅಂಗವಾಗಿ ನಿಮ್ಮೂರಿನಲ್ಲಿ ನಡೆಯುವ ವಸ್ತು ಪ್ರದರ್ಶನದ ಪ್ರಚಾರಕ್ಕಾಗಿ ಭಿತ್ತಿಪತ್ರವನ್ನು ತಯಾರಿಸಿರಿ.
- ❒ ದೂರದರ್ಶನದ ಕಾರ್ಯಕ್ರಮವನ್ನು ವೀಕ್ಷಿಸಿ ಅಥವಾ ರೇಡಿಯೋ ಕಾರ್ಯಕ್ರಮವನ್ನು ಆಲಿಸಿ ನಿಲಯ ನಿರ್ದೇಶಕರಿಗೆ ಕಳುಹಿಸುವುದಕ್ಕಾಗಿ ಪ್ರತಿಕ್ರಿಯೆಯನ್ನು ಬರೆಯಿರಿ.
- ❒ 'ಮಾಹಿತಿ ತಂತ್ರಜ್ಞಾನದ ಸಾಧಕ ಬಾಧಕಗಳು' ಎಂಬ ವಿಷಯದ ಕುರಿತಾಗಿ ತರಗತಿಯಲ್ಲಿ ನಡೆಯಲಿರುವ ವಿಚಾರಗೋಷ್ಠಿಯಲ್ಲಿ ಮಂಡಿಸಲು ಪ್ರಬಂಧವೊಂದನ್ನು ಬರೆಯಿರಿ.
- ❒ ಅತ್ಯಾಧುನಿಕ, ಪ್ರತ್ಯೇಕ – ಈ ಪದಗಳನ್ನು ಅತಿ + ಆಧುನಿಕ, ಪ್ರತಿ + ಏಕ ಎಂಬುದಾಗಿ ಬಿಂಗಡಿಸಿ ಬರೆಯಬಹುದು. ಇಲ್ಲಿ ನಡೆಯುವ ಸಂಧಿಯನ್ನು ಯಣ್ ಸಂಧಿ ಎನ್ನುತ್ತಾರೆ. ಹೀಗೆ ಬಿಂಗಡಿಸಬಹುದಾದ ಇನ್ನಷ್ಟು ಪದಗಳನ್ನು ಸಂಗ್ರಹಿಸಿ ಬಿಂಗಡಿಸಿರಿ.

* * *



# ಸಂಸ್ಕೃತಿಯ ನಾಡು

(ವೀರಗಾಸೆಯ ಐದು ಮಂದಿ ಪಾತ್ರಧಾರಿಗಳು ಪ್ರವೇಶಿಸುತ್ತಾರೆ)

ಒಬ್ಬ : ಕೇಳಿರಣ್ಣ, ಕೇಳಿರಿ
ಏನ್ ಹೋಗಿ ಏನ್ ಬಂತು
ಎಂಥಾ ಕಾಲ ಬಂದಿತಣ್ಣ,
ಬುದ್ಧ ಬಸವನಂತವರು ಆಗಿಹೋದ್ರಲ್ಲ
ಅಂಥವರ ಮಾರ್ಗದರ್ಶನವನ್ನು ನಾವು,
ಅರ್ಥಮಾಡಿಕೊಳ್ಳದೇ ಇರುವುದರಿಂದ
ಅಜ್ಞಾನ ಅಂಧಕಾರದಲ್ಲಿ ಮುಳುಗಿದ್ದೆವೆಲ್ಲಾ

ಇನ್ನೊಬ್ಬ : ಈ ನಮ್ಮ ನಾಡು
ಪವಿತ್ರತೆಯ ಬೀಡು
ಸಕಲ ದವಸಧಾನ್ಯಗಳು
ಬೆಳೆದಂಥ ಈ ನಾಡು
ಪುಣ್ಯ ನದಿಗಳು ಹರಿವಂಥ ಬೀಡು
ಬಸವಾದಿ ಶಿವಶರಣರು ಜನ್ಮವೆತ್ತ ಈ ನಾಡು







ಶರಣೆ ಅಕ್ಕ ಮಹಾದೇವಿ, ಅಕ್ಕನಾಗಮ್ಮ
ದಾಸವರೇಣ್ಯರು ಜನಿಸಿದ ಈ ನಮ್ಮ ನಾಡು
ಚಿತ್ರದುರ್ಗದ ವೀರ ಮದಕರಿನಾಯಕರಾಳಿದಂಥ ಬೀಡು,
ನುಡಿದಂತೆ ನಡೆದ ಸಂಸ್ಕೃತಿಯ ಬೀಡು

ಮತ್ತೊಬ್ಬ : ಆ ಹಿಂದಿನ ಕಾಲದಲ್ಲಿ ಲಾವಣಿಪದ ಹಾಡ್ತಿದ್ರಲ್ಲ
ಲಾವಣಿ ಪದ ಹಾಡೋವರು ಹೇಗೆ ಹೇಳ್ತಾರ ನೋಡಪಾ.
(ಮತ್ತೆ ವೀರಗಾಸೆ ಕುಣಿತ ಪ್ರಾರಂಭವಾಗುತ್ತಿದ್ದಂತೆ,
ಲಾವಣಿ ಪದದವರು ಕುಣಿತದಿಂದ ಪ್ರವೇಶಿಸುತ್ತಾರೆ
ವೀರಗಾಸೆ, ಕುಣಿತ ಮುಗಿಯುತ್ತಿದ್ದಂತೆ)

ಹಾಡು : *ನಾಡಿನ ಜನರೆಲ್ಲಾ ಲಾಲಿಸಿ ಕೇಳಿರಿ*
*ಕಾಡಿನ ವ್ಯಥೆಯ ನೀವಿಲ್ಲಿ*
*ದೊಡ್ಡ ದೊಡ್ಡ ಮರಗಳು*
*ಗಿಡಮೂಲಿಕೆಗಳು*
*ಬೆಳೆದಾವೋ ನೋಡಿ ಧರೆಯಲ್ಲಿ ।।ಪ।।*
*ದುಷ್ಟ ಜನರೆಲ್ಲಾ ಸೇರಿ*
*ಕಾಡನ್ನು ಕಡಿಕಡಿದು*
*ಹಾಳು ಮಾಡುವರು ನೋಡಿ ನೀವಿಲ್ಲಿ*
*ಮಳೆಯೂ ಇಲ್ಲದೆ ಬೆಳೆಯೂ ಇಲ್ಲದೆ*
*ಹಸಿವುನಿಂದ ಸಾಯ್ತಾರೆ ಜನರೆಲ್ಲಾ.*
(ಲಾವಣಿ ಪದಹಾಡುವವರು ನಿರ್ಗಮಿಸುತ್ತಾರೆ,
ಮತ್ತೆ ವೀರಗಾಸೆ ಪ್ರಾರಂಭಿಸಿ, ಮುಕ್ತಾಯವಾಗುತ್ತದೆ)

ಮೂಢಾ : ಹಾಡ್ತಾರೆ, ಕುಣಿತಾರೆ, ಅಂದ್ರೆ ಹೆಂಗಸ್ವಾಮಿ?

ಮತ್ತೊಬ್ಬ : ಹೊಲದಲ್ಲಿ ಶ್ರಮವಹಿಸಿ
ಬೇಸಾಯ ಮಾಡಿ
ಸಂಜೆ ಹಾಡ್ತಾರೆ ನೋಡಿ
ಭಜನೆ, ಲಾವಣಿಪದ
ಮನಸ್ಸಿಗೆ ನೆಮ್ಮದಿ ಮೂಡಿ
ಯಕ್ಷಗಾನ ಬಯಲಾಟ
ಗೀಗೀಪದ ಹಾಡಿ
ಕೋಲಾಟ ಕಂಸಾಳೆ
ವೀರಗಾಸೆ..... ನೋಡಿ.... (ಪ್ರದರ್ಶನ ವೀರಗಾಸೆ



ಸುತ್ತುವರಿಯುವುದು ವೀರಗಾಸೆ ಮುಗಿದ ಮೇಲೆ)
ಆಗಿನ ಕಾಲದ ಜನ ನೋಡ್ರಿ
ಅವರ ಬದುಕಿನುದ್ದಕ್ಕೂ ಅನುಭವದ
ಬುತ್ತಿ ನೋಡ್ರಿ
ಕಷ್ಟ ಸುಖ ದುಃಖ ದುಮ್ಮಾನಗಳ
ಪಾಡು ನೋಡ್ರಿ
ಆ ಅನುಭವವನ್ನೇ ಹಾಡಿನ ಮುಖಾಂತರ
ಹಾಡ್ತಿದ್ದರು ನೋಡ್ರಿ (ಕುಳಿತುಕೊಳ್ಳುವುದು)
(ವೀರಗಾಸೆ ಪ್ರಾರಂಭ ಕುಣಿತ ಮುಗಿಯುತ್ತಿದ್ದಂತೆ,
ಒಬ್ಬ ರೈತ ಬಂದು ಹಾಡು ಹೇಳುತ್ತಾನೆ)

ಹಾಡು : *ಬೆಳಗಾಗೆ ನಾನೆದ್ದು, ಯಾರ್‍ಯಾರ ನೆನೆಯಲಿ*
*ಎಳ್ಳು ಜೀರಿಗೆ ಬೆಳೆವಂಥ! ಭೂಮಿತಾಯ್ನ*
*ಎದ್ದೊಂದು ಘಳಿಗೆ ನೆನೆದೇನ. (ಹೋಗುವರು)*

ಒಬ್ಬ : ಕೇಳಿದ್ರೇನಪ್ಪಾ? ಹಿಂದಿನ ಜನಾ ಎಷ್ಟೊಂದು ಮಧುರವಾಗಿ ಹಾಡುತ್ತಿದ್ದರು
ಒಳ್ಳೇ ಸಂಸ್ಕೃತಿ ಇತ್ತಪ್ಪಾ ಇವರಿಗೆ! ಎಂಥಾ ಸಂಸ್ಕೃತಿಯನ್ನು ಬಲ್ಲವರವರು

ಮೂಢಾ : ಅಲ್ಲಪ್ಪಾ ಹಿಂದಿನ ಜನರ ಸಂಸ್ಕೃತಿ
ಹೆಂಗಿತಪಾ?

ಇನ್ನೊಬ್ಬ : (ವೀರಗಾಸೆ, ಕುಣಿತ ಪ್ರಾರಂಭ ಮುಗಿಯುತ್ತಿದ್ದಂತೆ)
ಹಿಂದಿನ ನಮ್ಮ ಸಂಸ್ಕೃತಿ ಹೇಗಿತ್ತು ಅಂದರೆ,
ಕಾಯಕವೇ ಕೈಲಾಸ ಆಗಿತ್ತು
ದಯವೇ ಧರ್ಮದ ಮೂಲ ಆಗಿತ್ತು
ನುಡಿದಂತೆ ನಡೆಯುವ ಹಾಗಿತ್ತು
ಸತ್ಯ ಅಹಿಂಸೆಯ ಆಗರವಾಗಿತ್ತು
ನಮ್ಮ ಸಮಾಜ ಭಾವೈಕ್ಯದಿಂದ ಕೂಡಿತ್ತು
ಗುರು ತೋರಿದ ಗುರಿಯಿತ್ತು

ಮೂಢಾ : ಹಾಗಾದರೆ ಈಗಿನ ಸಂಸ್ಕೃತಿ
ಏನಾಗಿದೆಪಾ?

ಇನ್ನೊಬ್ಬ : ಅಯ್ಯೋ ಮೂಢಾ, ಈಗಿನ
ಸಂಸ್ಕೃತಿ ಏನು ಹೇಳನಪಾ.
ಆ ವಿದೇಶಿ ಸಂಸ್ಕೃತಿ ಹಾವಳಿ
ಮಾಡುವ ಅಡಿಗೆಯಿಂದ ಹಿಡಿದು



ಉಂಡು ಮಲಗೋತನಕ

ಕುಡಿಯೋ ನೀರಿನಿಂದ ಹಿಡಿದು

ಬೀರಿನತನಕ

ತಲೆ ಬೋಳಿಸುವುದರಿಂದ ಹಿಡಿದು

ಹಿಪ್ಪಿಕಟ್ಟ್ ಬಿಡೋತನಕ

ನಗರದ ಪಾನ್‌ಶಾಪ್‌ನಿಂದ ಹಿಡಿದು

ಮೆಂತಾಲದ ತನಕ

ಕಡ್ಡಿ ಗೀರೋದ್ರಿಂದ ಹಿಡಿದು

ಬಿಡುವ ಹೊಗೆಯ ತನಕ

ನೋಡೋ ಆಕೃತಿಯಿಂದ ಹಿಡಿದು

ಹಾ.. ಹಾ.. ಕಾರದಲ್ಲಿ ಮುಳುಗೋತನಕ

ಕಲೆಸಂಸ್ಕೃತಿಗಳಿಂದ ಹಿಡಿದು

ಯುವಜನ ಹಾಳಾಗೋತನಕ

ಮೂಢಾ : ಅದೆಂಗ ಹೇಳತಿಯಪಾ?

ಮತ್ತೊಬ್ಬ : ಸಿನಿಮಾ ನೋಡ್ತೀವಿ,

ಮನರಂಜನೆ ಸಾಕಂತೀವಿ

ಸಾಹಿತ್ಯ ರಚನೆ ಬೇಕಂತೀವಿ

ತಿಳಿಲಾರದ್ದು ಬೇಡ ಅಂತೀವಿ

ಅಶ್ಲೀಲ ದೃಶ್ಯಗಳನ್ನ ನೋಡತೀವಿ

ಉಡುಗೆ ತೊಡುಗೆಗಳು ಬೇಕಂತೀವಿ

ವಿಕೃತಕ್ಕೆ ಮಾರುಹೋಗ್ತೀವಿ

ವಯ್ಯಾರದ ಗೊಂಬೆ ಆಗ್ತೀವಿ

ಆಕಾರದಿಂದ ವಿಕಾರವಾಗ್ತೀವಿ

ವಿನಾಶದಿಂದ ಸರ್ವನಾಶವಾಗ್ತೀವಿ

ಮೂಢಾ : ಇಷ್ಟೆಲ್ಲಾ ಹೇಳಿದ್ರಿ, ಹಾಗಾದರೆ ಒಂದು

ನಿದರ್ಶನ ಕೊಟ್ಟು ಹೇಳಬಾರದ?

ಒಬ್ಬ : ಹಂಗಾದ್ರೆ ಕೇಳೋ ಮೂಢಾ....

ಹಿಂದೆ ನಮ್ಮ ಹೆಣ್ಣು ಮಕ್ಕಳು ಹೆಂಗೆ ಇರತಿದ್ರು ಅಂದ್ರೆ....

ಒಬ್ಬ : ಮೈತುಂಬ ಸೀರೆಯನ್ನುಟ್ಟು

ಮೈತುಂಬ ಕುಪ್ಪಸ ತೊಟ್ಟು

ತಲೆತುಂಬ ಹೂವನ್ನು ಮುಡಿದು



ಹಾಡ್ತಾರೆ ಸೋಬಾನೆ ಪದ......

(ವೀರಗಾಸೆ ಕುಣಿತ, ರಂಗದ ಮಧ್ಯ ಇಬ್ಬರು ಹೆಣ್ಣುಮಕ್ಕಳು ಬಂದು ಕುಳಿತುಕೊಳ್ಳುವರು. ಅದು ವೀರಗಾಸೆ ಕುಣಿತ ಮುಗಿಯುತ್ತಿದ್ದಂತೆ)

ಮೂಢಾ : ಆಗಿನ ಹೆಣ್ಣುಮಕ್ಕಳು ಹೆಂಗ
ಈಗಿನ ಹೆಣ್ಣುಮಕ್ಕಳು ಹೆಂಗ,

ಒಬ್ಬ : ಕಾಲಿಗೆ ಚೀಲ
ಮ್ಯಾಲಿಂದ ಅಂಗಿ
ತುಟಿಗೆ ಬಣ್ಣ, ಉಗುರಿಗೂ ಬಣ್ಣ
ಮೇಲೆ ಮುಖಕ್ಕೆ ಸುಣ್ಣ
ಚಪ್ಪಲಿ ಈಟುದ್ದ, ಬಗಲಾಗ ಚೀಲ ಮಾರುದ್ದ

ಇನ್ನೊಬ್ಬ : ಅದಕ್ಕೆ ಶರಣು
ಒಂದು ಮಾತನ್ನು ಹೇಳತಾರೆ
ದುರಾಚಾರವೇ ಸದಾಚಾರವಾಗಿದೆ ಇಂದು
ಆಡಂಬರವೇ ಆಕರ್ಷಣೆಯಾಗಿದೆ ಇಂದು
ಅಪಪ್ರಚಾರವೇ ಪ್ರಚಾರವಾಗಿದೆ ಇಂದು
ಅಸಂಸ್ಕೃತಿಯೇ ಸಂಸ್ಕೃತಿಯಾಗಿದೆ ಇಂದು
ಇಂತಿ ವಿಷಮ ಪರಿಸ್ಥಿತಿಯಲಿ ಬದುಕು
ನರಕವಾಗಿದೆಯಿಂದು

ಮತ್ತೊಬ್ಬ : ಈ ವಿದೇಶಿ ಸಂಸ್ಕೃತಿಯ ಹಾವಳಿಯಿಂದ ದೂರ ಸರಿದು
ನಾವು ಸುಸಂಸ್ಕೃತಿಯಿಂದ ಬಾಳಬೇಕಾದರೆ,
ನಮ್ಮ ಯುವ ಪೀಳಿಗೆ ದುಶ್ಚಟಕ್ಕೆ ಬಲಿಯಾಗದಂತೆ
ನೋಡಿಕೊಳ್ಳಬೇಕಾದರೆ, ಮಕ್ಕಳನ್ನು ಶಿಕ್ಷಣದ
ಕಡೆಗೆ ಗಮನ ಹರಿಸಬೇಕಾದರೆ
ನಮ್ಮ ಪರಂಪರೆ, ಪರಿಸರ, ಸಾಹಿತ್ಯ,
ಸಂಸ್ಕೃತಿ ಕಲೆಗಳನ್ನ ಉಳಿಸಬೇಕು,
ಬೆಳೆಸಬೇಕು ಕೊನೆಯದಾಗಿ ರಕ್ಷಿಸಬೇಕು

ಮೂಢಾ : ಪ್ರೀತಿ ವಾತ್ಸಲ್ಯಗಳು ನಮ್ಮದಾಗಬೇಕು,
ಪವಿತ್ರ ಹೃದಯಗಳು ನಾವಾಗಬೇಕು,
ಶ್ರಮವಹಿಸಿ ದುಡಿದು ಜೀವನ ನಡೆಸಬೇಕು

*– ಶ್ರೀ ಶಿವಮೂರ್ತಿ ಮುರುಘಾ ಶರಣು*



**ಶ್ರೀ ಶಿವಮೂರ್ತಿ ಮುರುಘಾ ಶರಣು**

ಇವರು ಚಿತ್ರದುರ್ಗದ ಶ್ರೀ ಮುರುಘಾಮಠದ ಯತಿಗಳು. "ಜಮುರಾ ಕಲಾವೇದಿಕೆ" ಸಂಸ್ಥೆಯ ಸ್ಥಾಪಕರು. ನಾಡಿನ ತುಂಬ ಶರಣ ಸಂಸ್ಕೃತಿಯ ಕಂಪನ್ನು ಹರಡುತ್ತ, ಬಸವ ಜ್ಞಾನಜ್ಯೋತಿಯನ್ನು ಬೆಳಗುವಲ್ಲಿ ತಲ್ಲೀನರಾಗಿದ್ದಾರೆ. ವರ್ತಮಾನದ ಆಗುಹೋಗುಗಳ ಹಿನ್ನೆಲೆಯಲ್ಲಿ ರಚಿಸಿದ ತಮ್ಮ ರೂಪಕಗಳ ಮೂಲಕ ಜನಸಮುದಾಯಕ್ಕೆ ಶರಣರ ಸಂದೇಶ ತಲುಪಿಸುವ ಕಾರ್ಯವನ್ನು ಮಾಡುತ್ತಿದ್ದಾರೆ. ಅಭಿಮಾನ, ಮಹಾಮಾರಿ, ದಹನ, ಕುಡಿತ, ಶಿವಯೋಗಿಗಳು ಮುಂತಾದವು ಇವರ ರೂಪಕಗಳು.

'ಸಂಸ್ಕೃತಿಯ ನಾಡು' ರೂಪಕವನ್ನು ಇವರ 'ರೂಪಕಲೋಕ' ಎಂಬ ರೂಪಕ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

- ❒ ರೂಪಕದ ಆಶಯವನ್ನು ಗದ್ಯರೂಪದಲ್ಲಿ ಚುಟುಕಾಗಿ ಬರೆಯಿರಿ.
- ❒ ಹಿಂದಿನ ಸಂಸ್ಕೃತಿ ಹಾಗೂ ಇಂದಿನ ಸಂಸ್ಕೃತಿಯ ವ್ಯತ್ಯಾಸಗಳನ್ನು ರೂಪಕದ ಆಧಾರದಲ್ಲಿ ಗುರುತಿಸಿ ಬರೆಯಿರಿ.
- ❒ ಈ ರೂಪಕದ ಪಾತ್ರಗಳನ್ನು ಹಂಚಿಕೊಂಡು ತರಗತಿಯಲ್ಲಿ ಅಭಿನಯಿಸಿರಿ.
- ❒ ಈ ರೂಪಕವನ್ನು ನಿಮ್ಮ ಶಾಲೆಯಲ್ಲಿ ಪ್ರದರ್ಶಿಸುವುದಕ್ಕಿದ್ದೀರಿ. ನಿಮ್ಮ ಗೆಳೆಯ ಅಥವಾ ಗೆಳತಿಯನ್ನು ಈ ಪ್ರದರ್ಶನಕ್ಕೆ ಬರುವಂತೆ ಆಹ್ವಾನಿಸುವುದಕ್ಕಾಗಿ ಪತ್ರವನ್ನು ಬರೆಯಿರಿ.
- ❒ ಕೆಳಗೆ ಕೊಟ್ಟಿರುವ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದದ ಪರ್ಯಾಯ ಪದಗಳನ್ನು ಉಪಯೋಗಿಸಿಕೊಂಡು ಸಾಧ್ಯವಿದ್ದಷ್ಟು ವಾಕ್ಯಗಳನ್ನು ರಚಿಸಿರಿ.

    ಗಿಡಮೂಲಿಕೆಗಳು ಬೆಳೆದಾವೋ ನೋಡಿ <u>ಧರೆ</u>ಯಲ್ಲಿ.

    ನಾಡಿನ ಜನರೆಲ್ಲಾ ಲಾಲಿಸಿ ಕೇಳಿರಿ <u>ಕಾಡಿನ</u> ವ್ಯಥೆಯ ನೀವಿಲ್ಲಿ.

    ತುಟಿಗೆ ಬಣ್ಣ, ಉಗುರಿಗೆ ಬಣ್ಣ ಮೇಲೆ <u>ಮುಖಕ್ಕೆ</u> ಸುಣ್ಣ.

* * *

# ಟಿ.ವಿ. ಇಲ್ಲದ ಮನೆ ಸಂಭ್ರಮ

ಕಳೆದ ಒಂದು ವಾರದಿಂದ ನಮ್ಮ ಮನೆ ಮುಂದಿನ 'ಅಜ್ಜನ ಜಗಲಿ' ಗಿಜಿಗುಟ್ಟುತ್ತಿದೆ. ಕುದುರೆ ಕನ್ನಡಕ ಧರಿಸಿ ಟಿ.ವಿ.ಗೆ ಮುಖಕೊಟ್ಟು ಸಂಜೆಯ ಅಮೂಲ್ಯ ಸಮಯವನ್ನು ಸಾಯಿಸುತ್ತಿದ್ದ ಮಗಳು–ಮಡದಿ ಈಗ ನನ್ನೊಂದಿಗೆ ಜಗಲಿಯಲ್ಲಿ ಕೂತಿದ್ದಾರೆ. ಕಾರಣ, ಒಂದು ವಾರದಿಂದ ನಮ್ಮನೆಯ ಟಿ.ವಿ.ಯಲ್ಲಿ 'ಈ ಟಿ.ವಿ.' ಚಾನೆಲ್ ಬಂದ್ ಆಗಿರುವುದು. ಒಂದು ಚಾನೆಲ್ 'ಬಂದ್' ಆದಾಗ ಅದನ್ನೇ ಅವಲಂಬಿಸುವ ಮನೆಮಂದಿಯ ಒಳಗಡೆ, ಮನೆಯ ಒಳಗಡೆ ಏಕದಂ ಯಾವ ಯಾವ ಬದಲಾವಣೆಗಳು ಆಗುತ್ತವೆ ಎಂಬುದು ಅಧ್ಯಯನ ಯೋಗ್ಯ ಸಂಗತಿ ಎನ್ನುವುದು ಕೇವಲ ಒಂದು ವಾರದಲ್ಲೇ ನನಗೆ ಗೊತ್ತಾಗಿದೆ.



ಹಳ್ಳಿ ಮನೆಗಳಿಗೆ ನುಗ್ಗಿದ ಟಿ.ವಿ. ಅಲ್ಲಿಯ ಸಂಬಂಧ, ಸಾಂಗತ್ಯ, ಸರಸ, ಪಟ್ಟಾಂಗ, ಪ್ರೀತಿ, ಸಾಮರಸ್ಯಗಳ ಮೇಲೆಲ್ಲಾ ನಿಧಾನವಾಗಿ ಸವಾರಿ ಮಾಡಿ, ಸಂಜೆಯ ಹೊತ್ತು ಬಾಗಿಲು ಮುಚ್ಚಿ, ಗಂಡ–ಹೆಂಡತಿ, ಮಕ್ಕಳು ಒಂದೊಂದು ಚೇರ್‌ಗಳಿಗೆ ಅಂಟಿ, ಬರೀ ಟಿ.ವಿ.ಯೊಂದಿಗೆ ಮುಖ–ಮನಸ್ಸು ಸಮೀಕರಿಸಿ ಕಲ್ಲಾಗುವ ಅರ್ಥಾತ್ ಸ್ಮಶಾನವಾಗಿ ಮನೆ ಬದಲಾಗುವುದನ್ನು ನಾನು ಕಂಡಿದ್ದೇನೆ. 20 ಕೆ.ಜಿ. ತೂಕದ ಒಂದು ಯಂತ್ರ ಸಂಬಂಧವನ್ನು ನಾಶಪಡಿಸುವ ರೀತಿ ಇದೆಯಲ್ಲ; ಬರೀ ಕಾರ್ಯಕ್ರಮ–ರಂಜನೆಯನ್ನು ಉತ್ಪಾದಿಸಿ ಸದಾ 'ಆನ್' ನಲ್ಲಿದ್ದು ನಮ್ಮನ್ನು 'ಆಫ್' ಮಾಡುವ ಅಪಾಯ ಇದೆಯಲ್ಲಾ ಇದು ದುರಂತವೇ ಸರಿ.

'ಈ ಟಿ.ವಿ.' ನಿಂತ ಮೇಲೆ ನಾನು, ನನ್ನ ಮಗಳು ಮತ್ತು ಮಡದಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದೇನೆ. ಮಗಳು ನನ್ನೊಂದಿಗೆ ಹೆಚ್ಚು ಬೆರೆಯುತ್ತಾಳೆ. ಮಡಿಲೇರಿ ಕೂತು ಕೀಟಲೆ ಮಾಡಿ ಕಿರಿಕಿರಿ ಮಾಡಿ ಹರಟುತ್ತಾಳೆ. ಅಜ್ಜನ ಜಗಲಿಯ ಮೇಲೆ ಚೆರಿ ಗಿಡದ ಹಣ್ಣು ತಿನ್ನಲು ಬರುವ ಹತ್ತಾರು ಬಗೆಯ ಹಕ್ಕಿಗಳ ಬಗ್ಗೆ ಅವಳಿಗೀಗ ಹೆಚ್ಚು ಗಮನ. ಆ ಹಕ್ಕಿಗಳ ಸ್ವರ, ಆಕಾರ, ಬಣ್ಣಗಳ ಪರಿಚಯ ಮಾಡಿಕೊಡಬೇಕಾದ ಅನಿವಾರ್ಯ ನನ್ನದು. ಚೆರಿ ಮರಕ್ಕೆ ಅಂಟಿಕೊಂಡು ಬೆಳೆದ ಹೂವು ಬಳ್ಳಿಯನ್ನು ಮರದ ತೊಗಟೆಗೆ ಅಂಟಿಸಿ, ಬಳ್ಳಿ ದಿನೇ ದಿನೇ ಮೇಲೇರುವುದನ್ನು ಮಗಳು ಗಮನಿಸುತ್ತಾಳೆ.

ಸಂಜೆ ಹೊತ್ತು ಗುಡ್ಡದ ಏರಿಗೆ ಹೋಗಿ ಗೇರುಬೀಜ ಕೊಯ್ಯಲು ನನಗಿಂತಲೂ ಮುಂಚೆಯೇ ರೆಡಿಯಾಗುವ ಮಗಳು ಬರೀ ಹಸುರು, ಹೂವುಗಳ ಬಗೆಯಷ್ಟೇ ಅಲ್ಲ, ಶಾಲೆ, ಪಠ್ಯ, ಪಾಠಗಳ ಬಗ್ಗೆಯೂ ಪ್ರಶ್ನಿಸಲಾರಂಭಿಸಿದ್ದಾಳೆ. 'ಯಾವ ಧಾರಾವಾಹಿಯಲ್ಲಿ ಯಾರಿಗೆ ಮದುವೆಯಾಯಿತು? ಹೊಸ ಧಾರಾವಾಹಿ ಯಾವಾಗ, ಯಾವುದು ಎಂದೆಲ್ಲಾ ಮಾತನಾಡುತ್ತಿದ್ದವಳು ಈಗ ನಿಧಾನವಾಗಿ ನೆಲದ ಮೇಲೆ, ಹಸುರಿನ, ವಾಸ್ತವದ ಬಗ್ಗೆ ಮನಸ್ಸು ಬದಲಾಯಿಸಿದ ಪರಿ ನೋಡಿದ್ರೆ ಟಿ.ವಿ. ಖಾಯಂ ಆಗಿ ಸಾಯಲಿ ಎಂದು ಬಯಸುವಂತಾಗಿದೆ.'

ಮಡದಿಯೂ ಹಾಗೆಯೇ. ವೆನಿಲ್ಲಾ ಪರಾಗಸ್ಪರ್ಶ, ತೋಟಕ್ಕೆ ನೀರು, ಹಸುವಿನ ಹಾಲು ಕರೆಯುವುದು – ಎಲ್ಲವೂ ಸಾಂಗವಾಗಿ ನಡೆಯುತ್ತಿದೆ. ಟಿ.ವಿ.ಯ ಅಡುಗೆ ಕಾರ್ಯಕ್ರಮ ಮಿಸ್ ಆದ ಮೇಲೆ ನಮ್ಮ ಮನೆಯ ಅಡುಗೆ ಹೆಚ್ಚು ರುಚಿಯಾಗುತ್ತಿದೆ. ಈ ರುಚಿ ಜಾಸ್ತಿಯಾಗಲು ಇನ್ನೊಂದು ಕಾರಣ ನಾವೀಗ ಜತೆಯಲ್ಲೇ ಕೂತು ಊಟಮಾಡುತ್ತೇವೆ. ಈಗ ಊಟದ ವೇಳೆ ಯಾವುದೇ ಧಾರಾವಾಹಿಯಲ್ಲಿ ಯಾರಿಗೋ ಮದುವೆಯಾದ ವಿಷಯಕ್ಕಿಂತ ಬೇರೆ ನಮ್ಮ ಮನೆಯ ವಿಷಯಗಳೇ ಮಾತಿಗೆ ವಸ್ತುವಾಗುತ್ತವೆ. ಬಾಬಣ್ಣ ಪುತ್ತೂರಿನಲ್ಲಿ ನಡೆಸಿದ ಕಂಬಳದ ಕತೆಯಿರಬಹುದು, ದೇರ್ಲದ ಭೂತದ ಮನೆಯ ಅಂಗಳ – ಚಾವಡಿಯ ಕತೆಯಿರಬಹುದು. ಎಲ್ಲವೂ ಮಾತುಕತೆಗೆ ಲಭ್ಯವಾಗುತ್ತವೆ. ಟಿ.ವಿ. ನೋಡುತ್ತಾ ಊಟಮಾಡುವಾಗ ಕೈಬಾಯಿ ಯಂತ್ರದಂತೆ ಕೆಲಸ ಮಾಡುತ್ತಿತ್ತು. ಬದುಕಲು ತಿನ್ನುತ್ತಿದ್ದೇವೆ. ಈಗ ಊಟದ ಸೊಗಸು ಹರಟೆಯ ಮೂಲಕ ಇಮ್ಮಡಿಯಾಗಿದೆ.

ಟಿ.ವಿ. ಒಂದೇ ಅಲ್ಲ, ನಮ್ಮ ಮನೆತುಂಬುವ ಆಧುನಿಕ ಪರಿಕರಗಳು ನಮ್ಮ ದೇಹ – ಮನಸ್ಸು ಎರಡನ್ನೂ ಹೇಗೆ ನೊಣೆಯುತ್ತವೆ ಎಂಬುದರ ಕಡೆಗೆ ಗಮನ ಕೊಡಬೇಕಾದ ಕಾಲ ಬಂದಿದೆ. "ನೀನು ದೇಸೀ ದೇಸೀ ಅನ್ನು, ಕೊನೆಗೆ ಗೆಲ್ಲುವುದು ನಮ್ಮ ಜಾಗತೀಕರಣವೇ" ಗೆಳೆಯನೊಬ್ಬ ಅನ್ನುತ್ತಿದ್ದ ಮಾತು ನೆನಪಾಗುತ್ತದೆ. ಹೊಸಮನೆ



ಕಟ್ಟುವಾಗ ಹಳೆಯ ಪರಿಕರಗಳೆಲ್ಲಾ ಅಟ್ಟ ಸೇರುತ್ತವೆ.

ಈಗಲೂ ಅಜ್ಜನ ಜಗಲಿಯಲ್ಲಿ ಕೂತವರಿಗೆ ಮಾತ್ರ 'ಅಟ್ಟ' ಕಾಣಿಸಬಹುದು. ಯಾಕೆಂದ್ರೆ ಜಗಲಿ ಇರುವ ಮನೆಯಲ್ಲಿ ಮಾತ್ರ ಅಟ್ಟ ಇರುತ್ತದೆ. ಅಟ್ಟಕ್ಕೂ, ಜಗಲಿಗೂ ನೇರ ಸಂಬಂಧವಿದೆ. ಒಂದು ತೆರೆದ, ಇನ್ನೊಂದು ತೆರೆಯದ ಜಗತ್ತು. ಒಂದು ಕಡೆ ಎಲ್ಲವೂ ಕಾಣಿಸುತ್ತದೆ. ಬಹಳ ಮುಕ್ತ ಅದು. ಇನ್ನೊಂದು ಕಾಣಿಸದ ನಿಗೂಢ ಜಗತ್ತು. ಬಾಲ್ಯದ ಬಹುಕಾಲ ನಮಗೆ ಅಟ್ಟಕ್ಕೆ ಹತ್ತಲಾಗುವುದೇ ಇಲ್ಲ. ಬಿದಿರು ಅಥವಾ ಮರದ ಏಣಿ ನಮ್ಮನ್ನು ತಡೆಯುತ್ತದೆ. ನೋಡಲಾಗದ ಆ ಅಟ್ಟದ ಬಗ್ಗೆ ಕುತೂಹಲ ಜಾಸ್ತಿ. ದಿನಾ ಅಜ್ಜ, ಅಪ್ಪ, ಅಮ್ಮ ಆ ಅಟ್ಟಕ್ಕೆ ಹತ್ತಿ ಏನೇನೋ ಹೊತ್ತು ತರುತ್ತಾರೆ. ನಾವು ಅವರೆಗೆ ನೋಡದ, ಕೇಳದ ವಸ್ತುಗಳವು. ಅಟ್ಟದಲ್ಲಿ ಅಂಥ ಇನ್ನೆಷ್ಟೋ ವಸ್ತುಗಳು ಇರಬಹುದು ಎಂದು ನಾವು ಕಲ್ಪಿಸುತ್ತೇವೆ. ಆ ಕಲ್ಪನೆ ಅದ್ಭುತವಾಗಿ ಬೆಳೆಯುತ್ತಾ ಹೋಗುತ್ತದೆ. ಜತೆಗೆ ಅದನ್ನು ಪ್ರವೇಶಿಸಬೇಕು. ನೋಡಲೇಬೇಕೆಂಬ ತವಕ ಕೂಡಾ. ನಾವು ಪ್ರಯತ್ನಿಸುತ್ತೇವೆ. ಮೊದಲ ದಿನ ಒಂದು ಹೆಜ್ಜೆ, ಮರುದಿನ ಎರಡನೆಯ ಹೆಜ್ಜೆ, ಏಣಿಯ ಮೇಲೆ ಒಂದೊಂದೇ ಕಾಲಿಡುತ್ತೇವೆ. ಏಣಿ, ಅಟ್ಟ, ಅಟ್ಟದಲ್ಲಿ ಇರುವ, ಇಲ್ಲದ ಎಲ್ಲವೂ ನಮ್ಮನ್ನು ಏರಲು, ಹತ್ತಲು ಕಲಿಸುತ್ತವೆ.

ಈಗ ನನ್ನ ಮನೆಯಲ್ಲಿ ಅಟ್ಟ ಇಲ್ಲ. ಹತ್ತುವ ಏಣಿಯೂ ಇಲ್ಲ. ಆದುದರಿಂದ ಮಗಳಿಗೆ ನಿತ್ಯ ಕಾಡಬಹುದಾದ ನಿಗೂಢ, ಕುತೂಹಲದ ಜಗತ್ತೊಂದು ಇಲ್ಲವಾಗಿದೆ. ನನ್ನ ಕಾಲದಲ್ಲಿದ್ದ ಅಟ್ಟ ಮಗಳ ಕಾಲಕ್ಕೆ ಮರೆಯಾಗಿದೆ. ಎಲ್ಲವೂ ಹೀಗೆಯೇ. ಬರೀ ಅವುಗಳನ್ನೆಲ್ಲಾ ನೆನಪಿಸಿಕೊಳ್ಳುವುದೇ ಇಂದಿನ ಸುಖ. ಅಜ್ಜನ ಜಗಲಿಯಲ್ಲಿ ಕೂತು ಇಂದು ಬರೀ ಅಟ್ಟದ್ದೇ ಕತೆ. 'ಈ ಟಿ.ವಿ.' ಇಲ್ಲದ ಕಾರಣ ಮಗಳಿಗಾಗಿ ನಾಳೆ ನನಗೆ ಇನ್ನೊಂದು ಕತೆ ಬೇಕಾಗಿದೆ. 'ಅಜ್ಜನ ಜಗಲಿ'ಯ ಸಾಧ್ಯತೆಯೇ ಅದು. ಖಂಡಿತಾ ಅಲ್ಲಿ ಹೊಸಕತೆ ಹುಟ್ಟುತ್ತದೆ.

***– ನರೇಂದ್ರ ರೈ ದೇರ್ಲ***

### ನರೇಂದ್ರ ರೈ ದೇರ್ಲ

ಇವರು ೧೯೬೪ ಅಕ್ಟೋಬರ್ ೧೪ ರಂದು ಪುತ್ತೂರಿನ ಕೆಯ್ಯೂರು ಗ್ರಾಮದ ದರ್ಬೆ ಎಂಬಲ್ಲಿ ಜನಿಸಿದರು. ಇವರು ಸುಳ್ಯ ತಾಲೂಕಿನ ಬೆಳ್ಳಾರೆಯ ಡಾ. ಕೋಟ ಶಿವರಾಮಕಾರಂತ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ದುಡಿಯುತ್ತಿದ್ದಾರೆ. ಕೃಷಿ ಮತ್ತು ಪರಿಸರದಲ್ಲಿ ಅಪಾರ ಕಾಳಜಿ ಹೊಂದಿರುವ ಇವರು 'ಸಾವಯವ ಕೃಷಿ', 'ಬೊಗಸೆ ತುಂಬಾ ಬೀಜ', 'ಕಾಂಕ್ರೀಟ್ ಕಾಡಿನ ಪುಟ್ಟ ಕಿಟಿಕಿ' ಮುಂತಾದ ಪರಿಸರ ಪರ ಕೃತಿಗಳನ್ನು ರಚಿಸಿದ್ದಾರೆ. 'ಬೇಟೆ ಮತ್ತು ಸಾಹಿತ್ಯ' ಎಂಬ ಇವರ ಪ್ರೌಢ ಪ್ರಬಂಧಕ್ಕೆ ಮಂಗಳೂರು ವಿಶ್ವವಿದ್ಯಾನಿಲಯವು ಡಾಕ್ಟರೇಟ್ ಪದವಿಯನ್ನು ನೀಡಿದೆ.

'ಟಿ.ವಿ. ಇಲ್ಲದ ಮನೆ ಸಂಭ್ರಮ' ಪಾಠಭಾಗವನ್ನು ಅವರ 'ನೆಲದವರು' ಕೃತಿಯಿಂದ ಆಯ್ದುಕೊಳ್ಳಲಾಗಿದೆ.



- ‘ಹೊಸಮನೆ ಕಟ್ಟುವಾಗ ಹಳೆಯ ಪರಿಕರಗಳೆಲ್ಲಾ ಅಟ್ಟ ಸೇರುತ್ತವೆ’ ಈ ಮಾತಿನ ಹಿನ್ನೆಲೆಯಲ್ಲಿ ಈ ಲೇಖನವನ್ನು ವಿಶ್ಲೇಷಿಸಿ ಒದಿನ ಟಿಪ್ಪಣಿಯನ್ನು ತಯಾರಿಸಿರಿ.
- ದೂರದರ್ಶನದಲ್ಲಿ ಸುದ್ದಿ ಪ್ರಸಾರಕ್ಕಾಗಿ ದಿನಪತ್ರಿಕೆಯೊಂದರ ಸಹಾಯದಿಂದ ಒಂದು ವಾರ್ತಾ ಮಾದರಿಯನ್ನು ತಯಾರಿಸಿ ತರಗತಿಯಲ್ಲಿ ಮಂಡಿಸಿರಿ.
- ಜನಜೀವನದಲ್ಲಿ ಸಮೂಹ ಮಾಧ್ಯಮದ ಪ್ರಭಾವದಿಂದ ಏನೆಲ್ಲಾ ಬದಲಾವಣೆಗಳಾಗಿವೆ ಎಂಬುದರ ಬಗ್ಗೆ ನಿಮ್ಮ ಮನೆಯಲ್ಲಿರುವ ಅಥವಾ ಪರಿಸರದಲ್ಲಿರುವ ಹಿರಿಯರಿಂದ ಮಾಹಿತಿ ಸಂಗ್ರಹಿಸಿರಿ.

***



# 2

# ನಾಗರಿಕತೆಯ ಅಂಚು

## ನಾಗರಿಕತೆಯ ಅಂಚು

ನಗರಗಳು ಬೆಳೆಯುತ್ತಿವೆ ಅಣಬೆಯಂತೆ,
ತಪ್ಪು ಒಪ್ಪುಗಳು ಯಾರಿಗಿದೆ ಚಿಂತೆ?

ಮರಗಳ ಕಡಿದು, ಬಂಡೆಗಳ ಒಡೆದು,
ಕಟ್ಟುತ್ತಿದ್ದೇವೆ ನಾವು ದುಡಿದೂ ದುಡಿದು,
ನಡೆಯುತಿದೆ ಸೆಣಸಾಟ ನಿಸರ್ಗದ ಜತೆ
ಇದು ನಮ್ಮಂಥ ವಿಮುಖಿಗಳ ಕಥೆ!

ಮಹಡಿಗಳೆಷ್ಟಾದರೇನು ಬೆಟ್ಟದೆತ್ತರವೆ?
ಊರು ದೊಡ್ಡದಾದರೇನು ಸಾಗರಕೆ ಉತ್ತರವೆ?
ಎಷ್ಟು ಬೆಳೆದರೆ ಏನು ಕುಬ್ಜರಲ್ಲವೆ ನಾವು?
ಊರ ಕಟ್ಟುವ ಭರದಲ್ಲಿ ಗೋರಿ ಕಟ್ಟಿದೆವು!

ನಾವಿಂದು ನಿಸರ್ಗದೆದುರು ಮುಖಾಮುಖಿ,
ನಡೆಯುತ್ತಿದೆ ಬಾಣ ಬಿರುಸಿನ ಚಕಮಕಿ,
ನಾಗರಿಕತೆಯ ಅಂಚಿನಲಿ ಕಾಲಿಟ್ಟಿದ್ದೇವೆ ನಾವು,
ಮೇಯೋಣ ಈಗಲೇ ಚಿಂತನೆಯ ಮೇವು.

**– ಎಸ್. ಕೃಷ್ಣಮೂರ್ತಿ**

❐ ಮೇಲಿನ ಕವನದ ಆಶಯದ ಕುರಿತು ನಿಮ್ಮ ಅಭಿಪ್ರಾಯವನ್ನು ಬರೆದು ಮಂಡಿಸಿರಿ.

# ಸಾಕವ್ವನ ಕೋಳಿ

ಸಾಕವ್ವನ ನಾಕು ಕಂಬದ ತೊಟ್ಟಿ ಹಟ್ಟಿ ಅನ್ನೋದು ದೇಹವ ಭೂಮಿಗೆ ಇಳಿಬಿಟ್ಟು ಹಂಚು ಹುಲ್ಲು ತೆಂಗಿನಗರಿಯ ಅರರೆ ಮುಸುಡಿ ಮಾಡಿಕೊಂಡು ನಿಂತಿತ್ತು. ಆ ಹಟ್ಟೀಲಿ ಯಜಮಾನಿ ಸಾಕವ್ವ, ಮೂಗಿನ ತುದೀಲಿ ಬಿಂಕಿಕೆಂಡ ಇಟುಗೊಂಡು ಉರಿಯೂತ ಕೂತಿದ್ದಳು. ಅವಳು ಕುಳಿತಿದ್ದರೂ ಸಪೋರ್ಟಿಗಾಗಿ ತನ್ನ ಚಕಳದ ಕಯ್ಯನ್ನು ನೆಲಕ್ಕೆ ಚೆಲ್ಲಿದ್ದಳು. ಸಾಕವ್ವನ ಚರುಮಕ್ಕೂ ಮೂಳೆಗೂ ಹೊಂದಾಣಿಕೆ ತಪ್ಪಿತ್ತಾದ್ದರಿಂದ ಮಯ್ಯ ಚರುಮಗಳು ಸ್ವತಂತ್ರವಾಗಿ ಅಲ್ಲಾಡುತ ತಮ್ಮಷ್ಟಕ್ಕೆ ತಾವಿದ್ದವು. ಅವಳ ನಡುವಾಗಿದ್ದ ಆಸರೆಗೋಲು ತಬ್ಬಲಿಯಾಗಿ ಮುಂದೆ ಬಿದ್ದಿತ್ತು. ಆ ಕೋಲಿಗೆ, ನೊಣಗಳು ಸಾಕವ್ವನನ್ನೂ ಕೇರು ಮಾಡದೆ ಗುಂಪುಕಟ್ಟಿ ಧಾಳಿಮಾಡುತ್ತಿದ್ದವು.

ಮುಖ್ಯ, ಅವಳ ಖಾಸ ಹುಂಜವೊಂದು ನೆನ್ನೆ ಹಟ್ಟಿ ಬಿಟ್ಟದ್ದು ಇಂದಾದರೂ ಬಾರದೆ ಚಕಿತಗೊಳಿಸಿತ್ತು. ಅದು ದೇವರಿಗೆ ಬುಟ್ಟುದ್ದಾದ್ದರಿಂದ ಅಂಥ ಅಪಶಕುನಕ್ಕೇನು ಎಡೆ ಇರಲಿಲ್ಲ. ರಾತ್ರಿ ಎಲ್ಲೊ ಕುಂತದೆ; ಈಗಲ್ಲದಿದ್ದರೂ



ಇನ್ನೊಂದು ಗಳಿಗೆಗೆ ಬತ್ತದೆ ಎಂಬೊ ಆಸೆ ನೆನ್ನೆ ತುಂಬಾ ಅವಳ ಸುತ್ತಾಡಿತ್ತು. ಹಾಗೂ ತನ್ನ ಮನೆದೇವತೆ ತನ್ನ ದುಡ ಪರಿಕಿಸುತಿರಬಹುದೆನ್ನಿಸಿ ಆಗ ಸಾಕವ್ವನ ಹಠವೂ ಹೆಚ್ಚುತ್ತಿತ್ತು. ಕೈಲಾಗದ ಮುದುಕಿ ತಾನು ಬವಣೆಪಡುತ್ತಿದ್ದರೂ ತನ್ನ ಮಕ್ಕ ಮೊಮ್ಮಕ್ಕ ಸೊಸೇರು ಇದೇನ ಅನ್ನದಿರೋದ ಕಂಡು ಅವಳ ದುಕ್ಕಿ ಒಳಗಿಂದ ಉಕ್ಕಿಬರುತ್ತಿತ್ತು. ಸಾಕವ್ವ ಆ ರಾತ್ರೀಲಿ ಎಡವಿ ತಡವರಿಸಿ ಕೊಕ್ ಕೊಕ್ ಎಂದು ಬೀದಿಬೀದೀಲಿ ಕರ್ದು ಅತ್ತು ಊರೆಲ್ಲ ಮಲಗಿದ ಮೇಲ ಹಟ್ಟಿಗೆ ಬಂದು ಉಸ್ಸೋ ಎಂದು ಕಾಲುನೀಟಿ ಕೂತುಕೊಂಡಳು. ಯಾರೂ ಇದ್ಯಾಕ ಅನ್ನಲಿಲ್ಲ. ಅವಳು ಆ ರೀತಿಯಾಗಿ ಇರಲು ನಿದ್ರಾದೇವಿ ಬೇಜಾರಲಿ ಬಂದು ಸಾಕವ್ವನ ಕಣ್ಣುಗಳ ಸವುರಿ ಮಾಯವಾದಳು.

ಊರು ಕಣ್ಬುಡುವ ಮೊದಲು ಕಣ್ಣುಬಿಟ್ಟ ಸಾಕವ್ವನ ಜೀವವು ಹುಂಜನ ಕಾಣಲು ಪತರಗುಟ್ಟಿತು. ಯಾವ ಮಾಯದಲ್ಲಾದರೂ ಹುಂಜನು ರಾತ್ರೀನೆ ಬಂದಿರಬಹುದಾ ಅನ್ನಿಸಿ ಕಣ್ಬೆಳಕು ಕಾಣುವವರೆಗೂ ಕಣ್ಣೋಡಿಸಿದಳು. ಕಾಣದೆ, ಹಟ್ಟಿ ತುಂಬಾ 'ಬಾ... ಬಾ..., ಕೊ... ಕೊ' ಅನ್ನುತ ನಡೆದಾಡಿದಳು. ಹಟ್ಟೀಯ ಬಲಮೂಲೆ ನೆರಕೇಲಿ ಮಲುಗಿದ್ದ ಅವಳ ದೊಡ್ಡ ಮಗ ಕಾಳಣ್ಣನಿಗೆ ಅವರವ್ವನ ಕೊರಕೊರದಿಂದಾಗಿ ನಿದ್ದೆ ಮುರುದು ತಡೆಯಲಾರದೆ 'ಅವ್ವೌ ಹೊತ್ಮೂಡ್ಲಿ. ಈಗ ಮಲಿಕ್ಕೊ' ಅಂದನು. ಸಾಕವ್ವನ ಸುಮ್ಮನಿದ್ದ ನರವಾಗಿದ್ದ ನರಗಳೆಲ್ಲ ಎದ್ದು ನೆಗೆದಾಡತೊಡಗಿದವು. ಸಾಕವ್ವ 'ಏನಂದೆ ಕಂದಾ! ಹೊತ್ಮೂಡಲಿ ಅಂದ್ಯ. ಹೊತ್ಮೂಡಿ ಏಡು ಮಾರು ಬಂದ್ರೂನು ನೀನು ಏಳ್ದೆ ಇದ್ದುದಕ್ಕಲ್ಲ ನನ್ನ ಹಟ್ಟಿ ಮೂರು ಪಾಲಾದ್ದು....' ಎಂದು ಮಾತು ಮುಗಿಸಿ ಹಣೆಚಚ್ಚಿಕೊಳ್ಳುವುದನ್ನು ಮುಂದುವರಿಸಿದಳು.

'ಇನ್ನು ಮಾತಾಡಿದರೆ ಮಾತು ಬೆಳೆಯುತ್ತದೆ' ಅಂದುಕೊಂಡು ಕಾಳಣ್ಣನ ದಿಕ್ಕಿನಿಂದ ಮಾತು ಏಳಲಿಲ್ಲ. ಅವುನು ಮಲಗಿದಂತೆ ಮಾಡಿದನು. ಅವ್ವ ಅಣ್ಣಂದಿರ ಮಾತಿಗೆ ಕಿರುಮನೆಯ ಎರಡನೆಯ ಮಗ ಸಣ್ಣಯ್ಯನೂ ಕಣ್ಬಿಟ್ಟು ಹೆಡ್ತಿ ಪಿಸುಗುಟ್ಟಲು ಕಣ್ಣುಚ್ಚಿದನು. ಸಣ್ಣಯ್ಯನ ಮೂರು ಮಕ್ಕಳು ಒಂದರ ಕಾಲ ಇನ್ನೊಂದರ ಮೇಲಾಕಿ ಬಿದ್ದಿದ್ದವು. ಅವುಗಳ ಹೊದ್ದಿದ್ದ ಹೊಸ ದುಪ್ಪಟಿ, ಮೂವರನ್ನೂ ಹೊದ್ದುಕೊಳ್ಳಲು ತನ್ನ ಶಕ್ತಾನುಸಾರ ಯತ್ನಿಸುತಿತ್ತು. ಇನ್ನೊಂದು ಕೈಗೂಸು ಅವ್ವ ಚಲುವಮ್ಮನ ಎದೆ ಹೊಟ್ಟೆಗಂಟಿ ಬೆಚ್ಚಗಿತ್ತು.

ಇತ್ತ ನಡುಮನೇಲಿ ಸಾಕವ್ವನ ದೊಡ್ಡಮಗಳು ಗೌರಮ್ಮನ ರೋಗಿಷ್ಠ ಮಗ ಗೋಡೆಗಂಟಿಕೊಂಡು ಬಿಳಿ ದುಪ್ಪಟಿ ಹಾಸ್ಕೊಂಡು ಅದೇ ದುಪ್ಪಟಿಯ ಹೊದ್ಕೊಂಡು ಮಲಗಿತ್ತು. ಅದರ ಪಕ್ಕವೆ ಅದರವ್ವ ಗೌರಮ್ಮ ಅವುಳುದ್ದ ಅವಳಗಲದ ಚಾಪೇಲಿ ಒಂದು ಹಳೆ ಸೀರೆ ಹೊದ್ದು, ಒಂದು ಕಯ್ಯ ಮಗನ ಮೇಲಾಕಿ ಮಲಗಿದ್ದಳು. ಅಲ್ಲೆ ಇನ್ನೊಂದು ಮೂಲೇಲಿ ಹಾಸಿದ್ದ ಹಳೆಮಂದಲಿಗೆ ಮೇಲೆ ಗೌರಮ್ಮನ ತಂಗಿ ಪುಟ್ಟ ಗೌರಿ, ಅವಳಿಗಂಟಿ ಗೌರಮ್ಮನ ಕಿರೀಮಗ ಮೂರನೆ ಕ್ಲಾಸಿನ ಶಿವೂ ಇಬ್ಬರೂನು ಒಂದು ದುಪ್ಪಟಿ ಹೊದ್ದು ಮಲಗಿದ್ದರು.

ಶಿವೂನ ಅವ್ವ ಗೌರಮ್ಮನ ಗಂಡನು ಊರೂರು ಅಲೆಯಲಾರಂಭಿಸಿದ ಲಾಗಾಯ್ತು ಅವುಳು ತನ್ನ ತೌರಿಗೆ ಬಂದು ನೆಲೆಗೊಂಡಿದ್ದಳು. ಅವಳ ಗಂಡನೊ, ಮೂರು ತಿಂಗಳಿಗೊಮ್ಮೆ ಆರು ತಿಂಗಳಿಗೊಮ್ಮೆ ಬಂದು ಮೊಖ ತೋರಿಸಿ ಪುಡಿಗಾಸ ಕೊಟ್ಟು ಮಾಯವಾಗುತ್ತಿದ್ದನು. ಇಲ್ಲಿ ಗೌರಮ್ಮ ಕೂಲಿನಾಲಿಗೆ ಹದ್ದಿನಂತೆ ಕಾಯ್ತ ಸಿಕ್ಕಿದ್ದು ತಂದು ತನ್ನ ಇರೋ ಏಡು ಹೈಕಳ ಹೊಟ್ಟೆಗಾಕುತ ಪಾಡುಪಡುತ್ತಿದ್ದಳು. ತಂಗಿ ಪುಟಗೌರಿ ಕಿರಿಯವಳು, ಮದುವೆಗೆ ಬಂದು ಅಣಿಯಾಗಿ ನಿಂತಿದ್ದಳು. ಅವಳ ಕಯ್ಯಿಗೆ ಬಂದ ಕೂಲಿ ಅವುಳು ಅವಳವ್ವನ ಬಾಯಿಗಾಗುತ್ತಿತ್ತು. ಕೂಲಿ ಸಿಗದೆ ಅವಳು ಕೈಚೆಲ್ಲಿ ಕುಂತಲ್ಲಿ, ಶಿವೂನ ಹರಿದ ಅಂಗಿಚಡ್ಡಿ ಬ್ಯಾಗು ಹೊಲಿಯೋದು ಆ ಬಟ್ಟೆ ವಗ್ದು ಮಡ್ಸಿ ತಲೆಗಿಟ್ಟು ಇಸ್ತ್ರಿ ಮಾಡೋದು ಮಾಡುತ್ತಿದ್ದಳು. ದಿನಾಲು ಶಿವೂನ ಮೊಖ ತೊಳೆದು ಕರಾಪು ಬಾಚಿ ಕೂದಲಿಗೆ ಕುಪ್ಪೆ ಕೂರಿಸಿ ಹಣೆಗೆ ಕಪ್ಪಿಟ್ಟು ಇಸ್ಕೂಲಿಗೆ ರಡಿ ಮಾಡುತ್ತಿದ್ದಳು.

ಇನ್ನು ಉಳಿದವನು ಗುರುಸಿದ್ದು, ಸಾಕವ್ವನ ಕಿರೀ ಮಗ. ಅವನ ಪಾಲಿಗೇ ನಡುಮನೆ ಸೇರಿದ್ದುದು. ಅವುನು



ಮನೆಗೆ ನೆಂಟನಂತಿದ್ದು ಮಾರಿಗುಡೀನ  ತನ್ನ ವಾಸಸ್ಥಾನವಾಗಿ ಮಾಡಿಕೊಂಡಿದ್ದನು. ಊರೂರು ಸುತ್ತುತ್ತ, ಹಾಲಿ ಗಾರೆ ಕೆಲಸ ಮಾಡುತ್ತಿದ್ದನು. ರೇಷ್ಮೆ ಗೂಡಿನ ಯಾಪಾರ ಮಾಡಿ, ಚಿಲ್ಲರೆ ಅಂಗಡಿ ಇಟ್ಟು, ದನದ ದಳ್ಳಾಳಿಯಾಗಿ ಈಗ ಗಾರೆಕಲಸದಲ್ಲಿ ನಿಂತಿದ್ದನು. ಕೈಲಿ ಕಾಸಿದ್ದಾಗ ಅವ್ವನ ಎಲೆ ಅಡಕೆಗೂ ಕೊಡುತ್ತಿದ್ದನು. ಏಡುಬೇಳೆ ಪೈರಿನಿಂದಲೂ ಅವನಿಗೆ ಗುಂಪು ನಾಟಕ ಅನ್ನೋವು ತಲೆಗಂಟಿ ಈಗ ದಾನಸೂರಕರ್ಣದಲ್ಲಿ ಕರ್ಣನ ಮಗನ ಪಾರ್ಟು ಮಾಡುತ್ತಿದ್ದನು. ಅವನು ಮಾಮೂಲಿಯಾಗಿ ಮಾರೀಗುಡಿಯಲ್ಲಿ ಮಲಗಿದ್ದನು.

ಬೆಳಕು ಕತ್ತಲಿಗೆ ಬೆರೆತುಕೊಳ್ಳುತ್ತಿದ್ದ ಆಗ, ಹೊರ ಬಂದು ಸಾಕವ್ವ ತನ್ನ ಹುಂಜ ನಿಲ್ಲುತ್ತಿದ್ದ ಕೂರುತ್ತಿದ್ದ ಜಾಗವ ಕಣ್ತುಂಬಿ ನೋಡಿದಳು. ಅಂಥದೇನೂ ಕಾಣದೆ ಅವುಳು ಹೀಗೆ ನಾಕಾರು ಸಲ ಎಟತಾಕುತಿರಲು ಬೆಳಕಾಯ್ತು. ಒಳಗಿರೊ ಕೋಳಿಗಳಾರು ತನ್ನ ಹುಂಜನ ಕರೆತರಬಹುದೆಂದು ಪಂಜರವ ಎತ್ತಲು ಇದ್ದ ಬದ್ದ ಕೋಳಿಗಳು ಎಂದಿನಂತೆ ಉತ್ಸಾಹದಿಂದಲೆ ಹಾರ್‍ತ ಹೊರಹೋದವು. ಯಾವುದರ ಮೊಖದಲ್ಲು ದುಕ್ಕದುಗುಡ ಕಾಣದೆ ಸಾಕವ್ವನಿಗೆ ಎತ್ತಿ ಕುಕ್ಕಿದಂತಾಯ್ತು. 'ಅಯ್ಯೋ ಪಾಪಿ ನನ್ಮಕ್ಕಳಾ' ಎಂದು ಹತ್ತಾರು ಸಲ ಅಂದುಕೊಂಡಳು.

ಆಗಲೇ ಎದ್ದು ಎರಡನೆ ಮಗ ತೊಟ್ಟೀಲಿ ಹಲ್ಲುಜ್ಜುತ್ತಿದ್ದನು. ಸಣ್ಣಯ್ಯ, ಅವ್ವ ಆ ಕಡೆ ಬಂದರೆ ಈ ಕಡೆ ಮೊಖ ತಿರುವುತ್ತ, ಅವ್ವ ಈ ಕಡೆ ಬಂದರೆ ಆ ಕಡೆ ಮೊಖ ತಿರುವುತ್ತ ಯಾವ ಪಟ್ಟಿಗೂ ಸಿಗದೆ, ತಾನು ತನ್ನ ಕೆಲಸ ಅನ್ನುವಂತಿದ್ದನು. ಸಾಕವ್ವ ಒಂದು ಸಲ ತೊಟ್ಟಿಗೆ ಕ್ಯಾಕರಿಸಿ ಉಗುದು ಹೊರಬಂದು ಅಂಗಳದಲಿ ನಿಂತಳು.

ಅಂಗಳದಲ್ಲಿ ನಿಂತಂಥ ಸಾಕವ್ವನ ಕಣ್ಮುಂದೆ ಅವಳ ಹುಂಜನ ಅಂದಚಂದವು ಓಡಾಡಿತು. ಯಾರೋ ಪಾಪಗೇಡಿಗಳು ದೇವುರುದಿಂಡರ ಲೆಕ್ಕಿಸದೆ ತನ್ನ ಹುಂಜನ ಮುರುದಿರಬೇಕೆಂದು ಅನ್ನಿಸುತ್ತ, ಅದು ಹೊತ್ತೇರಿದಂತೆ ದುಡವಾಗತೊಡಗಿತು. ಸಾಕವ್ವ, ತನಗಾಗದವರು ಯಾರಾರೆಂದು ಒಂದೊಂದಾಗಿ ನೆಪ್ಪಿಡಿಯತೊಡಗಿದಳು. ಅವುಳ ಸವುತಿ ಕೆಂಪಮ್ಮ ಮೂಡಿನಿಂತಳು. ಸಾಕವ್ವನ ಗಂಡನನ್ನು ತನ್ನ ಕಿರುಬೆರಳಲಿ ಕುಣಿಸೀಕುಣ್ಸಿ ಮುಪ್ಪಾಗಿದ್ದ ಕೆಂಪಮ್ಮನ ತಿಪ್ಪೆ ದಿಕ್ಕಿಗೆ ಸಾಕವ್ವ, ಹಿಂದಕ್ಕೆಳೆಯುತ್ತಿದ್ದ ಕಾಲೆಳೆದುಕೊಂಡು ನಡೆದಳು.

ಸಾಕವ್ವ ಆ ತಿಪ್ಪೇನ ಒಂದು ಕಡೆಯಿಂದ ಚೂರೂ ಬುಡದೆ ನೋಡೂ ಏನೂ ಕಾಣದೆ, ಅಲ್ಲೊಂದು ಇಲ್ಲೊಂದು ಸಿಕ್ಕಂಥ ತುಪ್ಪಟ ಪುಕ್ಕಗಳ ಕಣ್ಣಿಗಂಟಿಸಿ ನೋಡೂ ಅವು ಅವಳ ಹುಂಜನದಾಗಿರದೆ ಆ ತಿಪ್ಪೆ ಅವಳ ಹಠಕ್ಕೆ ಸವಾಲೊಡ್ಡಿ ನಿಂತಿತ್ತು. ಕೈ ಬುಡದೆ ಸಾಕವ್ವ 'ಎಲ್‌ಗೋದ್ಯೆ ನನ್ನ ಸವುತಿ? ಸಿಕ್ತಿಯಾ ಸಿಕ್ತಿಯಾ' ಅನ್ನುತ್ತ ಊರುಗೋಲಿನಂದ ತಿಪ್ಪೇನೆ ಬುಡಮೇಲು ಮಾಡಿ ಕೆದುಕಿದಳು. ಹಾಗೂ ಏನೂ ಸುಳುವಾಗದೆ ಸುಸ್ತಾಗಿ 'ಥೂ ನನ್ನ ಸವುತಿ .... ಮಾಯಕಾತಿ, ಅಷ್ಟು ಸುಲಭವಾಗಿ ನಿನ್ನ ಮರ್ಮ ಬುಟ್ಟುಕೊಟ್ಟಿಯಾ' ಎಂದು ತಿಪ್ಪೆಗೆ ಉಗುದು ಮುಂದಿನದಕ್ಕೆ ಸಾಗಿದಳು.

ಹತ್ತಾರು ತಿಪ್ಪೇನ ಮುಗಿಸುವಲ್ಲಿ ಸಾಕವ್ವನ ತ್ರಾಣ ಅನ್ನೋದು ಏರುತ್ತಿದ್ದ ಬಿಸುಲಿಗೆ ಒಣಗಿ ಗಾಳಿ ಅಲ್ಲಾಡಿದರೆ ಇವುಳೂ ಅಲ್ಲಾಡುವಂತಾಯ್ತು. ಆಗ ಅಲ್ಲಿಗೆ ಕಸ ಹೊತ್ತು ಬಂದ ಪುಟ್ಟಿ 'ಇದೇನಮ್ಮ ಇಷ್ಟೊತ್ತಲಿ....' ಎಂದು ಕೇಳಿದಳು. ಅದಕೆ ಸಾಕವ್ವ 'ತಿಪ್ಗ ಬಂದಿದ್ದಕಾ ಕೂಸು ಅಷ್ಟಿಯಾ' ಅಂದಳು. ಪುಟ್ಟಿ 'ಅಷ್ಟಿಯಾ' ಅಂದು ನಗಾಡ್ತ ಕಸ ಸುರುದು ಹೋದಳು. ಪುಟ್ಟಿಯ ಧಿಮಾಕು ಗಣ್ಯೆ ಸಾಕವ್ವನ ಮೊಖಕ್ಕೊಡದಿತ್ತು. ಪುಟ್ಟಿ ಅಂಬೋಳು ಕಣ್ಗೆ ಮರೆಯಾಗುವವರ್ಗೂ ತಿಪ್ಗ ಕುಂತವಳಂತೆ ಕುಂತಿದ್ದು ಆಮೇಲ ಮುಂದಿನದಕ್ಕೆ ಬಂದಳು.

ಹೊತ್ತುನಂತೆ ಎದ್ದವಳೆ ತಿಪ್ಪೆ ಕಸ ಕಡ್ಡೀಯ ಕಣ್ತುಂಬಾ ನೋಡಿ, ಅವು ಕಣ್ಣಿಗಚ್ಚೊತ್ತಿ, ಸಾಕವ್ವ ಯಾವ ದಿಕ್ಕು ನೋಡಿದರೂ ಕಸಕಡ್ಡಿಗಳು ಬಂದು ಪಾರ್ಟು ಮಾಡುತ್ತಿದ್ದವು. ಮುಂದೆ ನಡೆಯಲು ತೊಡೆ ಬಂಡಾಯವೆದ್ದು ನಿಂತಾಗ ಸಾಕವ್ವ 'ನನ್ನ ಮನೆ ದೇವ್ರ ಸತ್ಯ ಇದ್ರ ನನ್ನುಂಜ ಹಟ್ಟಿಗೋಗಿರಲಿ, ಇಲ್ಲದಿದ್ರ ಇಲ್ಲ' ಎನ್ನುತ್ತ ಅನ್ನುತ್ತಾ ಊರದಿಕ್ಕ ತೊಡ ಎಳೆದಳು.



ಸಾಕವ್ವ ಎತ್ತ ಹೋಗಿದ್ದಳು ಏನು ಮಾಡಿದಳು ಎಂಬುದು ಚಿನಾಲಿ ಪುಟ್ಟಿಯಿಂದಾಗಿ ಪ್ರಚುರಗೊಂಡು ಹೋಗಿಬರೋರು ಕುಂತವರು ಎಂದೂ ಮಾತಾಡಿಸದವರೂ 'ಏನಮ್ಮೊ' ಅನ್ನುತ್ತಿದ್ದರು. 'ನನ್ನುಂಜಕಪ್ಪ', 'ನನ್ನುಂಜಕಾನನ ಕಂದ', ಎನ್ನುತ್ತ ಸಾಕವ್ವ ಬರುತ್ತಿದ್ದಳು. ಕೇಳಿದವರು, ಅವುಳು ಮರೆಯಾದ ಮೇಲ ನಗಾಡ್ತ ಹೋಗುತ್ತಿದ್ದರು – ಹೀಗೆ ಆಗುತ್ತಿತ್ತು.

ಹಾಗೂ ಹೀಗೂ ಸಾಕವ್ವ ಹಟ್ಟೀ ಅಂಗಳಕ್ಕೆ ಮುಟ್ಟಿದಳು. ವಸ್ತುಲ ಮೇಲ ಅವಳ ಮಗಳ ಮಗ ಶಿವೂ ನಿಂತಿದ್ದನು. ಸಾಕವ್ವ 'ಬಂತಾ ನನಕಂದಾ' ಎಂದು ಶಿವೂನ ಕೇಳಿದಳು. ಶಿವೂ 'ಏನಮ್ಮಾ' ಅಂದಿತು. ಶಿವೂ ಬಾಯಿಂದ ಆ ವಾಕ್ಯ ಕೇಳಿದ ಸಾಕವ್ವನಲ್ಲಿ ದುಕ್ಕ ಕೋಪ ಅನ್ನೋವು ಉಕ್ಕಿದುವು. 'ಅಯ್ಯೋ ನನ್ನ ಮಗಳ ಮಗ್ನೇ.... ನಾನು ಬಂತಾ ಅಂತ ಕೇಳಿದ್ರ.... ಏನ್ನಮ್ಮಾ ಅಂತೀಯಲ್ಲೋ' ಎಂದು ಅಳುತ್ತ ಅಂಗಳದಲ್ಲೆ ಕೂತಳು. ಆ ಹೈದಗೆ ಗಲಿಬಿಲಿ ಎದ್ದು ಅದರವ್ವನಲ್ಲಿಗೆ ಓಡಿತು.

ದೊಡ್ಡ ಮಗಳು ಗೌರಮ್ಮ ಬಂದು ನೋಡಿದರೆ – ಅವ್ವ ಅಂಗಳದೊಳಗ ಮುಳುಗಿ ತನ್ನ ಸುತ್ತಗೂ ಮಣ್ಣೂ ಧೂಳೂ ಬಾಚುತ್ತಿದ್ದಳು. ಮಣ್ಣು ಬೊಗಸೆಯಾಗಲು ಅದನ್ನು ಹೂಪಟಾಕಿಯಂತೆ ಎರಚಿ 'ನನ್ನ ಕೋಳಿ ತಿಂದವರ ಮನೆ ಮಣ್ಣಾಗ್ಲೋ.... ನನ್ನ ಮನೆದೇವ್ರ ಸತ್ಯ ಇದ್ದುದೇ ಉಂಟಾದ್ರೆ.... ನನ್ನ ಕೋಳಿ ಮುರ್ದವರ ಮನೆ ಮುರ್ದೋಗಲೋ' ಅನ್ನುತ್ತ ಒಂದು ಬೈಗುಳ ಬಯ್ಯೋದು ಒಂದು ಸಲ ಧೂಳು ಎರಚೋದು ಮಾಡ್ತ ನಾಕದಿಕ್ಕೂ ಧೂಳು ಬಾಣ ಬುಡುತ್ತಿದ್ದಳು. ಕ್ರಮಬದ್ಧವಾಗಿ ಒಂದೊಂದು ಸಲ ಆ ಧೂಳ್ನ ಮೇಲ ಬಿದ್ದು ಒರಳಾಡುವಳು. ಎದ್ದು ನಟುಕೆ ಮುರಿದಳು. ಬಾಚಿ ಧೂಳ ತಗುದು ಎರುಚಿದಳು. ಮಗಳು ತಾಳಲಾರದೆ ಬಂದು ಅವ್ವನ ಕಯ್ಯ ಹಿಡಿದು 'ಸಾಕು ಏಳವ್ವ, ವೋದ್ದು ತಿರ್ಗಾ ಬಂದದಾ' ಎಂದು ಎತ್ತಿದಳು. ಸಾಕವ್ವ ಕಯ್ಯ ಕಿತ್ತುಕೊಂಡು ಇನ್ನೊಂದು ಸಲ ಅಂಗಳ ತುಂಬುವಂತೆ ಮಣ್ಣೆರಚಿದಳು. ಅಲ್ಲಿಗೆ ಕಿರಿಮಗಳೂ ಬಂದು ಅವ್ವನ ಒಂದೊಂದು ಕಯ್ಯ ಒಬ್ಬೊಬ್ಬರು ಹಿಡಿದು ಎತ್ತಿ ಏಳಿಸಿ ನಡೆಸುತ ಹಟ್ಟಿಗೆ ತಂದರು. ಸಾಕವ್ವನ ಇರಬಹುದಾದ ಮಯ್ಯಕಯ್ಯಿ ದೇಹವು ಮಣ್ಣು ಧೂಳು ತೊಪ್ಪೆಯಾಗಿ ಅವಳು ಆ ದೇಹವ ಭೂಮಿಗಿಳಿಬಿಟ್ಟು ಕೂತಳು.

**– ದೇವನೂರು ಮಹಾದೇವ**

**ದೇವನೂರು ಮಹಾದೇವ**

ಬಂಡಾಯ ಮನೋಧರ್ಮದ ಮೂಲಕ ಕನ್ನಡ ಕಥಾಪರಂಪರೆಗೆ ಹೊಸ ಆಯಾಮ ಒದಗಿಸಿದವರು ದೇವನೂರು ಮಹಾದೇವ. ಇವರು ಕರ್ನಾಟಕದ ಚಾಮರಾಜನಗರ ಜಿಲ್ಲೆಯ ದೇವನೂರು ಗ್ರಾಮದವರು. ಮೈಸೂರಿನ ಭಾರತೀಯ ಭಾಷಾ ಸಂಸ್ಥೆಯಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ಸ್ವಯಂ ನಿವೃತ್ತರಾಗಿದ್ದಾರೆ. ಒಡಲಾಳ, ಕುಸುಮಬಾಲೆ ಮತ್ತು ದ್ಯಾವನೂರು – ಇವು ಇವರ ಪ್ರಮುಖ ಕೃತಿಗಳು. ಇವರು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಕುಸುಮಬಾಲೆ ಕೃತಿಗೆ ೧೯೯೦ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪುರಸ್ಕಾರ ಲಭಿಸಿದೆ. ಇವರ ಕೃತಿಗಳು ಇಂಗ್ಲೀಷ್ ಮತ್ತು ಇತರ ಭಾರತೀಯ ಭಾಷೆಗಳಿಗೆ ಅನುವಾದವಾಗಿವೆ. ಈ ಭಾಗವನ್ನು 'ಒಡಲಾಳ' ಎಂಬ ಕಾದಂಬರಿಯಿಂದ ಆಯ್ದುಕೊಳ್ಳಲಾಗಿದೆ.

ಕೆಳಗಿನ ವಾಕ್ಯಗಳ ಸ್ವಾರಸ್ಯ ಬರೆಯಿರಿ.

- ಅವಳ ನಡುವಾಗಿದ್ದ ಆಸರೆಗೋಲು ತಬ್ಬಲಿಯಾಗಿ ಮುಂದೆ ಬಿದ್ದಿತ್ತು.
- ಸಾಕವ್ವ ಮೂಗಿನ ತುದೀಲಿ ಬೆಂಕಿ ಕೆಂಡ ಇಟುಗೊಂಡು ಊರಿಯೂತ ಕೂತಿದ್ದಳು.



- ❒ ‘ಒಡಲಾಳ’ ಕಾದಂಬರಿಯ ಈ ಭಾಗವನ್ನು ನಿಮ್ಮ ಗೆಳೆಯ/ಗೆಳತಿಗೆ ಹೇಳಬೇಕೆಂದಿದ್ದೀರಿ. ಅದಕ್ಕಾಗಿ ಈ ಕಥಾಭಾಗವನ್ನು ನಿಮ್ಮದೇ ಆದ ರೀತಿಯಲ್ಲಿ ನಿರೂಪಿಸಿರಿ.
- ❒ ಆಡುನುಡಿಯಲ್ಲಿರುವ ಸಾಕವ್ವನ ಮಾತುಗಳನ್ನು ಶಿಷ್ಟರೂಪದಲ್ಲಿ ಬರೆಯಿರಿ.
- ❒ ಅವಳು ತನ್ನ <u>ತಲೆಗಂಟಿದ</u> ಸಮಸ್ಯೆಯಿಂದ ಹತಾಶಳಾಗಿ <u>ಹಣೆ ಚಚ್ಚಿಕೊಳ್ಳುತ್ತಾ</u> <u>ಕಾಲೆಳೆದುಕೊಂಡು</u> ನಡೆದಳು. ಸಹಾಯ ಯಾಚಿಸಿದಾಗ ಎಲ್ಲರೂ <u>ಕೈಚೆಲ್ಲುವುದು</u> ಅವಳ <u>ಮುಖಕ್ಕೆ ಹೊಡೆದ</u>ಂತಾಯಿತು.

  ಮೇಲಿನ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳ ಅರ್ಥವನ್ನು ತಿಳಿದುಕೊಂಡು ಸ್ವಂತ ವಾಕ್ಯಗಳನ್ನು ರಚಿಸಿರಿ.
- ❒ ಈ ಪಾಠಭಾಗದ ಆಧಾರದಲ್ಲಿ ಸಾಕವ್ವನ ಪಾತ್ರಚಿತ್ರಣ ಮಾಡಿರಿ.
- ❒ ನಗರದ ಮಹಿಳೆಯೊಬ್ಬಳು ಸಾಕವ್ವನನ್ನು ಭೇಟಿಯಾಗುತ್ತಾಳೆಂದು ಭಾವಿಸಿರಿ. ತಂತಮ್ಮ ಜೀವನದಕುರಿತು ಅವರೊಳಗೆ ನಡೆಯಬಹುದಾದ ಸಂಭಾಷಣೆಯನ್ನು ಊಹಿಸಿ ಬರೆಯಿರಿ.
- ❒ ‘ಒಡಲಾಳ’ ಕೃತಿಯನ್ನು ಓದಿ, ಓದಿನ ಟಿಪ್ಪಣಿ ಬರೆಯಿರಿ.

* * *

## ಪಟ್ನಪ್ಪೋರ ವಾಸ ನಿತ್ಯ ಉಪವಾಸ!

ನಿಜವಾಗಿಯೂ ಸಂಸಾರದಲ್ಲಿ ನೆಮ್ಮದಿಯ ಬದುಕು ಕಾಣುವುದು ಹಳ್ಳಿಯಲ್ಲಿ ಮಾತ್ರ. ನಗರದಲ್ಲಿ ನಾಗರಿಕ ಸಂಸ್ಕೃತಿಯನ್ನಷ್ಟೇ ಕಾಣುತ್ತೇವೆ. ಹಳ್ಳಿಯಲ್ಲಿ ಪ್ರಕೃತಿಯ ಸೆರಗನ್ನು ಕಂಡರೆ ನಗರಗಳಲ್ಲಿ ವಿಕೃತಿಯ ಬೆರಗನ್ನೇ ಕಂಡು ಬೆರಗಾಗುತ್ತೇವೆ. ಹಳ್ಳಿಗಳಲ್ಲಿ ಮಾನ ಎನ್ನುವುದು ಮರ್ಯಾದೆಯ ಪರಿಧಿಯಲ್ಲಿದ್ದರೆ ನಗರಗಳಲ್ಲಿ ಔಟ್ ಆಫ್ ಬೌಂಡರಿ!! ಹಳ್ಳಿಯಲ್ಲಿ ನೋಡಿ ಊಟ ತಿಂಡಿಗಳೆಲ್ಲಾ ಉದಾರಿ. ನಗರದ ಆವರಣಗಳಲ್ಲಿ ದುಬಾರಿ. ಹಳ್ಳಿಗಳಲ್ಲಿ ಪದ್ಮಾಸನ ಹಾಕಿ ಮೃಷ್ಟಾನ್ನ ಉಂಡರೆ ನಗರಗಳಲ್ಲಿ ನಿಂತ ಕಡೆಯಲ್ಲೆಲ್ಲಾ ಭಿಕ್ಷಾನ್ನ (ಬಫೆ) ವನ್ನೇ ನುಂಗುತ್ತೇವೆ. ಹಳ್ಳಿಗಳಲ್ಲಿ ಪರಿಸರ ಪ್ರೇಮಿಗಳು. ನಗರಗಳಲ್ಲಿ ಅವಸರ ಕ್ರಿಮಿಗಳು.

ಹಳ್ಳಿಗಳಲ್ಲಿ ನಾಯಿ, ಎತ್ತು, ಬೆಕ್ಕು, ಕೋಳಿ, ಕುರಿ, ಕೋಣ ಹೀಗೆ ಪ್ರಾಣಕ್ಕೆ ಪ್ರಾಣ ಸಂಬಂಧಿಗಳು. ನಗರಗಳಲ್ಲಿ ಸ್ಕೂಟರ್, ಕಾರು, ರಿಕ್ಷಾ, ಟ್ಯಾಕ್ಸಿ ಪ್ರಾಣಾಂತಿಕ ಬಂಧಿಗಳು. ಹಳ್ಳಿಗಳಲ್ಲಿ ಜನ ಅಕ್ಕಪಕ್ಕ ಪರಿಚಿತರು. ನಗರಗಳಲ್ಲಿ ಪರಿಚಯಕ್ಕೇ ಮೈಪರಚಿಕೊಳ್ಳುವವರು! ಹಳ್ಳಿಗಳಲ್ಲಿನ ಜನಕ್ಕೆ ದೊರೆತ ಸೌಲಭ್ಯವೇ ಸ್ವರ್ಗವಾದರೆ ನಗರಗಳಲ್ಲಿ ದೊರೆತಿದ್ದೂ ಅನುಭವಿಸಲಾಗದ ನರಕ. ಹಳ್ಳಿಗಳಲ್ಲಿ ಅವನವನ ವೃತ್ತಿಯೇ ಕಾಯಕ. ನಗರಗಳಲ್ಲಿ ಒಬ್ಬೊಬ್ಬರ ವೃತ್ತಿಯೇ ಅನೇಕ. ಹಳ್ಳಿಗಳಲ್ಲಿ ಇವತ್ತಿಗೂ ಹಾಸಿ ಹೊದೆಯಲು ಚಾಪೆ ಸಾಕು. ನಗರಗಳಲ್ಲಿ ಸೋಫಾಸೆಟ್ಟೇ ಬೇಕು. ಹಳ್ಳಿಯಲ್ಲಿ ಜೀವನವೆಚ್ಚ ಹಗುರ. ನಗರಗಳಲ್ಲಿ ದಿನನಿತ್ಯ ಬಾರಿಬಾರಿಗೂ ಭಾರ. ಸಂಸಾರದಲ್ಲಿನ ಸ್ವಾರಸ್ಯವೂ ಅಷ್ಟೆ ಹೆಂಡತಿ ಗಂಡನಿಗೆ ಸದಾರಮೆ!! ನಗರದಲ್ಲಿ ಮನೆ ತಲುಪುವವರೆಗೂ ಸದಾ ಭ್ರಮೆ! ಒಟ್ಟಿನಲ್ಲಿ ಅವಲೋಕಿಸಿದಾಗ ಹಳ್ಳಿಯಲ್ಲಿ ಧಾರಾಳವಾಗಿ ದೊರಕುವುದು ಆಮ್ಲಜನಕ! ನಗರದಲ್ಲಿ ಬೆಳಗಾಗಿ ಎದ್ದರೆ ಮುಖ ತೊಳೆಯಲೂ ನಿರೀಕ್ಷೆ ‘ಜಲ’ ಜನಕ! ಹೆಜ್ಜೆಹೆಜ್ಜೆಗೂ ನಿರಾತಂಕ ಹಳ್ಳಿಯಲ್ಲಾದರೆ, ನಗರದಲ್ಲಿ ನಿತ್ಯ ಆತಂಕ.

ಕವಿವಾಣಿಯಲ್ಲಿ ಕನವರಿಸುವುದಾದರೆ ನಗರ ಬದುಕು ಸಂಕಷ್ಟ ತಿಥಿ. ಹಗಲಾದೊಡನೆ ಆರಂಭವಾಗುತ್ತೆ ಫಜೀತಿ!! ನಲ್ಲಿಯಲ್ಲಿ ನೀರಿಲ್ಲ. ಡೇರಿಯಲ್ಲಿ ಹಾಲಿಲ್ಲ. ಬಸ್ಸು ಎಟುಕುವುದಿಲ್ಲ. ಬಜಾರು ಸಿಕ್ಕುವುದಿಲ್ಲ. ಓಡಾಟ



ಹೆಚ್ಚಾಗಿ ನೆಮ್ಮದಿ ಪೆಚ್ಚಾಗಿ, ಫುಟ್‌ಪಾತು ಕಿರಿದಾಗಿ, ಬೆಲೆಗಳು ದಿಕ್ಕಾಪಾಲಾಗಿ ಪಟ್ಟಣದ ಜೀವನ ಸವಾಲ್.... ಸವಾಲ್.... ಸವಾಲ್!! ಇಂತಹ ಜಟಿಲತನದ ದಿನನಿತ್ಯ ಬವಣೆ ಕುರಿತೇ ಹಳ್ಳಿಯವನ ಬಾಯಲ್ಲಿ ಒಂದು ನಾಣ್ನುಡಿ ಇವತ್ತಿಗೂ ಜೀವಂತವಾಗಿದೆ. ಆ ನುಡಿ ಆತ ಕಂಡುಂಡ ಅನುಭವದ ಮಾತೇ ಸರಿ. "ಪಟ್ನಪ್ನೋರ ವಾಸ ರತ್ನಗಂಬ್ಳಿ ಹಾಸ ನಾನೂ ಉಪವಾಸ ನನ್ನ ಎತ್ತೂ ಉಪವಾಸ! ನನ್ನಳ್ಳಿ ವಾಸ ಕರಿಕಂಬ್ಳಿಹಾಸ. ನಾನೂ ಸಂತೋಷ ನನ್ನ ಎತ್ತೂ ಸಂತೋಷ...!!" ಇದರರ್ಥ 'ಅಂಬಲಿ ಕಂಬಳಿ ಆಸ್ತಿ, ಮಿಕ್ಕಿದ್ದೆಲ್ಲ ಜಾಸ್ತಿ'. ಹಳ್ಳಿಯ ಜನಕ್ಕೆ ಮಾನಹೋಗದ ಹಾಗೆ ಬಟ್ಟೆ, ಪ್ರಾಣ ಹೋಗದ ಹಾಗೆ ಅನ್ನ ಸಿಕ್ಕಿದರೆ ಸಾಕು. ಅವರಿಗೆ ಅದೇ ತೃಪ್ತಿ. ಅದೇ ಸೌಭಾಗ್ಯ. ಹಿಂದೆ ಮುಂದೆ ಯೋಚನೆ ಬಿಟ್ಟು ಬಂದುದಕ್ಕೆ ತೃಪ್ತಿಪಡುವ ಗುಣ ಅವರದ್ದು. ತುಂಬೆ ಸೊಪ್ಪು ದೇವರು ಕೊಟ್ಟದ್ದು, ಇದ್ದದ್ದು ಬಿಡೋದು ಬ್ಯಾಡ. ಇಲ್ಲದ್ದು ಬಯಸೋದು ಬ್ಯಾಡ. 'ಇಲ್ಲದ ಕಾಲದಲ್ಲಿ ಇರೋದೇ ಬೆಲ್ಲ' ಎಂದು ನಂಬುವ ಈ ಹಳ್ಳಿಯಲ್ಲಿ ಮಲ್ಲ ಮಲ್ಲಿಯರ ಬದುಕು ನಿಜಕ್ಕೂ ಸಾರ್ಥಕ. 'ಕಾಸು ಕೈಹತ್ತಬೇಕು. ಊಟ ಮೈ ಹತ್ತಬೇಕು' ಎನ್ನುವ ಮಂತ್ರವೇ ಇವರ ವ್ರತ. 'ಕತ್ತೆ ಥರ ದುಡಿಯೋದೂ ಬೇಡ, ಕಪ್ಪೆ ಥರ ವಟಗುಟ್ಟೋದು ಬೇಡ' ಎನ್ನುವುದೇ ಇವರ ಸಂತೃಪ್ತ ಬಾಳಿನ ಗುಟ್ಟು. ನಗರದಲ್ಲಿ ಐರನ್ನು ಸೈರನ್ನು ಹಾರನ್ನು ರಿಬ್ಬನ್ನುಗಳ ರಿಂಗ್‌ರೋಡ್ ರಥಯಾತ್ರೆಯಲ್ಲಿ ಕೇವಲ ಕೊರಳ ಸಂಬಂಧವನ್ನು ಕೇಳಿದರೆ ಹಳ್ಳಿಯಲ್ಲಿ 'ನಿನಗೆ ನಾನು, ನನಗೆ ನೀನು' ಎನ್ನುವಂತಹ ಕರುಳು ಸಂಬಂಧವನ್ನಷ್ಟೇ ಕಾಣುತ್ತೇವೆ. "ಸಣ್ಣ ಬಾಯಿಗೇಕೆ ದೊಡ್ಡ ಮಾತು ಸ್ವಾಮಿ? ಮಟ್ಟ ತಿಳಿಯದೆ ಮಾತಾಡುವುದು ಬೇಡ. ಆಳ ನೋಡದೆ ನೆಗೆಯೋದು ಬೇಡ. ಹಲಗೆಗಿಂತ ನಾಲಿಗೆ ಗಟ್ಟಿಗಿರಬೇಕು. ಬಲೆಗಿಂತ ಮನಸ್ಸು ಬಯಲಾಗಿರಬೇಕು" ಎನ್ನುವುದೇ ಇವರ ವೇದಾಂತವಾಗಿರುವುದರಿಂದ ನಗರದವರ ಹಾಗೆ ಏಕಾಂತವಾಗದ ಇವರ ಜೀವನ ಲೋಕಾಂತವಾಗಿದ್ದು ಹಾಯಾಗಿರಲು ಕಾರಣ.

ಹಳ್ಳಿಯೊಂದರಲ್ಲಿ ತರಕಾರಿ ವ್ಯಾಪಾರಿಯಿದ್ದ. ಆತನ ಬಳಿ ಒಂಟೆತ್ತಿನ ಗಾಡಿಯಿತ್ತು. ದಿನವೂ ಹಳ್ಳಿಯಲ್ಲಿ ರೈತರು ಬೆಳೆದ ತರಕಾರಿ ಸಂಗ್ರಹಿಸುತ್ತಿದ್ದ. ಮೂಟೆಕಟ್ಟಿ ಬಂಡಿಗಿರಿಸಿ ಪೇಟೆಗೊಯ್ಯುತ್ತಿದ್ದ. ಅಲ್ಲಿ ಫಲಾಹಾರ ಮಂದಿರ, ತರಕಾರಿ ಅಂಗಡಿಗಳಿಗೆ ಮಾರಾಟ ಮಾಡಿ ಬಂದ ಲಾಭದಲ್ಲಿ ಜೀವನ ನಡೆಸುತ್ತಿದ್ದ. ಅನ್ಯೋನ್ಯ ಸಂಸಾರ. ಗಂಡ ಪ್ರತಿ ದಿವಸ ಪೇಟೆಯಿಂದ ಹೆಂಡತಿಗೆ ಏನಾದರೂ ತಿನಿಸು ತರುತ್ತಿದ್ದರೆ, ಹೆಂಡತಿಯೂ ಅಷ್ಟೆ, ಗಂಡ ಬರುವ ವೇಳೆಗೆ ಏನಾದರೂ ಗೆಡ್ಡೆಗೆಣಸು ಬೇಯಿಸಿರುತ್ತಿದ್ದಳು. ಇಂತಹ ಸಂಸಾರದಲ್ಲಿ ಒಂದು ದಿನ ತರಕಾರಿ ಮೂಟೆಯನ್ನು ಗಾಡಿಗಿರಿಸಿ, ಎತ್ತಿಗೆ ನೊಗ ಏರಿಸಿ, ಗಂಡ ಪೇಟೆಗೆ ಹೊರಡಲನುವಾದ. ಪ್ರತಿ ದಿನದಂತೆ ಗಂಡನನ್ನು ಪೇಟೆಗೆ ಕಳಿಸಿಕೊಡುವಾಗ ಬಾಗಿಲವರೆಗೆ ಬಂದು, ಗಂಡನ ಕಡೆ ಕುಡಿನೋಟಬೀರಿ, ಎತ್ತಿಗೆ ನಮಿಸಿ ಬೀಳ್ಕೊಡುವುದು ಮಡದಿಯ ಪದ್ಧತಿ. ಎಂದಿನಂತೆ ಆ ದಿನವೂ ತನ್ನ ಮನೆಯ ಮುಂದೆ ಬಂದು ನಿಂತಳು. ಗಂಡ ಆಕೆಯ ಕಡೆ ನೋಡಿ "ಬರನಾ" ಎಂದು ನುಡಿದು ಹೊರಟ. ಕೂಡಲೆ ಹೆಂಡತಿ ಚಂಡಿ ಚಾಮುಂಡಿ ಅವತಾರ ತಾಳಿದಳು! "ಏಯ್ ಇಳ್ಸು... ನೊಗ ಇಳ್ಸು...!! ನಿನ್‌ಕಾಲ್ ಸೇದ್‌ಹೋಗ! ನಿನ್ನ ಬಾಯ್ಗೆ ಮಣ್ಣಾಕ! ಗ್ಯಾನ ನೆಟಗಿಲ್‌ವೇನು? ಕಣ್ಣು ಎತಾಗೈತೆ? ಅಯ್ಯಾ ನಿನ್ನ...!!" ಎಂದು ಗುಡುಗಿದಳು. ಗಂಡ ಇವಳ ಆರ್ಭಟಕ್ಕೆ ದಂಗಾಗಿಹೋದ. "ಏನಾಯ್ತು ನಿಂಗೆ? ಯಾಕ್ ಅಂಗೆ ವೊಡ್ಕೋತೀಯಾ?" ಎಂದು ಕೇಳಿದ.

ಆಗ ಆಕೆ ಮತ್ತೆ ಗುಡುಗಿದಳು "ಇವತ್ತು ಯಾಕಡೀ ಮುಸುಡಿ ಮಾಡಿ ಎದ್ದೆ ನೀನು? ನನ್ನ ನಿನ್ನ ವೊಟ್ಟೆಗಾಕ್ತಿರೋ ಎತ್ಗೆ ನೀನು ಕಾಲಾಗ ಮಾತಾಡ್‌ಸೋದು! ಗಾಡಿ ಹೊಡೆಯೋ ಮುಂಚೆ ಗ್ಯಾನ ಎತ್ಲಾಗಿತ್ತು? ಅರಿಯದ್ ಜೀವನಾ ಕಾಲಾಗೆ ಒದಿತೀಯಾ ನೀನು? ಅಡ್ಡಬೀಳು, ಕಣ್ಣಗೊತ್ಕ, ಕೈಮುಗಿ ಆಮೇಕೆ ನೊಗ ಇಳ್ಸಿ ಪ್ಯಾಟಿಗೆ ವೊಲ್ಡು" ಎಂದು ಆದೇಶಿಸಿದಳು. ಗಂಡನಿಗೆ ತನ್ನ ಅಪರಾಧ ತಿಳಿಯಿತು. ಇದಕ್ಕೆ ಮುಂಚೆ ಹೊರಡುವಾಗ ಗಾಡಿ ತಿರುಗಿಸುತ್ತಾ, ತನ್ನ ಕಾಲಿನಲ್ಲಿ ಅದಕ್ಕೆ ತಿವಿದು ಸೂಚನೆ ಕೊಡುತ್ತಾ ಹೊರಡಿಸಿದ್ದ!! "ಸರಿ ಬಿಡು ತಪ್ಪಾತು" ಎಂದು ಎತ್ತನ್ನು ಮುಟ್ಟಿ, ಕಣ್ಣಿಗೆ ಕೈ ಒತ್ತಿಕೊಂಡು ಹೊರಡಲನುವಾದ. ಆಗ ಮಡದಿ 'ಒನ್ ಚಣ ಇರು' ಎಂದು ಒಳಗೆ ಹೋಗಿ ಎಲೆ ಅಡಿಕೆ



ತಂದು ಸುಣ್ಣ ಸವರುತ್ತ "ಕ್ವಾ ಬಾಯಿಗಾಕು. ಆಡಿದ ಮಾತು ಆಚೆಗಾಕು. ಸಂಜೆ ಮನೆಗೆ ಬಿರ್ನಬಾ!" ಎಂದುಬಿಟ್ಟಳು! ಗಂಡ ಎಲೆಯಡಿಕೆ ಬಾಯಿಗೆ ಇರಿಸಿ, ಮೆಲ್ಲುತ್ತಾ ಮೆಲ್ಲಗೆ ಮಡದಿ ಕಡೆ ಮುಖತೋರಿ ನಗೆಬೀರುತ್ತಾ ಪೇಟೆಕಡೆಗೆ ಹೊರಟೇಬಿಟ್ಟ.

ಇದು ನಿಜವಾದ ಜೀವನ. ಇದು ನಿಜವಾದ ಸಂಸ್ಕಾರ. ಇದೇ ನಿಜವಾದ ಸಂಸಾರ. ಯಾವ ಪ್ರಾಣಿಯ ಸಹಾಯದಿಂದ ಬದುಕಿದ್ದೇವೋ ಆ ಪ್ರಾಣಿಯೇ ನಮ್ಮ ಜೀವಾಧಾರ. ಅದರಿಂದ ನಮ್ಮ ದಿನನಿತ್ಯದ ಕಾಯಕ. ಅದಿದ್ದರೆ ಕೈಲಾಸ ಎಂದು ತಿಳಿದು ಬಾಳುವ ಜೊತೆಗೆ ತಪ್ಪಿ ನಡೆದರೆ ಅಕಸ್ಮಾತ್, ಎದುರಿಗೇ ಸರಿಪಡಿಸಿಕೊಳ್ಳುವ ಹಳ್ಳಿಯವರ ಈ ದಾಂಪತ್ಯ ನಿದರ್ಶನ ನಗರದಲ್ಲಿ ಎಲ್ಲಿ ಕಾಣಲು ಸಾಧ್ಯ? ತಮ್ಮ ಮನೆಯಲ್ಲಿ ತಮ್ಮನ್ನು ಕಾಯಲು, ಕಾವಲುನಾಯಿಗಳನ್ನು ಮನೆಮುಂದೆ ಸರಪಳಿಯಿಂದಲೇ ಬಿಗಿವ ನಗರದ ನಾಗರಿಕರಿಗೆ ಹಳ್ಳಿಯವರ ಈ ನಡವಳಿಕೆ ನಿಜಕ್ಕೂ ಕಣ್‌ತೆರೆಯುವ ಪಾಠವೆಂದೇ ಹೇಳಬೇಕು.

ಸಾಧಾರಣವಾಗಿ ನಗರ ಜೀವನದಲ್ಲಿ ನಾವು ಕಲಿಯುವುದು ಎರಡೇ ಪಾಠ. ದೊಡ್ಡತನಕ್ಕೆ ಅಹಂಕಾರ, ಚಿಕ್ಕತನಕ್ಕೆ ಅವಮಾನ!! ಅದೇ ಹಳ್ಳಿಗೆ ಹೋದರೆ ಅಲ್ಲಿಯ ಪ್ರೀತಿ ಒಡಲಲ್ಲೇ ಕಾಣುತ್ತೇವೆ. ನಗರದವರ ಪ್ರೀತಿ ದುಡ್ಡಿನಲ್ಲಿ ಮಾತ್ರ. ಒಟ್ಟಿನಲ್ಲಿ ಹಳ್ಳಿಗೆ ಹೋದರೆ ಉಪಚಾರ, ಪಟ್ಟಣಕ್ಕೆ ಬಂದರೆ ಬರೀ ಸಡಗರ ಎನ್ನುವ ಮಾತು ಸುಳ್ಳಲ್ಲ. ಹಳ್ಳಿಯ ಜನಕ್ಕೆ ದೊರೆತದ್ದೇ ಪ್ರಸಾದ. ಉಂಡದ್ದೇ ತೃಪ್ತಿ. ಇನ್ನೊಬ್ಬರನ್ನು ಕಂಡು ಕರುಬುವಿಕೆ ಇಲ್ಲ. ಅವರಿಗೆ ಅವರವರ ಅಂತಸ್ತಿನ ಬೆಲೆ ತಿಳಿದಿರುವ ಕಾರಣ ಸಂಕಟಪಡದೆ ಸುಮ್ಮನಿರುತ್ತಾರೆ. "ತಾಳೆಮರ ಉದ್ದವಾಗಿದ್ದರೆ ಕೋಳಿಗೆ ಬಂದ ಭಾಗ್ಯವೇನು? ಹಾರಾಡಿಕೊಂಡು ತಿನ್ನೋವು ಹಕ್ಕಿ ಕಣ್ ಸಾಮಿ! ನಾವು  ಕೂಳಾರಿಸಿಕೊಂಡು ತಿನ್ನೋ ಕೋಳಿಗಳು" ಎಂದು ಸುಖವಾಗಿರುತ್ತಾರೆ. ಇಂತಹ ಹಳ್ಳಿ ಜನರ ಬದುಕನ್ನು ಕಂಡರೆ ಮತ್ತೊಂದು ಮಾತು ನೆನಪಾಗದಿರದು. "ದೊಡ್ಡವರ ಮನೆ ಚೆಂದ ಬಡವರ ಮನೆ ಊಟ ಚೆಂದ!" ನಿಜ, ಸಂಪಾದಿಸುವುದು ನಿತ್ಯ ಇದ್ದದ್ದೇ. ಆದರೆ ಅನುಭವಿಸುವುದು ಮುಖ್ಯ ಎನ್ನುವುದನ್ನು ಮರೆಯಬಾರದು. ಹಳ್ಳಿಯವರ ಜೀವನವೇ ನಮ್ಮ ಬದುಕಿನ ದರ್ಪಣ ಅಲ್ಲವೆ?

ಗಾಣದೆತ್ತಿನ ತೆರದಿ ಬರಿದುಡಿಯುತಿರೆ ನೀನು
ಕುಳಿತುಣುವುದಾವಾಗ ಹೊಂಗೆ ನೆರಳಲ್ಲಿ?
ರವಿ ಮುಳುಗಿ ದಿನ ಅಳಿದು ಸರಿ ಕತ್ತಲಾದೀತೊ!
ಇರುವುದನು ಅನುಭವಿಸು – ಮುದ್ದುರಾಮ

**– ಹಿರೇಮಗಳೂರು ಕಣ್ಣನ್**

**ಹಿರೇಮಗಳೂರು ಕಣ್ಣನ್**

ಕನ್ನಡದ ಪೂಜಾರಿ ಎಂದೇ ಹೆಸರಾದ ಹಿರೇಮಗಳೂರು ಕಣ್ಣನ್ ಕನ್ನಡದ ಶ್ರೇಷ್ಠ ವಾಗ್ಮಿಗಳಲ್ಲಿ ಒಬ್ಬರು. ಕನ್ನಡ ಭಾಷೆಯ ವಿಶಿಷ್ಟ ಜಾಯಮಾನಗಳೆಲ್ಲವನ್ನು ಒಳಗೊಂಡ ವಿಶೇಷ ಬರವಣಿಗೆಯ ಶೈಲಿ ಇವರದು. ಹಾಸ್ಯ, ವ್ಯಂಗ್ಯ, ಚಾಟೂಕ್ತಿ ಮುಂತಾದವುಗಳ ಮೂಲಕ ಇವರು ಜನರ ಕೆಟ್ಟ ನಡೆವಳಿಕೆಗಳಿಗೆ ಕನ್ನಡಿ ಹಿಡಿದಿದ್ದಾರೆ. ಅಂತೆಯೇ ಜನರ ಸಜ್ಜನಿಕೆ, ಮುಗ್ಧತೆ, ಪ್ರಾಮಾಣಿಕತೆ, ಪ್ರತಿಭೆಗಳಿಗೂ ಆರತಿ ಬೆಳಗುತ್ತಾರೆ.

ಇವರು ಚಿತ್ರಿಸಿದ ಪ್ರಸಂಗಗಳಲ್ಲಿ ಸಾಮಾನ್ಯರಿದ್ದಾರೆ, ಅಸಾಮಾನ್ಯರಿದ್ದಾರೆ, ಹಳ್ಳಿಯ ಮುಗ್ಧರಿದ್ದಾರೆ, ದಂಪತಿಗಳಿದ್ದಾರೆ, ಭಿಕ್ಷುಕರಿದ್ದಾರೆ, ಲಕ್ಷಾಧಿಪತಿಗಳಿದ್ದಾರೆ.

ಸಮಾಜದ ಎಲ್ಲ ವಲಯದ ಜನರ ಚಿತ್ರಣದ ಮುಖಾಂತರ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ಕಣ್ಣನ್‌ರವರು ನಡೆನುಡಿಗಳ ಪೂಜೆಯನ್ನು ಮಾಡಿರುವ ರೀತಿ ಅತ್ಯಂತ ಮನನೀಯವಾಗಿದೆ. ಈ ಲಲಿತ ಪ್ರಬಂಧವನ್ನು ಅವರ 'ನುಡಿಪೂಜೆ' ಎಂಬ ಕೃತಿಯಿಂದ ಆರಿಸಲಾಗಿದೆ.



- ❐ ಹಳ್ಳಿಯಲ್ಲಿ ಪ್ರಕೃತಿಯ ಸೆರಗನ್ನು ಕಂಡರೆ ನಗರದಲ್ಲಿ ವಿಕೃತಿಯ ಬೆರಗನ್ನೇ ಕಾಣುತ್ತೇವೆ. ಹಳ್ಳಿಯಲ್ಲಿ ಧಾರಾಳವಾಗಿ ದೊರಕುವುದು ಆಮ್ಲಜನಕ! ನಗರದಲ್ಲಿ ಬೆಳಗಾಗಿ ಎದ್ದರೆ ಮುಖ ತೊಳೆಯಲೂ ನಿರೀಕ್ಷೆ 'ಜಲ'ಜನಕ. ಲೇಖಕರ ಈ ಮಾತುಗಳ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಬರೆದು ಮಂಡಿಸಿರಿ.
- ❐ ಈ ಪಾಠಭಾಗದಲ್ಲಿ ಬಂದಿರುವ ಹಳ್ಳಿ ಮತ್ತು ಪಟ್ಟಣಗಳ ವ್ಯತ್ಯಾಸಗಳನ್ನು ಗಮನಿಸಿಕೊಂಡು 'ಗ್ರಾಮೀಣ ಜೀವನ ಮತ್ತು ನಗರ ಜೀವನ' ಎಂಬ ವಿಷಯದ ಕುರಿತಾಗಿ ತರಗತಿಯಲ್ಲಿ ನಡೆಯಲಿರುವ ವಿಚಾರಗೋಷ್ಠಿಯಲ್ಲಿ ಮಂಡಿಸಲು ಪ್ರಬಂಧ ಬರೆಯಿರಿ.
- ❐ "ಕತ್ತೆ ಥರ ದುಡಿಯೋದು ಬೇಡ, ಕಪ್ಪೆ ಥರ ವಟಗುಟ್ಟುವುದು ಬೇಡ" – ಈ ಮಾತಿನ ಹಿನ್ನೆಲೆಯಲ್ಲಿ ನಗರದ ಪರದಾಟದ ಬದುಕಿನ ಕುರಿತು ಒಂದು ಹಾಸ್ಯಲೇಖನವನ್ನು ಬರೆಯಿರಿ.
- ❐ <u>ದೊಡ್ಡ</u> ವ್ಯಕ್ತಿಗಳು ಬಡವರಿಗೆ ಸಹಾಯ ಮಾಡುವ ಮೂಲಕ ತಮ್ಮ <u>ದೊಡ್ಡತನ</u>ವನ್ನು ಮೆರೆಯುತ್ತಾರೆ. ಈ ವಾಕ್ಯದಲ್ಲಿ ಅಡಿಗೆರೆ ಎಳೆದ ಪದಗಳ ಅರ್ಥ ವ್ಯತ್ಯಾಸಗಳನ್ನು ಗಮನಿಸಿರಿ. ಈ ರೀತಿಯ ಪದಗಳನ್ನು ಪಟ್ಟಿಮಾಡಿರಿ.

* * *

# ಹಳ್ಳಿ ಮುಳುಗೋಗ್ತದೆ

## ೧

ಶುಭ ಮುಹೂರ್ತ ಸನ್ನಿಹಿತವಾಗಿತ್ತು.

ಅಡ್ಡಪಂಚೆಯ ಮೇಲೆ ರೇಶಿಮೆಯ ಅಂಗಿತೊಟ್ಟು ರಾಮ ಗುಡಿಸಲಿನಿಂದ ಹೊರಬಂದ. ಮದುವೆಗೆಂದು ಹಿಂದೆ ಹೊಲಿಸಿದ್ದ ಆ ಅಂಗಿ ಬೆಳೆದ ಮೈ ಮಾಂಸಖಂಡಗಳಿಗೆ ಹೊದಿಕೆಯಾಗಿ ಈಗ ಬಿರಿಯುತ್ತಿತ್ತು. ತುಂಬು ಮುಖಕ್ಕೆ ಶೋಭೆಯಾಗಿತ್ತು ಕುಡಿಮೀಸೆ. ನೀಳವಾಗಿತ್ತು ತಲೆಗೂದಲು.

ಅಲ್ಲಿಯೇ ಹಿತ್ತಿಲ ಬೇಲಿಗೊರಗಿ ನಿಂತಿದ್ದ ಲಚ್ಚಿ ನೋವಿನ ಆಯಾಸದ ನಿಟ್ಟುಸಿರು ಬಿಟ್ಟು ಕಾತರ ತುಂಬಿದ ಧ್ವನಿಯಲ್ಲಿ ಕೇಳಿದಳು:

"ನೀವು ಓಗ್ತೀರಾ?"

"ಊಂ. ಬಿರ್ನೆ ಬಂದ್ಬಿಡ್ತೀವಿ" ಎನ್ನುತ್ತ ಆತ ಗುಡಿಸಲು ಕಡೆಗೆ ನೋಡಿ ಅಸಹನೆಯ ಸ್ವರದಲ್ಲಿ ಕರೆದ:

"ಅಪ್ಪಾ! ಒತ್ತಾಗೋಯ್ತು! ಒರಡಾನ!"

ಹೊರಬಂದವನು ಮನೆಯ ಹಿರಿಯ. ಮಾಸಿದ ಪಂಚೆ. ಹರಕಲು ಅಂಗಿಯ ಮೇಲಿದ್ದ ಹಳೆಯ ಕೋಟು. ಇಳಿಮುಖವಾಗಿದ್ದ ಬಿಳಿಮೀಸೆ. ಸುಕ್ಕುಗಳನ್ನು ಆವರಿಸಿದ್ದ ನರೆತ ಗಡ್ಡ. ತೆಳ್ಳಗಾಗಿದ್ದ ತಲೆಗೂದಲನ್ನು ಮುಚ್ಚಿದ್ದ ರುಮಾಲು. ಅಪನಂಬಿಕೆಯೆ ನೆಟ್ಟ ನೋಟವಾಗಿ ಹೆಪ್ಪುಗಟ್ಟಿದ್ದ ಕಣ್ಣುಗಳು. ಎಕ್ಕಡ ಮೆಟ್ಟಿ ಆತನೆಂದ:



“ನಡಿ.”

ಸೊಸೆಯನ್ನು ಹುಡುಕಿಬಂದ ಮನೆಯೊಡತಿ ಬಾಗಿಲಲ್ಲೆ ತಡೆದು ನಿಂತಳು. ಮನೆಬಿಟ್ಟು ಹೊರಟಿದ್ದ ಮಗನನ್ನೂ ತನ್ನವನನ್ನೂ ಕಂಡಳು:

ಅವಳನ್ನು ದಿಟ್ಟಿಸಿ ಹಿರಿಯನೆಂದ:

“ಅದೇನೈತೋ ನೋಡ್ಬರ್ತೀನಿ.”

..... ಬಿಸಿಲು. ಸೂರ್ಯ ನೆತ್ತಿಯಾಚೆಗೆ ಆಗಲೆ ಸರಿದಿದ್ದರೂ ಚುರುಕು ಮುಟ್ಟಿಸುತ್ತಿದ್ದ ಖಾರಬಿಸಿಲು. ಬೇಸಗೆಯೇನೊ ಮುಗಿಯುತ್ತ ಬಂದಿತ್ತು. ಆದರೆ, ಮೋಡಗಳ ಸುಳಿವಿರಲಿಲ್ಲ. ಹಾದಿ ನಡೆಯುತ್ತಿದ್ದ ಹಿರಿಯನನ್ನು ಎಂದಿನ ಸಂಕಟವೇ ಇಂದೂ ಬಾಧಿಸಿತು. ಮತ್ತೂ ಹತ್ತಾರು ದಿನ ಮಳೆ ಬರದೇ ಹೋದರೆ? ಈ ಸಲದ ಬಿತ್ತನೆಯಲ್ಲಿ ಕ್ಷಾಮರಾಕ್ಷಸ ಹೊಂಚುಹಾಕುತ್ತ ಅಡಗಿ ಕುಳಿತಿದ್ದ. ತಾಯ್ನೆಲ ಭಣಗುಡುತ್ತಿತ್ತು. ಪರೆಕಳಚಿದ ಹಾವು ಪ್ರಕೃತಿ. ಉದ್ದಕ್ಕೂ ಒರಗಿತ್ತು ಆ ಬಿಳಿಯ ಪರೆ. ಪುಡಿಪುಡಿಯಾಗಿದ್ದ, ಕಣಕಣವಾಗಿದ್ದ ಕಾಲುಹಾದಿ. ದಾರಿ ತುಳಿಯುತ್ತ ಆ ಬಿಳಿಯ ಗೆರೆಯನ್ನು ಹಿರಿಯ ನೋಡಿದ. ದೃಷ್ಟಿಯೊಡನೆ ನಡು ಬಾಗಿತು. ಹೃದಯದ ಭಾರದಿಂದ ತಪ್ಪಿಸಿಕೊಂಡ ಬಿಸಿಯುಸಿರು ದೀರ್ಘವಾಗಿ ಹೊರಬಂತು.

ಹಿರಿಯನ ಸಂಕಟವನ್ನು ಗ್ರಹಿಸಿದ ರಾಮ ಕನಸಿನ ಲೋಕದಿಂದ ಕೆಳಕ್ಕಿಳಿದು ಬಂದ. ಎಂದಿಗಿಂತ ಭಿನ್ನವಾದ ಆ ದಿನದಲ್ಲೂ ಆ ಹೊತ್ತಿನಲ್ಲೂ ಹಾಗಿರಬೇಕೆ ತನ್ನ ತಂದೆ?

“ಏನಪ್ಪಾ ಅದು?”

“ಈ ದುರ್ಗತಿ ನಮಗೆ ಬಂತಲ್ಲಾ ಅಂತ ಯೋಚಿಸಿದ್ದೆ ಮಗಾ.”

“ಸಾಕು, ಸಾಕು! ನಿನ್ನದು ಯಾವಾಗಲೂ ಒಂದೇ ಹಾಡು!”

ಬಿಸಿಲಿನಷ್ಟೇ ಬಿಸಿಯಾಗಿದ್ದ ಉಗುಳನ್ನು ಹಿರಿಯ ನುಂಗಿದ. ‘ಒಂದೇ ಹಾಡು’ ....... ಹೂಂ ..... ಹೀಗಾಗಬಹುದೂಂತ ಯಾರಿಗೆ ಗೊತ್ತಿತ್ತು? ತನ್ನ ಹಿರಿಯ ಮಗನಿಗೇ ಈ ರೀತಿ ಹುಚ್ಚು ಹಿಡಿಯುವುದೆಂದರೆ? ಸಾಲದುದಕ್ಕೆ ಶಹರದಲ್ಲಿ ಓದುತ್ತಿದ್ದ ಎರಡನೆಯ ಮಗ ಕೃಷ್ಣ ಕೂಡಾ .....

‘ಕಲಿಗಾಲ.....’

## ೨

ಕೆಟ್ಟ ಸುದ್ದಿಯನ್ನು ಕೇಳಿದ ಆ ದಿನ ತನ್ನ ಓರಗೆಯವರೆಷ್ಟೋ ಜನ ನಕ್ಕಿದ್ದರು.

– ‘ಆದರೆ ಹೋದರೆ, ಅಜ್ಜಿಗೆ ಮೀಸೆ ಬಂದರೆ ......!’

– ‘ಐ–ಬಿಡಿ!’

ಗಾಳಿಯಲ್ಲಿ ಸುದ್ದಿ, ತೇಲಿ ಬಂದಿತ್ತು – ತೇಲಿ ಹೋಗಿತ್ತು.

ಸ್ವಲ್ಪ ಸಮಯದ ಅನಂತರ, ಅದನ್ನೆಲ್ಲರೂ ಮರೆತಿದ್ದ ಹೊತ್ತಿಗೆ, ಹೊಸ ಜನ ಅಲ್ಲಿಗೆ ಬಂದರು – ಹ್ಯಾಟು ಬೂಟು ತೊಟ್ಟ ಅಪರಿಚಿತರು; ಅವರ ಹಿಂದೂ ಮುಂದೂ ಓಡಾಡಿದರು ಗ್ರಾಮಾಧಿಕಾರಿಗಳು.

– ‘ಹಳ್ಳಿಯನ್ನು ಬಿಟ್ಟು ಹೋಗ್ಬೇಕು.’

– (‘ಆಹಾ! ಎಲ್ಲಿಗೆ ಯಾರಪ್ಪನ ಮನೆಗೆ?’)



– ‘ಏ ಗೌಡ! ನೀನೊಬ್ಬನೇ ಅಲ್ಲ ಕಣಯ್ಯ’

– ‘ರೀ, ಗೌರವ ಕೊಟ್ಟು ಮಾತನಾಡಿ.’

“ಓ ಐ ಸೀ”

– ‘ಒಟ್ಟು ಹನ್ನೆರಡು ಹಳ್ಳಿ ಖಾಲಿಯಾಗ್ತವೆ.’

– ‘ಅನ್ನೆರಡು ಅಳ್ಳಿ?’

– “ಹೂಂ. ದೇಸಾಯರು, ಜೋಡೀದಾರ್ರು, ಇನಾಂದಾರ್ರು – ಎಲ್ರೂ ಒಪ್ಕೊಂಡಿದ್ದಾರೆ. ಸಣ್ಣ ಪುಟ್ಟ ಆಸ್ತಿ ಇರೋ ನಿಮ್ಮದೇನಪ್ಪ ಇನ್ನು?”

ಮಹಾ ಬುದ್ಧಿವಂತರೇ ಸರಿ. ಚತುರೋಪಾಯಗಳೂ ಗೊತ್ತಿದ್ದುವು ಅವರಿಗೆ. ಪರಿಹಾರ–ಹಣ. ‘ಬೇರೆ ಕಡೆ ಭೂಮಿ ಕೊಂಡ್ಕೋಬಹುದು.’ ಅಥವಾ ಹೊಲಕ್ಕೆ ಬದಲು ಹೊಲ (ಬಂಜರು ಭೂಮಿಗೇನು ಬರಗಾಲ?). ಸಾವಿರಾರು ಜನರಿಗೆ ಕೆಲಸ ಬೇರೆ.

“ಕೆಲಸ? ಎಂಥ ಕೆಲಸ?”

“ಕೂಲಿ ಕೆಲಸ.”

“ಕೂಲಿ...? ನಾವು ರೈತರು. ಕೂಲಿ–ನಾಲಿ ಮಾಡೋವರಲ್ಲ!”

“ಈ ರೈತರಿಗೆ ಒಂದೂ ಅರ್ಥವಾಗೋದಿಲ್ಲ.”

“ಹುಂ!”

“ಈ ಹಳ್ಳಿಗಳೆಲ್ಲ ನೀರಿನ ಕೆಳಗೆ ಮುಳುಗುತ್ವೆ ಗೌಡರೆ!”

“ನೀರಿನ ಕೆಳಗೆ? ಮುಣುಗುತ್ವೆ?”

“ಹೌದು. ಸಾವಿರ ಎಕರೆ ಮುಳುಗಿದರೇನ್ರಿ? ಲಕ್ಷ ಎಕರೆ ಭೂಮಿಗೆ ನೀರು ಸಿಗುತ್ತೆ. ಅಷ್ಟೇ ಅಲ್ಲ.....”

“ಸಾಕು! ಸಾಕು!”

ಸಿಡಿಮಿಡಿಗೊಂಡ ತಾನು ದಡದಡನೆ ಅಲ್ಲಿಂದ ಹೊರಟುಬಿಟ್ಟಿದ್ದ. ರಾಮ ಮಾತ್ರ ಆ ಜನರ ಜತೆಯಲ್ಲಿ ಮಾತುಗಳಿಗೆ ಕಿವಿಗೊಡುತ್ತ ನಿಂತಿದ್ದ. ಕತ್ತಲಾಗುವ ಹೊತ್ತಿಗೆ ಮನೆಗೆ ಬಂದ.

“ಅಲ್ಲೇನೊ ಮಾಡ್ತಿದ್ದೆ ಇಷ್ಟೊತ್ತು?”

“ಇಕಾ, ಕಾಜಗ ಕೊಟ್ಟವ್ರೆ. ಇದರೊಳಗೆಲ್ಲಾ ಪಿರಿಂಟ್ ಮಾಡೈತೆ.”

“ಪಿರಿಂಟ್ ಮಾಡೈತೆ – ಮಣ್ಣು!”

* * * * *

ಮುಂದೆ ಆಗಬೇಕಾಗಿದ್ದುದು ಆಗಿಯೇ ಹೋಯಿತು. ರಾಮ ಪಲ್ಲವಿ ನುಡಿದ:

“ನಡಿ, ಓಗಾನ. ಎಲ್ಲಾರಿಗಾಗೋದು ನಮಗೂ ಆಗ್ತೇತೆ.”

ಹೊಲವನ್ನು ಮಾರಲಿಲ್ಲ ನಾನು. ಬದಲಿ ಭೂಮಿಯನ್ನು ಕೊಟ್ಟರು. ಮೂರೆಕರೆಗೆ ಮೂರೆಕರೆ. ನದಿಯ ದಂಡೆಯಲ್ಲಲ್ಲ. ಕೆಳಕ್ಕೆ, ಒಳಕ್ಕೆ.



ಹುಟ್ಟಿ ಬೆಳೆದ ಹಳ್ಳಿಯ ಹನುಮಂತರಾಯನ ಗುಡಿಯ ಮುಂದೆ ನಿಂತು ನಾನೆಂದೆ:

"ಓಗ್ಬರ್ತೀವಪ್ಪಾ. ಅಳ್ಳಿ ಮುಣಿಗಿಸ್ತೌದು. ನಿನ್ನನ್ನು ಮುಣಿಗಿಸೋಕಾತದಾ? ಮನಿಷ್ಯರು ತಿಳೀದೆ ತಪ್ಮಾಡ್ತಾ ಅವರೆ. ಕ್ಷಮ್ಸಪ್ಪಾ."

ವಲಸೆ ಬಂದವರನ್ನು ಅಣಕಿಸಿತು ಬರಿದಾಗಿದ್ದ ಹೊಸ ಮಣ್ಣು. ಆ ನೆಲಕ್ಕೆ ಕೈ ಬಡೆದು, ಅಂಥ ಸ್ಥಿತಿಗೆ ನಮ್ಮನ್ನು ತಂದವರಿಗೆ ನಾನು ಶಾಪವಿತ್ತೆ; ಹಣೆ ಚಚ್ಚಿಕೊಂಡು ಮನದಣಿಯೆ ಅತ್ತೆ.

..... ಆ ದಿವಸದಿಂದ ಇವತ್ತಿನವರೆಗೆ – ಈ ಮೂರು ವರ್ಷಗಳ ಕಾಲ – ಏನನ್ನೆಲ್ಲ ಕಂಡೆ ನಾನು!

ಮೊದಮೊದಲು, ಎಲ್ಲೋ ಕೇಳಿದ ಯಾವುದೋ ಸುದ್ದಿ ಎನ್ನುವ ಹಾಗೆ – ಬಳಿಕ ಉತ್ಸಾಹದಿಂದ – ನನ್ನ ಮಗ ರಾಮನೇ ಬಂದು ಹೇಳುತ್ತಿದ್ದ:

"ಎಲ್ರೂ ಬಂದ್ಬಿಟ್ಟವ್ರೆ. ನದೀಲಿ ತಳ ಎಷ್ಟು ಆಳಕ್ಕೈತೆ ಅಂತ ಭೈರಿಗೆ ಕೊರೆದು ನೋಡ್ತವ್ರೆ. ದೊಡ್ಡೊಡ್ಡ ಲಾರಿಗ್ಳು ಬಂದವೆ – ಅತ್ತಿಪ್ಪತ್ತು. ಮಿಸ್ನುಗಳೂ ಯಂತ್ರಗಳೂ ಬಂದ್ಬಿಟ್ಟಿವೆ. ಅದೇನೋ ಕ್ರೇನೂಂತ ತಗೋಂಡ್ಬಂದವ್ರೆ ಅಪ್ಪಾ. ತೆಂಗಿನಮರದಂಗೆ ಎತ್ತರಕ್ಕೈತೆ. ಎಂಗ್ಬೇಕಾದರೂ ತಿರುಗ್ತೇತೆ. ಕೈಯಿಂದ ಕಡ್ಡೀನ ಇಂಗೆತ್ತಿ ಆಂಗ್ಮಡಾಕಿಲ್ವಾ ನಾವು? – ಆಂಗೇನೆ, ಎಸ್ಟ್ ಬಾರದ್ದಾಮಾನಿದ್ರೂ ಒಂದ್ಕಡೆಯಿಂದ ಇನ್ನೊಂದ್ಕಡೆಗಿಡ್ತೇತೆ."

ನಮ್ಮ ನದಿ. ಬೇಸಗೆಯಲ್ಲಿ ಕಿರುಬೆರಳಿನಷ್ಟು ನೀರು. ಮಳೆ ಬಂದಾಗ ಕೆರಳಿದ ಮಹಾ ಕಾಳಿ. ಏನಾದರೇನು? ಮನುಷ್ಯ ಮಾಡುವ ತಪ್ಪಿಗೆ, ಅದು ದೇವರು ಕೊಡುವ ಶಿಕ್ಷೆ. ಅಂಥ ದೇವರ ಶಕ್ತಿಯೊಡನೆ ಈ ಜನರ ಸೆಣಸಾಟ. ನಾಸ್ತಿಕರು! ಹುಂ!

ರಾಮನೆಂದ:

"ಹಾಫೀಸರ್‌ಗಳಲ್ಲಿ ಬಿರಾಮರು, ಲಿಂಗವಂತರು, ಒಕ್ಕಲಿಗರು, ಸಾಬರು, ಕಿರಸ್ತಾನರು – ಎಲ್ಲಾ ಜಾತಿಯವರೂ ಅವರೆ."

ಕಟ್ಟುನಿಟ್ಟಾಗಿ ನಾನೆಂದೆ:

"ಅವರ ಜತೆ ನೀನು ಸೇರ್ಕೊಬ್ಯಾಡ."

ದಿನ ಕಳೆದ ಹಾಗೆ ಜನರೆಲ್ಲ ಅವರ ಜತೆ ಸೇರಿದರು. ಕೆಲಸದ ಜಾಗಕ್ಕೆ ಅಂಟಿಕೊಂಡೇ ಊರು ಹುಟ್ಟಿತು. ಎಲ್ಲೆಲ್ಲಿಂದಲೊ ಜನರು ಬಂದರು. ಸಾವಿರ – ಹತ್ತು ಸಾವಿರ – ಇಪ್ಪತ್ತು ಸಾವಿರ ಜನ. ಹೆಣ್ಣಾಳು, ಗಂಡಾಳು. ಹಟ್ಟಿಗಳನ್ನು ಕಟ್ಟಿದರು. ಜತೆಯಲ್ಲೆ ಹೋಟೆಲು ಬಂತು.... ದಿನಸಿನಂಗಡಿ, ಹೆಂಡದಂಗಡಿ..... ಮಣ್ಣು ಅಗೆಯುವವರು, ಕಲ್ಲು ಕಡಿಯುವವರು.... ಮನುಷ್ಯರು, ಯಂತ್ರಗಳು. ಕಿವಿ ಕಿವುಡಾಗುವ ಹಾಗೆ ಹಗಲೆಲ್ಲ ಸದ್ದು. ಮಣ್ಣು ತೋಡಿ ಕಲ್ಲಿರಿಸಿದರು. ಕಲ್ಲು, ಗಾರೆ; ಕಲ್ಲು ಗಾರೆ.

'ಮಳೆ ಬರಲಿ, ಆಗ ತಿಳೀತದೆ' ಎಂದುಕೊಂಡೆ.

ಮಳೆ ಬಂತು. ಕಟ್ಟಿದ್ದು ಮಿಸುಕಲಿಲ್ಲ.

ನವರಾತ್ರಿಯ ರಜೆಯಲ್ಲಿ ಮನೆಗೆ ಬಂದ ಕೃಷ್ಣನೆಂದ:

"ಅಣೆಕಟ್ಟು ಕಟ್ಟಿದ್ಮೇಲೆ ಮಹಾಪೂರ ಬರೋದಿಲ್ಲ. ಕಾಲಿವೆ ಕಡಿದು, ಊರೂರಿಗೆ ನೀರು ತಗೊಂಡು ಹೋಗ್ತಾರೆ. ಎಲ್ಲೆಲ್ಲೂ ಬೆಳೆ ಬೆಳೀತದೆ. ವಿದ್ಯುಚ್ಛಕ್ತಿ ಉತ್ಪಾದಿಸ್ತಾರೆ. ಮನೆ ಮನೆಗೆ ದೀಪ ಬರ್ತದೆ. ಕಾರ್ಖಾನೆಗಳು ಹುಟ್ಕೋತವೆ. ನದೀಲಿ ದೊಡ್ಡ ದೊಡ್ಡ ದೋಣಿಗಳು ಸಂಚಾರ ಮಾಡ್ತವೆ."

ರೇಗುತ್ತ ನಾನೆಂದೆ:



"ನಮ್ಮ ಅಳ್ಳಿ ಏನಾಗ್ತೇತೆ?"

"ಅಳ್ಳಿ ಮುಳುಗೋಗ್ತದೆ."

"ಅಂಗಂತೀಯಾ ನೀನೂ?"

"ಈ ಪುಸ್ತಕದಲ್ಲಿ ಬರೆದವರೆ"

"ನಿನ್ನ ಪುಸ್ತಕನ ಸುಡ್ತು!"

ಹುಡುಗರು ಮೊದಲು ಕೆಟ್ಟರು. ವಯಸ್ಸಾದವರು ಆಮೇಲೆ. ಲೋಕ ತಲೆಕೆಳಗಾಗಿ ಹಾಳಾಗುತ್ತಿದ್ದುದನ್ನು ನೋಡಲು ನಾನೊಬ್ಬನೆ ಉಳಿದೆನೆನಿಸಿತು....

ಭೂಮಿತಾಯಿ ಮುನಿದಳು. ಅರೆ ಹೊಟ್ಟೆ ಕೆಡವಿದಳು.

.... ವರ್ಷ ಒಂದಾಯಿತು. ಅನಂತರವೂ ಒಂದು. ನದಿಗೆ ಅಡ್ಡವಾಗಿ ಮರಳಿನ ಗೋಡೆ ಕಟ್ಟಿ ಅದರ ಹಾದಿಯನ್ನೆ ಬದಲು ಮಾಡಿದರು. ಎರಡೂ ಕಡೆಗಳಿಂದ ಬಂದಿದ್ದ ಅಣೆಕಟ್ಟು ನಡುವೆ ಕೂಡಿಕೊಂಡಿತು. ನೀರು ನಿಂತು ಕೆರೆಯಾಯಿತು. ನದಿ ಆಳವಾಯಿತು.

ಆಗ ಬಲ್ಲಿದನಾಗಿದ್ದ ರಾಮನನ್ನು, ಕೆಣಕಿ ಕೇಳಿದೆ.

"ಅಳ್ಳಿಗಳನ್ನ ಯಾವತ್ತು ಮುಣುಗಿಸ್ತಾರೆ?"

"ಇನ್ನೇನು, ಮುಣುಗೋಗ್ತವೆ."

"ಉಂ! ಅನುಮಂತರಾಯನ ಗುಡಿಯೊಳಕ್ಕೆ ನೀರು ನುಗ್ಲಿ. ಆ ಮ್ಯಾಕೆ ಯೇಳ್ತಿನಿ!"

ಗುಡಿಯೊಳಕ್ಕೆ ನೀರು ನುಗ್ಗಿತು. ಗುಡಿ ಮುಳುಗಿತು. ಹನುಮಂತರಾಯ ಆಕ್ಷೇಪಿಸಲಿಲ್ಲ. ಕೆರೆ ಸರೋವರವಾಯಿತು. ಸರೋವರ ನೀರಸಾಗರವಾಯಿತು. ದೇವರು ತುಟಿಪಿಟ್ಟೆನ್ನಲಿಲ್ಲ.

ನನ್ನೊಳಗಿನದೇನೋ ಕುಸಿದುಬಿದ್ದಂತಾಯಿತು.

**– ನಿರಂಜನ**

### ನಿರಂಜನ

ನಿರಂಜನರು ದಕ್ಷಿಣ ಕನ್ನಡ ಜಿಲ್ಲೆಯ ಕುಳಕುಂದದಲ್ಲಿ ೧೯೨೪ರಲ್ಲಿ ಜನಿಸಿದರು. ಇವರ ನಿಜವಾದ ಹೆಸರು ಶಿವರಾಯ. ನಿರಂಜನ ಎನ್ನುವುದು ಕಾವ್ಯನಾಮ. ಪ್ರೌಢಶಾಲಾ ಶಿಕ್ಷಣದ ಬಳಿಕ ಇವರು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ರಾಷ್ಟ್ರಬಂಧು, ತಾಯಿನಾಡು, ಜನವಾಣಿ, ಪ್ರಜಾವಾಣಿ, ಸಂಯುಕ್ತ ಕರ್ನಾಟಕ ಪತ್ರಿಕೆಗಳಲ್ಲಿ ಇವರು ಅಂಕಣಗಾರರಾಗಿ ಪ್ರಸಿದ್ಧರಾಗಿದ್ದರು. ಇವರು ೭೦ ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಕಲ್ಯಾಣ ಸ್ವಾಮಿ, ರಂಗಮ್ಮನ ವಠಾರ, ಅಭಯ, ನಂದಗೋಕುಲ, ಮೃತ್ಯುಂಜಯ ಸ್ವಾಮಿ, ಅಪರಂಪಾರ, ಚಿರಸ್ಮರಣೆ ಮೊದಲಾಗಿ ೨೫ ಕಾದಂಬರಿಗಳನ್ನು ಬರೆದಿದ್ದಾರೆ. ೬ ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ೧೯೯೧ರಲ್ಲಿ ಇವರು ನಿಧನ ಹೊಂದಿದರು. ಈ ಸಣ್ಣಕತೆಯು ನಿರಂಜನರ 'ಒಂಟಿ ನಕ್ಷತ್ರ ನಕ್ಕಿತು' ಎಂಬ ಕಥೆಯ ಸಂಗ್ರಹರೂಪವಾಗಿದೆ.

❒ 'ಅಣೆಕಟ್ಟು ನಿರ್ಮಾಣವಾಗದಿರುತ್ತಿದ್ದರೆ ಏನಾಗುತ್ತಿತ್ತು?' ಎಂಬುದನ್ನು ಊಹಿಸಿ ಕಥೆಯನ್ನು ಮುಂದುವರಿಸಿ ಬರೆಯಿರಿ.



- ❒ ಈ ಕಥೆಯನ್ನು ಛಾಯಾಗ್ರಹಣದ ಮೂಲಕ ನೀವು ದಾಖಲಿಸಿಕೊಳ್ಳುವುದಾದರೆ ಯಾವೆಲ್ಲ ಸಂದರ್ಭಗಳನ್ನು ಆಯ್ದುಕೊಳ್ಳುತ್ತೀರಿ? ಅದರಲ್ಲಿ ಯಾವೆಲ್ಲ ಅಂಶಗಳು ಒಳಗೊಂಡಿರುತ್ತವೆ ಎಂಬುದನ್ನು ವಿವರಿಸಿ ಬರೆಯಿರಿ.
- ❒ 'ನನ್ನೊಳಗಿನದೇನೋ ಕುಸಿದು ಬಿದ್ದಂತಾಯಿತು' ಮುದುಕನ ಮಾನಸಿಕ ಸಂಘರ್ಷವನ್ನು ಈ ಮಾತು ವ್ಯಕ್ತಪಡಿಸುತ್ತದೆ. ತನ್ನ ಮನಸ್ಸಿನ ನೋವನ್ನು ಮುದುಕನು ತನ್ನ ದಿನಚರಿಯಲ್ಲಿ ಹೇಗೆ ಬರೆದಿರಬಹುದು? ಊಹಿಸಿ ಬರೆಯಿರಿ.
- ❒ ನೀವು ಒಂದನೆಯ ತರಗತಿಯಲ್ಲಿ ಕಲಿಯುತ್ತಿರುವಾಗ ಇದ್ದ ನಿಮ್ಮ ಪ್ರದೇಶದ ಸ್ಥಿತಿಗತಿಯನ್ನು ನೆನಪಿಸಿಕೊಳ್ಳಿರಿ. ಅದನ್ನು ಈಗಿನ ಸ್ಥಿತಿಗತಿಗೆ ಹೋಲಿಸಿ ಆದ ಬದಲಾವಣೆಯನ್ನು ಗುರುತಿಸಿ ಬರೆಯಿರಿ.
- ❒ ಈ ಕಥೆಗೆ ಬೇರೊಂದು ಸೂಕ್ತವಾದ ಶೀರ್ಷಿಕೆಯನ್ನು ಕೊಡಿರಿ.

* * *

# 3

# ಊಟ ಬಲ್ಲವನಿಗೆ ರೋಗವಿಲ್ಲ





❐ ಮೇಲಿನ ಚಿತ್ರಗಳನ್ನು ಗಮನಿಸಿದಿರಲ್ಲವೇ? ಅವುಗಳ ಕುರಿತಾಗಿ ನಿಮ್ಮ ಅಭಿಪ್ರಾಯವನ್ನು ಬರೆದು ತರಗತಿಯಲ್ಲಿ ಮಂಡಿಸಿರಿ.

## ಜಾಹೀರಾತು ದುನಿಯಾ

"ಇಡೀ ದುನಿಯಾದಲ್ಲಿ ಅತಿ ಕೆಟ್ಟ ದುನಿಯಾ ಯಾವುದು ಗೊತ್ತಾ?"

"ಇದೆಂತಹ ಮೂರ್ಖ ಪ್ರಶ್ನೆ? ಇರೋದೆ ಒಂದು ದುನಿಯಾ ಅಲ್ಲವೇ?"

"ನೀವನ್ನೋದು ನಿಜ ಸ್ವಾಮೀ. ಈ ಪ್ರಶ್ನೆ ನಂದಲ್ಲಾ. ನಮ್ಮ ಪಕ್ಕದ ಮನೆಯ ನಂದಕ್ಕಾ ಅವರದು."

ಧಾರವಾಡದ ನಂದಾ ಹೊಸಮನಿಯವರು ನಮ್ಮ ಬಾಜೂ ಮನಿಗೆ ಹೊಸದಾಗಿ ಬಂದಾಗಿನಿಂದ ಅಂಟಿನುಂಡೆಯ ರುಚಿಯನ್ನು ನನ್ನ ನಾಲಿಗೆಗೆ ಅಂಟಿಸಿಬಿಟ್ಟಿದ್ದಾರೆ. ಅದರಲ್ಲಿರುವ ಶಕ್ತಿವರ್ಧಕ ಜಿನಿಸುಗಳನ್ನು ನೋಡಿ ನನ್ನ ಮಕ್ಕಳಿಗೂ ಇದನ್ನು ಮಾಡಿಕೊಟ್ಟು ಕಟ್ಟುಮಸ್ತಾಗಿ ಮಾಡುವ ಕನಸು ಹೊತ್ತು ಅಂಟಿನುಂಡೆಯನ್ನು ಮಾಡುವುದನ್ನು ಕಲಿಯುವುದಕ್ಕೋಸ್ಕರ; ನಂದಕ್ಕ ಅವರು ಕೊಟ್ಟ ಲಿಸ್ಟ್ ಪ್ರಕಾರ ಸಾಮಾನುಗಳನ್ನು ಹಿಡಿದುಕೊಂಡು ಪಕ್ಕದ ಮನೆಗೆ ಹೋದೆ.



ನಂದಾ ಹೊಸಮನಿಯವರು ಹಾಲ್‌ನಲ್ಲಿ ಒಂದಿಷ್ಟು ಕ್ರೀಮು, ಪೌಡರ್, ಶಾಂಪೂ, ಸೋಪು ಮುಂತಾದವುಗಳನ್ನು ಗುಡ್ಡೆ ಹಾಕಿಕೊಂಡು, ಒಂದು ನೋಟ್‌ಬುಕ್ಕು ಹಾಗೂ ಪೆನ್ನು ಹಿಡಿದು ಕೂತಿದ್ದರು.

"ಏನ್ರೀ ನಂದಕ್ಕಾ. ಇದೇನ್ ಇಷ್ಟೊಂದು ಸಾಮಾನು ಇಟ್ಕೊಂಡಿದ್ದೀರಿ? ಏನಾದ್ರೂ ಬಿಸಿನೆಸ್ ಶುರು ಮಾಡಿದ್ರಾ ಹೇಗೆ?" ಎಂದೆ.

"ಅಯ್ಯೋss.... ಅದರ ಕಥೀ ಏನ್ ಹೇಳ್ಳವ್ವಾ? ಆ ಮೂಲ್ಯಾಗ್ ಕುಂತು ಪ್ರಲಾಪ್ ಮಾಡ್ತಾ ಇರ್ತೈತಲ್ಲಾ; ಅದ್ರ ಪ್ರತಾಪ್ ಇದು. ಈ ದುನಿಯಾದಾಗ ಅತೀ ಕೆಟ್ ದುನಿಯಾ ಯಾವ್ದು ಗೊತ್ತೈತೇನ್ ನಿನಗ?"

ಪ್ರೈಮರಿ ಹುಡುಗರಿಗೆ ಹದಿನೆಂಟರ ಮಗ್ಗಿ ಕೇಳಿದ ಹಾಗೆ ಆಯ್ತು ನನ್ನ ಪರಿಸ್ಥಿತಿ. ಪ್ರಶ್ನೇನೇ ಅರ್ಥವಾಗದೆ ಸುಮ್ಮನೆ ನಿಂತೆ.

"ಆ ಮೂಲ್ಯಾಗ ಕುಂತಾನ್ ನೋಡು. ಅವನೇ ಈ ದರಿದ್ರ ದುನಿಯಾದ (ಅ) ಧರ್ಮ ಪ್ರಚಾರಕ. ಈ ಜಾಹೀರಾತು ದುನಿಯಾ ಏನದ, ಅದರಂತಾ ಕೆಟ್ ದುನಿಯಾ ಇನ್ನೊಂದಿಲ್ ನೋಡ್. ಇದ್ದಿದ್ರಲ್ಲೇ ನಮ್ಮಿಂದ ಬದ್ಕ್ ಮಾಡ್ಕೊಂಡಿದ್ದ ನಮ್ಮನ್ನ ನಿರ್ನಾಮ ಮಾಡಾಕೇಂತ ಹೊಂಟ್ಯಾದಲ್ಲಾ ಈ ಜಾಹೀರಾತು ದುನಿಯಾ. ಆದ್ರ ಸೇನಾಪತಿ ಯಾರು ಗೊತ್ತೈತೇನ್? ಮನೀ ಮೂಲ್ಯಾಗ ಠೀವಿಯಿಂದ ಕುಂತಿರೋ ಟಿ.ವಿ. ಮಹಾಶಯ. ಅವನಿಂದ್ಲೇ ಇಷ್ಟೆಲ್ಲಾ ಆಗ್ತಿರೋದು."

ನಂದಕ್ಕನ ನಾನ್‌ಸ್ಟಾಪ್ ಕಾಮೆಂಟ್ರಿಯಿಂದ ನನಗೆ ವಿಷಯ ಸ್ವಲ್ಪ ಸ್ವಲ್ಪ ಅರ್ಥವಾಗತೊಡಗಿತು.

"ನೋಡವಾ ಶಾಲೀ. ಈ ಅರ್ಧ ಡಝನ್ ಸೋಪುಗಳು ಯಾವ್ದು ಯಾವ್ದಕ್ಕೋ ಫ್ರೀ ಆಗಿ ಬಂದಾವ. ಯಾರ್ಗೂ ಬೇಡದ ನೊರೆಯೂ ಬರದ, ಬಂದ ನೊರಿ ಎಷ್ಟು ತೊಳೆದರೂ ಹೋಗದ ಕೆಟ್ ವಾಸನೆಯ ಸೋಪುಗಳು. ಇವನ್ನ ಎಸೀಬಾರ್ದು ಅಂದ್ರೆ ನಾನೇ ಹಚಗೊಂಡು ಸ್ನಾನ ಮಾಡ್ಬೇಕ್. ಇಕಾ, ನೋಡ್ ಉಜ್ಜಿದರೆ ಒಸಡಿನ ಚರ್ಮ ಕಿತ್ತು ಬರುವಂತಹ ಟೂತ್‌ಬ್ರಶ್‌ಗಳು. ಇಲ್ಲಿದಾವಲ್ಲ ಈ ಮುಖಕ್ಕೆ ಹಚ್ಚೊ ಕ್ರೀಮ್‌ಗಳು. ಒಂದ್ವಾರದಲ್ಲಿ ಬೆಳ್ಳಗಾಗ್ತಾರಂತ ಈ ಟಿ.ವಿ. ಮಹಾಶಯ ವಾರ ವಾರ ಬೇರೆ ಬೇರೆ ಹೆಸರು ಹೇಳಿದ್ದ. ನನ್ನ ಮಗ್ಳು ಕಾಲೇಜ್ ಕನ್ಯೆ ಒಂದ್ವಾರದಲ್ಲಿ ಬೆಳ್ಳಗಾಗಿ ಛಂದ ಕಾಣಿಸಿ ಕಾಲೇಜಿನ ಬ್ಯೂಟಿ ಕ್ವೀನ್ ತಾನೆ ಆಗಬೇಕು ಅಂತ ತಂದು ಪ್ರಯೋಗ ಮಾಡಿ ಉಪಯೋಗ ಆಗ್ದೆ ಬಿಟ್ಟಿದ್ದು" ಶೇವಿಂಗ್ ಕ್ರೀಮು, ಪೌಡರ್ ಹೀಗೆ ಹತ್ತು ಹಲವಾರು ಸಾಮಾನುಗಳು ಎಲ್ಲದಕ್ಕೂ ಕಾರಣ ಕೊಡುತ್ತಾ ಬೇರೆ ಬೇರೆ ವಿಂಗಡಿಸಿದರು.

"ಅಲ್ಲವಾ ಶಾಲಿ, ಮನೀ ಖರ್ಚು ಹ್ಯಾಂಗ್ ಏರ್‍ಯಾವ ಗೊತ್ತೇನ?" ಆ ಮೂರ್ಖರ ಪೆಟ್ಟಿಗೇಲಿ ಮುಖ ತೋರಿಸೋ ಮೋಹನಾಂಗಿಯರ ಮಾತಿಗೆ ಮರುಳಾಗಿ ಕಂಡಿದ್ದೆಲ್ಲಾ ಕೊಂಡುಕೊಂಡರೆ ರೊಕ್ಕಾ ಹ್ಯಾಂಗ್ ಹೊಂದ್ಸೂದು ಅಂತೀನಿ. ದೊಡ್ಡವ್ರಿಗೂ ತಿಳಿಯಾಕಿಲ್ಲೇನು? ವರ್ಷ ಐವತ್ತಾತು. ಅದ್ಯಾವುದೋ ತೈಲ ಒಂದ್ವಾರ ಹಚಗೊಂಡ್ರೆ ಬಿಳಿ ಕೂದ್ಲಾ ಕಪ್ಪಾಗತ್ತದ, ಎರಡು ವಾರ ಹಚ್ಚಗೊಂಡ್ರೆ ತಲೀ ತುಂಬಾ ಕೂದ್ಲಾ ಬೆಳೀತದ ಅಂತ ಜಾಹೀರಾತು ನೋಡಿ ರೊಕ್ಕಾ ಕೊಟ್ಟು ತಂದು ಹಚಗೊಂಡಾರ. ಇದ್ದ ನಾಲ್ಕು ಕೂದ್ಲೂ ಉದರಾಕ ಹತ್ತಿದ ಮ್ಯಾಗೆ ಮೂಲೆಗೆ ಬಿಸಾಡಿದ್ರು. ನಿಮ್ಮ ಬುದ್ಧಿಗಿಷ್ಟು ಅಂತ ನಾ ಹೇಳಿದ್ರೆ ಹೋಗ್ಲಿ ಬಿಡು. ಎರಡ್ ತಿಂಗ್ಳಿಗೊಂದ್ಸಲ ಹೇರ್ ಕಟ್ ಮಾಡ್ಸಿದ್ರಾತು. ರೊಕ್ಕ ಉಳೀತು ಅಂದ್ರು."



ಜಾಹೀರಾತಿನ ಜನ್ಮಜಾಲಾಡಿ ಸುಸ್ತಾಗಿ ಉಸಿರು ತೆಗೆದುಕೊಳ್ಳಲು ನಂದಕ್ಕ ಮಾತು ನಿಲ್ಲಿಸಿದಾಗ ನಾನು ಶುರು ಮಾಡಿದೆ "ಜಾಹೀರಾತಿಗೆ ಮರುಳಾಗೋದ್ರಲ್ಲಿ ನಾವೂ ಏನ್ ಕಡಿಮೆ ಇಲ್ಲ ನಂದಕ್ಕಾ. ನಾನು ಹೋದ ತಿಂಗಳು ಯಾವುದೋ ಕಂಪೆನಿಯ ಜಿಲೇಬಿಮಿಕ್ಸ್ ಜೊತೆಗೆ ರವೆಇಡ್ಲಿಮಿಕ್ಸ್ ಫ್ರೀ ಅಂತ ತಂದೆ. ರವೆ ಇಡ್ಲಿ ಕಮಟು ವಾಸನೆ ಅಂತ ಯಾರೂ ತಿನ್ನದೆ ಇದ್ದಾಗ ಮನೆಗೆಲಸದ ಮಾದೇವಿಗೆ ಕೊಟ್ಟರೆ.... "ಅಮ್ಮಾ, ಕೊಡೋದಾದ್ರೆ ಮಾಡಿದ ದಿವ್ಸ ಫ್ರೆಶ್ ಆಗಿ ಕೊಡ್ರಿ. ವಾರಗಟ್ಟಲೆ ಫ್ರಿಜ್ಜಿನಲ್ಲಿ ಇಟ್ಕೊಂಡು ಕೊಡಬೇಡಿ" ಅಂತ ಹೇಳಿ ಬೀದಿನಾಯಿಗೆ ಹಾಕಿದ್ರೆ ಅದೂ ಮೂಸಿ ನೋಡಿ ಹಾಗೇ ಬಿಟ್ಟುಹೋಯಿತು. ಅವಮಾನ ಆಯ್ತು. ಹೋಗ್ಲಿ ರವೆಇಡ್ಲಿಮಿಕ್ಸ್ ಹೇಗೂ ಫ್ರೀ ಬಂದಿದ್ದು. ಜಿಲೇಬಿನಾದ್ರೂ ಮಾಡಿ ತಿನ್ನೋಣ ಅಂತ ಜಿಲೇಬಿ ಮಾಡಿದ್ರೆ ತಿಂದವ್ರಿಗೆಲ್ಲಾ ಜುಲಾಬು ಹಿಡ್ಕೊಂಡು ಡಾಕ್ಟರ್‌ಗೆ ದಂಡ ತೆತ್ತಿದ್ದಾಯ್ತು" ಎಂದೆ.

"ನೋಡಿದ್ಯಾ ಮತ್ತೆ ಈ ಜಾಹೀರಾತಿನಿಂದ ನಮ್ಗೇನಾರ ಉಪ್ಯೋಗ್ ಐತೇನು? ಇವತ್ ಮುಂಜಾನಿ ಏನಾಯ್ತಂದ್ರ ಕೆಲ್ಸದಾಕಿ ಪದೇ ಪದೇ ತಪ್ಪಿಸ್ತಾಳ. ಈ ಜೀನ್ಸು, ಜಾಕೀಟು ಈಪಾಟಿ ಅರಿವಿ ನನ್ನ ಕೈಲಿ ಒಗ್ಯೂದಾಗಂಗಿಲ್ಲ ಒಂದ್ ಆಟೋಮೆಟಿಕ್ ವಾಶಿಂಗ್ ಮಶೀನ್ ಕೊಡಿಸ್ರೀ ಟಿ.ವಿ.ಯಾಗ ಬರೂವಂತದ್ದು" ಅಂದೆ. ಅದ್ಕೆ ನಮ್ಮ ಯಜಮಾನರು "ಹೇಮಮಾಲಿನಿನೇ ಅರಿವಿ ಒಗೀತಾಳ ನೋಡಿಲ್ಲೇನ್ ಟಿ.ವಿ.ಮ್ಯಾಗ? ಒಂದ್ಸಲ ಯಾವ್ದೋ ಪೌಡರ್‌ನಾಗೆ ಬಟ್ಟೆ ಒಗ್ದು ಕೆಂಪಗಾದ ಕೈ ತೋರಿಸಿ ಇನ್ನು ಮೇಲೆ ಬೇರೆ ಪೌಡರ್ ಉಪಯೋಗಿಸ್ತೀನಿ ಅಂತ ಆ ಪೌಡರ್ ಹೆಸರು ಸಹಿತ ಹೇಳಿದ್ಲು. ಅಂತದ್ರಲ್ಲಿ ನಿಂದೇನ್ ತರಲೆ ಅಂದ್ರ, ನಂಗೂ ಸಿಟ್ಟೇರ್ತು. "ಹೌದು ಹೌದು ಸಿನಿಮಾ ನಟ ಗೋವಿಂದಾನೂ ಅರಿವಿ ಒಗೀತಾನ" ಅಂದೆ. ಅದಕ್ಕ ನನ್ಮಗ "ಇಲ್ಲವಾ ನೀನ್ ಟಿ.ವಿ. ಸರಿಯಾಗಿ ನೋಡಂಗಿಲ್ಲ. ಗೋವಿಂದ ಅವರಮ್ಮಗ ಸೋಪು ಪೌಡರ್ ತಂದ್ಕೊಡ್ತಾನ. ಒಂದ್ ಕೆ.ಜಿ. ಪೌಡರ್ ಕೊಂಡರೆ ಒಂದು ಸೋಪು ಫ್ರೀ. ಸಂಜೆ ಕಾಲೇಜಿಂದ ಬರೂ ಮಟ ತರ್ತೀನಿ. ನೀ ಯೇನ್ ಯೋಚ್ನೆ ಮಾಡ್‌ಬ್ಯಾಡ" ಅಂತ ಹೇಳಿ ಹೋದ. "ನೋಡ ಶಾಲಿ, ಈ ಅಡ್ವರ್‌ಟೈಸ್‌ಮೆಂಟಿನಿಂದ ನಮಗ್ಯೇನಾರ ಉಪ್ಯೋಗ್ ಐತೇನು? ಅದಕ್ಕ ನಾನು ಅದನ್ನ ಅಡ್ಡ ಒರಟೈಸ್‌ಮೆಂಟ್ ಅಂತೀನಿ" ಅಂತ ತಮ್ಮ ಉದ್ದ ಮಾತಿಗೆ ಒಮ್ಮೆ ಫುಲ್‌ಸ್ಟಾಪ್ ಹಾಕಿದರು.

"ನಂದಕ್ಕ, ನೀವ್ ಹೇಳೋದ್ರಲ್ಲೂ ನಿಜ ಇದೆ. ಈ ಎಡ್‌ವರ್‌ಟೈಸ್‌ಮೆಂಟಿನ ಅಡ್ಡ ಪರಿಣಾಮ ಅತಿಯಾಗಿದೆ ಬಿಡಿ. ಮನೆಕೆಲಸದವಳು ಪಾತ್ರೆ ತೊಳೆಯೋದಕ್ಕೆ ಈ ವಾರ 'ಚಮಕ್ ಚಮಕ್' ಬಾರ್ ಕೇಳಿದ್ರೆ ಮುಂದಿನ ವಾರ ಮತ್ತೊಂದು. 'ಅದು ಯಾವುದೋ ನನಗೆ ಗೊತ್ತಿಲ್ಲ' ಅಂದರೆ ಯಾವ ಸೀರಿಯಲ್ ನಡುವೆ ಆ ವಸ್ತುವಿನ ಜಾಹೀರಾತು ಬರುತ್ತೆ ಎನ್ನುವುದನ್ನೂ ಹೇಳುತ್ತಾಳೆ. ಇನ್ನು ನೆಲ ಸಾರಿಸಲು 'ಬರೀ ನೀರಿನಲ್ಲಿ ಸ್ವಚ್ಛವಾಗಲ್ಲ ಫಿನೈಲ್ ಬೇಕು' ಅಂತಾಳೆ. ಅದೂ 'ಸಾದಾ ಫಿನೈಲ್ ಆಗಲ್ಲ ಕೀಟಾಣುಗಳು ಸಾಯಲ್ಲ' ಅಂತಾಳೆ. ಅದ್ರಲ್ಲೂ ವಾರಕ್ಕೊಮ್ಮೆ ಬ್ರಾಂಡ್ ನೇಮ್ ಬದಲಿಸ್ತಾಳೆ. ಈ ಜಂಜಾಟದಿಂದ ಬೇಜಾರಾಗಿ 'ಒಂದು ವಾರ ತೌರಿಗೆ ಹೋಗಿ ಬರ್ತೀನಿ. ನಂಗೆ ಅಡಿಗೆ ಕೆಲಸ ಮಾಡಿ ಮಾಡಿ ಬೇಜಾರಾಗಿದೆ' ಅಂತ ಅಂದ್ರೆ 'ಫರಿದಾ ಜಲಾಲ್ ಅಂತ ನಟಿಯೇ ಅದ್ಯಾವುದೋ ಉಪ್ಪು, ಇನ್ಯಾವುದೋ ಮಸಾಲೆಪುಡಿ ಉಪಯೋಗಿಸಿ ಅಡಿಗೆ ಮಾಡ್ತಾಳಂತೆ ನಿಂಗೇನ್ ಧಾಡಿ' ಅಂತಂದ್ರು ನಮ್ಮೆಜಮಾನ್ರು. ನಂದಕ್ಕಾ, ಇದಕ್ಕೆಲ್ಲಾ ನೀವಂದಂಗೆ ಈ ಟಿ.ವಿ.ನೇ ಕಾರಣ ನೋಡ್ರೀ...." ಹೀಗೆ ಇನ್ನೂ ಮಾತಾಡ್ತಾ ಮಾತಾಡ್ತಾ ಅಂಟಿನುಂಡೆ ಮಾಡಿ ಮುಗೀತು. ತಾಜಾ ತಾಜಾ ಡಬ್ಬ ಹಿಡ್ಕೊಂಡು ಮನೆಯೊಳಗೆ ಕಾಲಿಡುತ್ತಿದ್ದಂತೆ ಇಷ್ಟದ್ದ ಚಾಕೊಲೇಟ್ ಚೀಪುತ್ತಾ ನನ್ನ ಮಗ ಎದುರಾದ.



“ಅಯ್ಯೋ ಅಯ್ಯೋ ಇದೇನೊ ಇದು? ಹಾಲು ಕುಡಿದು ತಿಂಡಿ ತಿನ್ನೋದು ಬಿಟ್ಟು” ಎಂದು ಅರಚಿದೆ.

“ಈ ಒಂದು ಬಾರ್ ಚಾಕಲೇಟಿನಲ್ಲಿ ಒಂದು ಲೀಟರ್ ಕೆನೆಭರಿತ ಹಾಲಿದೆಯಮ್ಮ. ಇದರಲ್ಲಿ ಶಕ್ತಿ ಇದೆ. ರುಚಿ ಇದೆ. ಮತ್ತೆ ಎಲ್ಲಾ ಇದೆ” ಸ್ಟೈಲಾಗಿ ಉಲಿದ.

“ನಿನ್ನ ಹಲ್ಲೆಲ್ಲಾ ಕೊಳ್ತು ಹಾಳಾಗಿ ಹೋಗುತ್ತೆ ನೋಡು” ಎಂದೆ.

“ಬೆಳಿಗ್ಗೆ ಹೊಸ ಪೇಸ್ಟ್‌ನಿಂದ ಹಲ್ಲುಜ್ಜಿದೀನಮ್ಮಾ. ಅದರ ಎಫೆಕ್ಟ್ ಈಗಲೂ ಇದೆ” ಎಂದು ಟಿ.ವಿ. ಡೈಲಾಗ್ ಉರುಹೊಡೆದಾಗ ಸುಸ್ತಾಗಿ ಉಂಡೆ ಡಬ್ಬವನ್ನು ಟೇಬಲ್ ಮೇಲೆ ಬಡಿದು ಎದುರಿಗಿದ್ದ ಸೋಫಾದ ಮೇಲೆ ಕುಕ್ಕರಿಸಿದೆ.

***– ವಿಜಯ ಮಹಾಬಲೇಶ್ವರ***

**ವಿಜಯ ಮಹಾಬಲೇಶ್ವರ**

ಶ್ರೀಮತಿ ವಿಜಯ ಮಹಾಬಲೇಶ್ವರ ಅವರು ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಮೂರೂರಿನಲ್ಲಿ ൧൯൫൬ ರ ಜುಲೈ ൨ ರಂದು ಜನಿಸಿದರು. ಇವರು ಸಸ್ಯಶಾಸ್ತ್ರದಲ್ಲಿ ಪದವೀಧರರಾಗಿದ್ದಾರೆ. ಕನ್ನಡ ಭಾಷೆ, ಸಾಹಿತ್ಯ ಹಾಗೂ ಚಿತ್ರಕಲೆಯಲ್ಲಿ ಅವರಿಗೆ ವಿಶೇಷ ಆಸಕ್ತಿಯಿದೆ.

ಅವರ ಲಲಿತ ಪ್ರಬಂಧಗಳು ಮತ್ತು ಸಣ್ಣಕತೆಗಳು ಕನ್ನಡದ ಪ್ರಸಿದ್ಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ವೈ.ಎನ್. ಗುಂಡೂರಾವ್ ಸಂಪಾದಿಸಿದ ‘ಹಾಸ್ಯಾಂಬರ’ ಎಂಬ ಸಂಕಲನದಿಂದ ಈ ಲೇಖನವನ್ನು ಆರಿಸಲಾಗಿದೆ.

- ❒ ಜಾಹೀರಾತಿನ ಆಕರ್ಷಣೆಗೆ ಒಳಗಾಗಿ ವಿವಿಧ ರೀತಿಯಲ್ಲಿ ಮೋಸಹೋದ ಸನ್ನಿವೇಶಗಳನ್ನು ಈ ಹಾಸ್ಯಲೇಖನದಿಂದ ಆರಿಸಿ ಬರೆಯಿರಿ.
- ❒ ದುನಿಯಾ, ನೋಟುಬುಕ್ಕು ಇವುಗಳು ಅನ್ಯದೇಶೀಯ ಪದಗಳಾಗಿವೆ. ಪಾಠಭಾಗದಲ್ಲಿ ಬರುವ ಇತರ ಅನ್ಯದೇಶೀಯ ಪದಗಳನ್ನು ಪಟ್ಟಿ ಮಾಡಿರಿ.
- ❒ ‘ಏನ್ರೀ ನಂದಕ್ಕಾ, ಇದೇನ್ ಇಷ್ಟೊಂದು ಸಾಮಾನು ಇಟ್ಕೊಂಡಿದ್ದೀರಿ? ಏನಾದ್ರೂ ಬಿಸಿನೆಸ್ ಶುರು ಮಾಡಿದ್ರಾ ಹೇಗೆ?’ ಗ್ರಾಮ್ಯ ಶೈಲಿಯಲ್ಲಿರುವ ಈ ವಾಕ್ಯವನ್ನು ಕೆಳಗಿನಂತೆ ಶಿಷ್ಟಕನ್ನಡದಲ್ಲಿ ಬರೆಯಬಹುದು.

  ‘ಏನು ನಂದಕ್ಕಾ, ಇದೇನು ಇಷ್ಟೊಂದು ಸಾಮಾನು ಇಟ್ಟುಕೊಂಡಿದ್ದೀರಿ? ಏನಾದರೂ ಬಿಸಿನೆಸ್ಸು ಶುರು ಮಾಡಿದ್ದೀರಾ ಹೇಗೆ?’

  ಇದೇ ರೀತಿಯಲ್ಲಿ ಪಾಠಭಾಗದಲ್ಲಿ ಬಂದಿರುವ ಗ್ರಾಮ್ಯರೂಪದಲ್ಲಿರುವ ವಾಕ್ಯಗಳನ್ನು ಶಿಷ್ಟಕನ್ನಡ ರೂಪದಲ್ಲಿ ಬರೆಯಿರಿ.
- ❒ ನೀವು ಅಥವಾ ನಿಮ್ಮ ಆಪ್ತರು ಆಹಾರ ವಸ್ತುಗಳ ಕುರಿತಾದ ಜಾಹೀರಾತಿನ ಪ್ರಭಾವಕ್ಕೊಳಗಾಗಿ ಮೋಸಹೋಗಿರಬಹುದಲ್ಲವೇ? ಅದನ್ನು ಹಾಸ್ಯಲೇಖನವಾಗಿ ಬರೆದು ತರಗತಿಯಲ್ಲಿ ಮಂಡಿಸಿರಿ.
- ❒ ನಿಮ್ಮ ಊರಿನಲ್ಲಿ ‘ಕುಟುಂಬಶ್ರೀ’ಯವರು ತಯಾರಿಸಿದ ಯಾವುದಾದರೂ ತಿಂಡಿತಿನಸುಗಳ ತಾಜಾತನ ಮತ್ತು ಆರೋಗ್ಯಕರ ಅಂಶಗಳನ್ನು ಪ್ರತಿಬಿಂಬಿಸುವ ಜಾಹೀರಾತನ್ನು ತಯಾರಿಸಿರಿ.

* * *



# ಭರತೇಶನ ಆರೋಗಣೆ

(ಸಂದರ್ಭ : ವೃಷಭನಾಥನ ನೂರು ಮಂದಿ ಮಕ್ಕಳಲ್ಲಿ ಹಿರಿಯವನಾದ ಭರತ ಮಹಾರಾಜನು ಕೋಸಲ ದೇಶವನ್ನು ಆಳುತ್ತಿದ್ದನು. ಉದಯಕಾಲದಲ್ಲಿ ಎದ್ದು ದೇವತಾರ್ಚನೆ ಮುಗಿಸಿ, ಒಡ್ಡೋಲಗ ನೀಡಿ ಮಧ್ಯಾಹ್ನದವರೆಗೂ ಕವಿಗಳ ಗಾಯಕರ ಗೋಷ್ಠಿಯಲ್ಲಿದ್ದು ಅನಂತರ ಆರೋಗಣೆ ನಡೆಸುವುದು ಅವನ ದಿನಚರಿ. ಆತನ ಆರೋಗಣೆಯ ವರ್ಣನೆ ಇಲ್ಲಿದೆ.)

ಮಂಗಳ ಮೃದುತರಾಸನದಲ್ಲಿ ಚೌಕ ಸು
ಧಾಂಗವಾಗಿರೆ ನೃಪ ಕುಳಿತ
ಜಂಗಮಲತೆಗಳಂದದಿ ಬಂದು ಕುಳಿತರಾ
ಹೆಂಗಳೆಲ್ಲರು ಪಂತಿಯಾಗಿ ॥೧॥

ಸ್ತ್ರೀಯರು ತನ್ನೆಡಬಲದಲ್ಲಿ ಸಾಲಾಗಿ
ವೈಯಾರದಿಂದ ಕುಳ್ಳಿರಲು
ರಾಯನಿದ್ದನು ರತ್ನಹಾರದ ನಡುವಣ
ನಾಯಕರತ್ನದಂದದೊಳು ॥೨॥

ಹಲಬರು ರಾಯನ ಪಂತಿಯೊಳೂಟಕೆ
ಕುಳಿತರು ಮತ್ತವರಲ್ಲಿ
ಕೆಲಬರಾರೋಗಣೆಗೆಡೆಮಾಡಲನುವಾಗಿ
ಸುಳಿದಾಡುತಿರ್ದರರ್ತಿಯೊಳು ॥೩॥

ಕಾಂಚನದಿಂದ ರತ್ನಗಳಿಂದ ಬೆಳ್ಳಿಯಿಂ
ಸಂಚಿಸಿದುಪಕರಣಗಳ
ಚಂಚಲಾಕ್ಷಿಯರಾಂತು ಸುಳಿದರಾಗತ್ತಿತ್ತ
ಮಿಂಚಿನ ಲತೆಗಳೆಂಬಂತೆ ॥೪॥



ಆರೋಗಣೆಗೆ ಕುಳಿತಾ ರಾಯನೊತ್ತಿನ
ನಾರಿಯರೆಸೆದರೆಂತೆನಲು
ದೇವಾಮೃತವನುಂಬಮರೇಂದ್ರನೊತ್ತಿನ
ದೇವಾಂಗನೆಯರೆಂಬಂತೆ ||೫||

ಹೊಂಗೆಲಸದ ಭಾಜನದೊಳಿದ್ದಮೃತ ಸಾ
ರಂಗಳ ಸಕಲ ಭಕ್ಷ್ಯಗಳ
ತಂಗಿಗಕ್ಕಗೆ ಸ್ವಾಮಿಗಕ್ಕಾಜಿಗೆಂದು ಬೆ
ಡಂಗಿಯರುಣಬಡಿಸುವರು ||೬||

ಹಸ್ತಪ್ರಕ್ಷಾಲನ ಕೈಗಟ್ಟ ಮೊದಲಾದ
ಪ್ರಸ್ತುತಕ್ರಿಯೆಗಳ ಮಾಡಿ
ವಿಸ್ತೀರ್ಣತಲ್ಪದಮೇಲೆ ಬಲಿದನು ಪ್ರ
ಶಸ್ತ ಪಲ್ಯಂಕಾಸನವ ||೭||

ಶಾಂತಭಾವದೊಳು ಕಣ್ಮುಚ್ಚಿ ನೆನಹು ಲೋ
ಕಾಂತಕೆ ನಡೆಸಿ ಸಿದ್ಧರನು
ಅಂತರಂಗಕೆ ತಂದು ಪೂಜಿಸಿ ಬೀಳ್ಕೊಟ್ಟು
ಕಂತುಸನ್ನಿಭನು ಕಣ್ದೆರೆದ ||೮||

ಬಟ್ಟಿನಮೇಲೆಡಗೈಯೂರಿ ಬಲಗೈಯ್ಯ
ನಿಟ್ಟನು ಹರಿವಾಣದಲ್ಲಿ
ಕೊಟ್ಟನು ತನುವಿಗೆ ಹಂಸನಾಥಗೆ ಮುನ್ನ
ಕೊಟ್ಟ ದಿವ್ಯಾನ್ನ ಪಾನಗಳ ||೯||

ಜೀವಬಲವ ದೇಹಬಲವ ಹೆಚ್ಚಿಸುವ ಸಂ
ಜೀವನರಸಪಿಂಡವೆನಿಪ
ಮೂವತ್ತೆರಡು ತುತ್ತುಗಳಿಂದ ತಣಿದನು
ಭೂವರನಾ ಸಮಯದೊಳು ||೧೦||



ರಾಜ ಕೈತೊಳೆದನು ಸತಿಯರು ಕೈದೊಳೆ
ದೋಜೆಯಿಂದಿದಿರೊಳು ನಿಲಲು
ಆ ಜನಪತಿಯೆಡೆಮಾಡಿದ ಸತಿಯರು
ಭೋಜಿಸಲೆಂದು ಸೂಚಿಸಿದ ॥೧೧॥

ನವಗಿನ್ನು ಭೋಜನಾಂತದ ಕ್ರಿಯೆ ಕಿರಿದುಂಟು
ಅವರಿಗೆ ಬಡಿಸಿ ನೀವೆಂದು
ಯುವತಿಯರಿಗೆ ಸನ್ನೆ ಮಾಡಿ ಕಣ್ಮುಚ್ಚಿ ಮಾ
ನವಪತಿ ಯೋಗದೊಳಿದ್ದ ॥೧೨॥

– ***ರತ್ನಾಕರ ವರ್ಣಿ***

### ರತ್ನಾಕರ ವರ್ಣಿ

'ಹದಿನಾರನೇ ಶತಮಾನದ ಕೋಗಿಲೆ'ಯೆಂದು ಪ್ರಸಿದ್ಧನಾದ ರತ್ನಾಕರ ವರ್ಣಿಯ ಹುಟ್ಟೂರು ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದಿರೆ. ಜೈನಪರಂಪರೆಯ ಕವಿಯಾದ ಇವನು 'ಅಪರಾಜಿತೇಶ್ವರ ಶತಕ', 'ತ್ರಿಲೋಕ ಶತಕ', 'ರತ್ನಾಕರಾಧೀಶ್ವರ ಶತಕ' ಎಂಬ ಕೃತಿಗಳನ್ನು ರಚಿಸಿರುವನು. ಸಾಂಗತ್ಯ ಛಂದಸ್ಸಿನಲ್ಲಿರುವ 'ಭರತೇಶ ವೈಭವ'ವು ಈತನ ಪ್ರಸಿದ್ಧ ಕೃತಿಯಾಗಿದೆ. ಈ ಭಾಗವನ್ನು ಭರತೇಶ ವೈಭವದ ಆರೋಗಣೆ ಸಂಧಿಯಿಂದ ಆಯ್ದುಕೊಳ್ಳಲಾಗಿದೆ.

- ಕೆಳಗಿನ ಪದಗಳನ್ನು ಬಿಂಗಡಿಸಿ ಬರೆಯಿರಿ.

  ರಾಯನಿದ್ದನು, ಕೆಲಬರಾರೋಗಣೆಗೆಡೆಮಾಡಲನುವಾಗಿ, ಪಂತಿಯೊಳೂಟಕೆ, ಸುಳಿದಾಡುತಿರ್ದರರ್ತಿಯೊಳು, ನಾರಿಯರೆಸೆದರೆಂತೆನಲು, ದೇವಾಮೃತವನುಂಬಮರೇಂದ್ರನೊತ್ತಿನ, ಕೈದೊಳೆದೋಜೆಯಿಂದಿದಿರೊಳು
- ಭರತ ಚಕ್ರವರ್ತಿಯು ಊಟದ ಸಮಯದಲ್ಲಿ ಅನುಸರಿಸಿದ ಕ್ರಮಗಳನ್ನು ಗುರುತಿಸಿ ಬರೆಯಿರಿ.
- ಪಠ್ಯಭಾಗದಲ್ಲಿ ನೀವು ಗುರುತಿಸಿಕೊಂಡ ಊಟದ ಸಂಪ್ರದಾಯ ಮತ್ತು ಇಂದಿನ ಸಮಾರಂಭಗಳಲ್ಲಿ ಕಂಡುಬರುವ ಊಟದ ಕ್ರಮಗಳನ್ನು ಹೋಲಿಸಿ ಕಿರುಲೇಖನ ಬರೆಯಿರಿ.

- ❑ 'ರಾಯನಿದ್ದನು ರತ್ನಹಾರದ ನಡುವಣ ನಾಯಕರತ್ನದಂದದೊಳು' – ಇಲ್ಲಿ ಪಂಕ್ತಿಯಲ್ಲಿ ಊಟಕ್ಕೆ ಕುಳಿತ ರಾಜನನ್ನು ರತ್ನಹಾರದ ನಡುವೆ ಇರುವ ಪ್ರಧಾನ ರತ್ನಕ್ಕೆ ಹೋಲಿಸಲಾಗಿದೆ. ಈ ರೀತಿ ಒಂದನ್ನು ಇನ್ನೊಂದಕ್ಕೆ ಹೋಲಿಸಿ ಹೇಳುವುದನ್ನು 'ಉಪಮಾಲಂಕಾರ' ಎನ್ನುತ್ತೇವೆ. ಇದೇ ರೀತಿ ಉಪಮಾಲಂಕಾರವಿರುವ ವಾಕ್ಯಗಳನ್ನು ಗುರುತಿಸಿ ಬರೆಯಿರಿ.
- ❑ ಕೆಳಗಿನ ಪದಗಳನ್ನು ಗಮನಿಸಿರಿ.

  ಕಣ್ಮುಚ್ಚಿ, ಕೈದೊಳೆ

  - ಈ ಪದಗಳನ್ನು ಕೆಳಗಿನಂತೆ ಬಿಡಿಸಿ ಬರೆಯಬಹುದು.

    ಕಣ್ಣನ್ನು ಮುಚ್ಚಿ, ಕೈಯನ್ನು ತೊಳೆ – ಇಲ್ಲಿ ಪೂರ್ವಪದವು ನಾಮಪದವಾಗಿದ್ದು, ಉತ್ತರಪದವು ಕ್ರಿಯಾಪದವಾಗಿದೆ. ಈ ರೀತಿಯ ಪದಗಳು ಸೇರುವುದನ್ನು 'ಕ್ರಿಯಾ ಸಮಾಸ' ಎನ್ನುವರು. ಕ್ರಿಯಾಸಮಾಸವಾಗುವ ಇಂತಹ ಪದಗಳನ್ನು ಸಂಗ್ರಹಿಸಿ ಬರೆಯಿರಿ.

* * *

# ಅಡುಗೆ ಮತ್ತು ಆರೋಗ್ಯ

ಯಾವುದೇ ಒಂದು ಪ್ರದೇಶದಲ್ಲಿ ವಾಸ ಇರುವ ಜನರ ಆಹಾರ ಪದ್ಧತಿಯು ಅಲ್ಲಿನ ಭೌಗೋಳಿಕ ಪರಿಸರ, ಹವಾಗುಣ ಬೆಳೆಗಳು ಜನರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಗಳನ್ನು ಅವಲಂಬಿಸಿರುತ್ತದೆ. ಯಾವುದೇ ಸಮುದಾಯದ ಆಹಾರ ಪದ್ಧತಿಯು ಅದರ ಪರಿಸರದಲ್ಲಿ ದೊರೆಯುವ ಗಿಡ, ಬೇರು, ಹಣ್ಣು, ಕಾಯಿ, ಗೆಡ್ಡೆ ಗೆಣಸು ಹಾಗೂ ಪ್ರಾಣಿಜನ್ಯವಾಗಿರುವ ಬರುವ ಸಾಮಗ್ರಿಗಳನ್ನು ಅವಲಂಬಿಸಿರುತ್ತದೆ.

ಆಹಾರಕ್ರಮವು ಕಾಲದಿಂದ ಕಾಲಕ್ಕೆ, ಸ್ಥಳದಿಂದ ಸ್ಥಳಕ್ಕೆ ಮತ್ತು ಜನಾಂಗದಿಂದ ಜನಾಂಗಕ್ಕೆ ವ್ಯತ್ಯಾಸವಾಗುತ್ತದೆ. ಉದಾಹರಣೆಗೆ ಲಂಬಾಣಿ ಜನಾಂಗ. ಇವರು ಮೂಲತಃ ಮಾಂಸಾಹಾರಿಗಳಾಗಿದ್ದು ಕಾಡುಗಳ ತಪ್ಪಲಲ್ಲಿ ವಾಸಮಾಡುವವರಾದ್ದರಿಂದ ಬೇಟೆಯ ಮೂಲಕ ಅಥವಾ ಸಾಕು ಪ್ರಾಣಿಗಳನ್ನು ಕೊಂದುತಿನ್ನುವ ಮೂಲಕ ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳುತ್ತಾರೆ. ದವಸಧಾನ್ಯಗಳಿಂದಲೂ ಆಹಾರವನ್ನು ತಯಾರಿಸಿಕೊಂಡು ತಮ್ಮ ಹೊಟ್ಟೆ ಹೊರೆಯುತ್ತಾರೆ. ಇವರು ಪ್ರಾದೇಶಿಕವಾಗಿ ಲಭ್ಯವಿರುವ ರಾಗಿ, ಜೋಳ, ನವಣೆ, ಆರಂಗ, ಸಾಮೆ ಮುಂತಾದವುಗಳನ್ನು ಉಪಯೋಗಿಸುತ್ತಾರೆ.

ಲಂಬಾಣಿಗಳು ಯಾವತ್ತೂ ಮಣ್ಣಿನ ಪಾತ್ರೆಗಳಲ್ಲಿಯೇ ಆಹಾರವನ್ನು ತಯಾರಿಸಿಕೊಳ್ಳುತ್ತಾರೆ. ಅಲ್ಯುಮಿನಿಯಂ, ಸ್ಟೀಲ್, ಕಂಚಿನಪಾತ್ರೆಗಳಲ್ಲಿ ತಯಾರಿಸಿದ ಅಡುಗೆ ರುಚಿಕರವಲ್ಲವೆಂದೂ, ಅವು ಅನಾರೋಗ್ಯಕ್ಕೆ ಈಡುಮಾಡುತ್ತವೆಂದೂ ನಂಬಿದ್ದಾರೆ. ಮಣ್ಣಿನ ಮಡಕೆಗಳಲ್ಲಿ ತಯಾರಿಸಿದ ಅಡುಗೆ ಅತ್ಯಂತ ರುಚಿಕರವೆಂದೂ,



ಅದು ಮನುಷ್ಯನ ಆರೋಗ್ಯಕ್ಕೆ ಬಹಳ ಒಳ್ಳೆಯದೆಂದು ಭಾವಿಸುತ್ತಾರೆ. ಅದರಲ್ಲಿಯೂ ಹಾಲು, ಮೊಸರು, ಮಜ್ಜಿಗೆಯಂತಹ ಪದಾರ್ಥಗಳಿಗಾಗಿ ಮಣ್ಣಿನ ಮಡಕೆಗಳನ್ನು ಬಳಸುವುದು ಸೂಕ್ತವೆಂದು ತಿಳಿಯುತ್ತಾರೆ.

ನಾವು ಕರಾವಳಿಯಲ್ಲಿ ವಾಸಿಸುವವರು. ನಮಗೆ ನಮ್ಮದೇ ಆದ ಆಹಾರಕ್ರಮವಿದೆ. ಈ ಪ್ರದೇಶಕ್ಕೆ ಹಾಗೂ ಹವಾಮಾನಕ್ಕೆ ಹೊಂದಿಕೊಂಡು ನಮ್ಮ ಪ್ರಾದೇಶಿಕ ಆಹಾರಕ್ರಮವನ್ನು ರೂಪಿಸಿಕೊಂಡಿದ್ದೇವೆ. ಇಲ್ಲಿ ಅಕ್ಕಿಯಿಂದ ಮಾಡಿದ ಆಹಾರಪದಾರ್ಥಗಳೇ ಹೆಚ್ಚು. ಇವೆಲ್ಲಕ್ಕೂ ಕುಚ್ಚಿಲಕ್ಕಿಯ ಬಳಕೆಯೇ ಹೆಚ್ಚು. ಅಕ್ಕಿಯನ್ನು ಚೆನ್ನಾಗಿ ಮೆದುವಾಗುವಂತೆ ಬೇಯಿಸುವುದೇ ಗಂಜಿ. ಇದಕ್ಕೆ ನೆಂಚಿಕೆಯಾಗಿ ಸಸ್ಯಾಹಾರಿಗಳು ಮಾವಿನಮಿಡಿ ಉಪ್ಪಿನಕಾಯಿ ಉಪಯೋಗಿಸಿದರೆ ಮಾಂಸಾಹಾರಿಗಳು ಸಾಮಾನ್ಯವಾಗಿ ಒಣಮೀನನ್ನು ಸುಟ್ಟೋ ಕರಿದೋ ಬಳಸುವರು. ಗಂಜಿಯನ್ನು ರುಚಿಗೊಳಿಸಲು ಗಟ್ಟಿಮೊಸರನ್ನು ಬಳಸುವುದುಂಟು. ನೆನೆದ ಅಕ್ಕಿ ಮತ್ತು ಉದ್ದಿನಬೇಳೆ ಸೇರಿಸಿ ಚೆನ್ನಾಗಿ ನುಣ್ಣಗೆ ರುಬ್ಬಿ ರುಚಿಗೆ ತಕ್ಕ ಉಪ್ಪುಹಾಕಿ ಕಲಸಿಟ್ಟು, ಮರುದಿನ ತವೆಯ ಮೇಲೆ ಎಣ್ಣೆಯನ್ನು ಸವರಿ ಹೊಯ್ಯುವುದೇ ದೋಸೆ. ಅನ್ನಕ್ಕೆ ಪಲ್ಯ, ತೊವ್ವೆ ಇತ್ಯಾದಿ ವಿವಿಧ ತರಕಾರಿಯ ಪದಾರ್ಥಗಳನ್ನು ಬಳಸುವರು. ಮಾಂಸಾಹಾರಿಗಳು ಮೀನಿನ ಸಾರನ್ನು ಸಾಮಾನ್ಯವಾಗಿ ಬಳಸುತ್ತಾರೆ.

ಕರಾವಳಿ ಪ್ರದೇಶದಲ್ಲಿ ದೊರಕುವ ಎಲ್ಲಾ ಬಗೆಯ ತರಕಾರಿಗಳನ್ನು ಬಳಸುತ್ತಾರೆ. ಸೌತೆ, ಬಸಳೆ, ಹಲಸು, ಅಲಸಂಡೆ, ತೊಂಡೆಕಾಯಿಗಳ ಬಳಕೆ ಹೆಚ್ಚು. ಯಾವುದೇ ಪದಾರ್ಥಕ್ಕೂ ತೆಂಗಿನಕಾಯಿ ಬೇಕೇಬೇಕು. ತಂಬುಳಿ ಇಲ್ಲಿ ಸಾಮಾನ್ಯ ಮತ್ತು ಸರಳ. ಒಂದೆಲಗ ಸೊಪ್ಪು, ಮೆಣಸಿನಕಾಯಿ, ಉಪ್ಪು ಹಾಕಿ ರುಬ್ಬಿ, ಮಜ್ಜಿಗೆ ಸೇರಿಸಿದರೆ ತಂಬುಳಿ ತಯಾರು. ಕೊತ್ತಂಬರಿಯನ್ನು ಹುರಿದು ಮೆಂತ್ಯ, ಕಾಯಿ, ಮೆಣಸಿನಕಾಯಿಯೊಂದಿಗೆ ರುಬ್ಬಿ. ಉಪ್ಪು, ಹುಳಿ ಹಾಕಿ ಕುದಿಸಿದ್ದೇ ಕೊತ್ತಂಬರಿ ಸಾರು.

ಪಾರಂಪರಿಕ ಅಡುಗೆಗಳು ಋತುಮಾನವನ್ನನುಸರಿಸಿ ರೂಪುಗೊಳ್ಳುತ್ತವೆ. ದವಸಧಾನ್ಯಗಳು, ತರಕಾರಿಗಳು, ಹಸಿರೆಲೆಗಳು, ಅಣಬೆ ಇತ್ಯಾದಿಗಳು ಆಯಾಕಾಲದ ಆಹಾರಪದಾರ್ಥಗಳು. ವಸಂತಋತುವಿನಲ್ಲಿ ಎಂಥ ಬಡವನ ಮನೆಯಲ್ಲೂ ಎರಡು ಹೊತ್ತಿನ ಊಟಕ್ಕೆ ಬರವಿಲ್ಲ. ಹಾಗಾಗಿ ದಿನಾಲೂ ಹಲವು ರೀತಿಯ ತಿಂಡಿತೀರ್ಥಗಳನ್ನು ಮಾಡಿಕೊಂಡು ನಾಲಿಗೆ ಚಪಲ ಈಡೇರಿಸಿಕೊಳ್ಳುತ್ತಾರೆ. ಉದಾಹರಣೆಗೆ ಅಕ್ಕಿ ಅಥವಾ ರಾಗಿಯಿಂದ ಶಾವಿಗೆ ಮಾಡಿ ತಿನ್ನಬಹುದು, ಕರಿದ ತಿಂಡಿಗಳನ್ನು ಮಾಡಬಹುದು. ಆ ಕಾಲದಲ್ಲಿ ಅವರೇ ಗ್ರೀಷ್ಮಋತುವಿನಲ್ಲಿ ತಂಪಾದ ಪಾನೀಯಗಳನ್ನು ಬಳಸುವರು. ಉದಾ: ಹೆಸರುಕಾಳಿನ ನೀರು, ಅಂಬಲಿ ಇತ್ಯಾದಿಗಳು, ವರ್ಷ ಮತ್ತು ಶರತ್ ಋತುಗಳಲ್ಲಿ ಮತ್ತು ಗೆಣಸಿನ ಹಲಸಿನ ಹಪ್ಪಳವನ್ನು ಸುಟ್ಟು ತಿನ್ನುವರು. ಮಾವಿನ ಹಣ್ಣಿನ ರಸವನ್ನು ಚಾಪೆಯ ಮೇಲೆ, ಸವರುತ್ತಾ, ಒಣಗಿಸುತ್ತಾ ಇರಬೇಕು. ನಂತರ ಅದು ಪದರು ಪದರಾಗಿ ಚೆಕ್ಕೆಯಂತೆ ಏಳುತ್ತದೆ. 'ಮಾಂಬಳ' ಎಂಬ ಇದನ್ನು ಮಳೆಗಾಲದಲ್ಲಿ ವಿಶೇಷವಾಗಿ ಗ್ರಾಮೀಣರು ಬಳಸುವರು. ಹಲಸಿನ ಗಟ್ಟಿ ಮತ್ತೊಂದು ವಿಶೇಷ ಅಡುಗೆ. ಹಲಸಿನ ಹಣ್ಣು, ನೆನಸಿದ ಅಕ್ಕಿ ಮತ್ತು ಬೆಲ್ಲ ಸೇರಿಸಿ, ನೀರು ಸೋಂಕಿಸದೇ ಗಟ್ಟಿಯಾಗಿ ರುಬ್ಬಿ, ತೆಂಗಿನಕಾಯಿ ತುರಿ ಮತ್ತು ಸ್ವಲ್ಪ ಕುಟ್ಟಿದ ಮೆಣಸಿನಪುಡಿ ಸೇರಿಸಿ, ನೀರು ಹಾಕಿ ಕಲಸಿ, ಹಬೆಯಲ್ಲಿ ಬೇಯಿಸಿ, ತುಂಡುಮಾಡುವುದೇ ಹಲಸಿನಗಟ್ಟಿ. ಮಳೆಗಾಲದಲ್ಲಿ ಹೆಚ್ಚಾಗಿ ಹಲಸಿನಗಟ್ಟಿನ ಸಾರು ಮಾಡುತ್ತಾರೆ. ಹಾಗೆಯೇ ಕೆಸುವಿನೆಲೆಯ ಪತ್ರೊಡೆಯೂ



ಜನಪ್ರಿಯ ಖಾದ್ಯ. ಅಕ್ಕಿ ಹಿಟ್ಟಿಗೆ ಉಪ್ಪು, ಹುಳಿ, ಕಾರ ಬೆರೆಸಿ, ಸಣ್ಣಗೆ ತುಂಡರಿಸಿದ ಕೆಸುವಿನೆಲೆ ಬೆರೆಸಿ ಬಾಳೆಲೆಯಲ್ಲಿ ಮಡಚಿ ಬೇಯಿಸಿದ ಪತ್ರೊಡೆ ಬೇಸಗೆ ಕಾಲಕ್ಕೆ ಸರಿಹೊಂದುವುದಿಲ್ಲ. ಇದು ಮಳೆಗಾಲದ ಆಹಾರ ಮೆಂತ್ಯಹಾಕಿದ ಪದಾರ್ಥಗಳನ್ನೂ ಪುನರ್ಪುಳಿ, ನಿಂಬೆ ಮುಂತಾದವುಗಳ ಪಾನಕವನ್ನೂ, ಎಳನೀರನ್ನೂ ನಾವು ಬೇಸಗೆಯಲ್ಲಿ ತಂಪಿಗಾಗಿ ಹೆಚ್ಚಾಗಿ ಉಪಯೋಗಿಸುತ್ತೇವೆ.

ತೆಂಗು ನಮ್ಮ ಪರಿಸರದಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆಯುವುದರಿಂದ ಅದನ್ನು ನಾವು ನಮ್ಮ ಆಹಾರದೊಂದಿಗೆ ವಿಪುಲವಾಗಿ ಬಳಸುತ್ತೇವೆ. ತೆಂಗಿನ ತುರಿ ಹೆಚ್ಚಿನ ಎಲ್ಲ ಆಹಾರ ಪದಾರ್ಥಗಳಿಗೂ ಬೇಕೇ ಬೇಕು. ಪಾಯಸಕ್ಕೆ ತೆಂಗಿನ ಹಾಲು; ಕರಿಯಲು ಮತ್ತು ಒಗ್ಗರಣೆ ಹಾಕಲು ತೆಂಗಿನ ಎಣ್ಣೆ ಬೇಕು. ಚಟ್ನಿಗೆ ತೆಂಗಿನ ತುರಿಯೇ ಆಗಬೇಕು.

ಬೇರೆ ಬೇರೆ ಕಾಲಮಾನಗಳಲ್ಲಿ ಬೆಳೆಯುವ ಬೆಳೆಗಳನ್ನು ಬೇರೆ ಬೇರೆ ವಿಧಾನಗಳ ಮೂಲಕ ಸಂರಕ್ಷಿಸಿ ಇನ್ನೊಂದು ಕಾಲಮಾನಕ್ಕೆ ಉಳಿಸುವುದಕ್ಕೂ ಸಾಧ್ಯವಿದೆ. ಉದಾಹರಣೆಗೆ ಬೇಸಗೆಯಲ್ಲಿ ಬೆಳೆಯುವ ಹಲಸನ್ನು ಹಪ್ಪಳ ಮಾಡಿ ಮಳೆಗಾಲಕ್ಕೆ ಉಳಿಸಬಹುದು. ಹಲಸಿನ ಬೀಜವನ್ನು ಬೇಯಿಸಿ ಅಥವಾ ಒಣಗಿಸಿ ಸಂರಕ್ಷಿಸಬಹುದು. ಸೊಳೆಯನ್ನು ಉಪ್ಪುಹಾಕಿ ಕಾಪಾಡಬಹುದು. ಪುನರ್ಪುಳಿಯನ್ನು ಸಕ್ಕರೆ ಬೆರೆಸಿ ಅಥವಾ ಏನೂ ಬೆರೆಸದೇ ಒಣಗಿಸಿಡಬಹುದು. ನೆಲ್ಲಿಕಾಯಿಯನ್ನು ಉಪ್ಪಿನಲ್ಲೋ ಸಕ್ಕರೆಪಾಕದಲ್ಲೋ ವರ್ಷಗಟ್ಟಲೆ ಕಾಪಾಡಬಹುದು. ಮಾವಿನ ಮಿಡಿಯನ್ನೂ ನಿಂಬೆಯನ್ನೂ ಉಪ್ಪಿನಕಾಯಿ ಮಾಡಿ ಉಳಿಸಬಹುದು. ಎಲ್ಲವೂ ಮಳೆಗಾಲ ಮತ್ತು ಚಳಿಗಾಲಗಳ ಉಪಯುಕ್ತ ಆಹಾರಗಳು.

ಇತ್ತೀಚೆಗೆ ನಾವು ನಮ್ಮ ಸಾಂಪ್ರದಾಯಿಕವಾದ ಹಾಗೂ ಹವಾಮಾನಕ್ಕೆ ಹೊಂದಿಕೊಂಡ ಆಹಾರಕ್ರಮಗಳನ್ನು ಬಿಟ್ಟು ಪ್ಯಾಕೆಟ್ ಆಹಾರಕ್ಕೆ ಶರಣಾಗುತ್ತಿದ್ದೇವೆ. ಹಿಂದೆ ಮನೆಪರಿಸರದಲ್ಲಿ ಯಥೇಷ್ಟ ಬೆಳೆಯುವ ವಿವಿಧ ರುಚಿಯ ಚಿಗುರುಗಳಿಂದ ತಯಾರಿಸುತ್ತಿದ್ದ ಆರೋಗ್ಯದಾಯಕ ತಂಬುಳಿ ಈಗ ಮರೆಯಾಗಿದೆ. ಯಾವುದೋ ಕಂಪನಿ ತಯಾರಿಸುವ ಸಾಸ್ ಆಹಾರದಲ್ಲಿ ಸೇರಿಕೊಂಡಿದೆ. ಬಾಳೆದಿಂಡು, ಬಾಳೆಮೂತಿಗಳ ಬದಲು ಕ್ಯಾಬೇಜು, ಹೂಕೋಸುಗಳು ಬಂದಿವೆ. ಹಳ್ಳಿ ಊಟದ ಬದಲು ಚೈನಿಸ್ ಆಹಾರ ಜನಪ್ರಿಯವಾಗಿದೆ. ಆರೋಗ್ಯಕ್ಕಿಂತ ರುಚಿಯೇ ಮುಖ್ಯವೆನಿಸಿ ಅಂದಂದು ತಯಾರಿಸುವ ಸ್ವಚ್ಛ ಆಹಾರಕ್ಕೆ ಬದಲು ಎಂದೋ ತಯಾರಾದ ಪ್ಯಾಕೆಟ್ ಆಹಾರಕ್ಕೆ ನಾವು ಬಲಿಬಿದ್ದಿದ್ದೇವೆ.

– *ಸಾಧಾರ*

❒ ನಿಮ್ಮ ಊರಿನಲ್ಲಿ ಮದುವೆ ಸಮಾರಂಭ ಅಥವಾ ಹಬ್ಬದ ದಿನಗಳಲ್ಲಿ ಸಾಮಾನ್ಯವಾಗಿ ತಯಾರಿಸುವ ಆಹಾರ ಪದಾರ್ಥಗಳ ಕುರಿತು ಒಂದು ಲೇಖನ ತಯಾರಿಸಿರಿ.

❒ ನಿಮ್ಮ ಊರಿನಲ್ಲಿ ಔಷಧೀಯ ಗುಣವುಳ್ಳ ಮತ್ತು ಆಹಾರವಾಗಿ ಉಪಯೋಗಿಸುವ ಒಂದಷ್ಟು ಸೊಪ್ಪು ತರಕಾರಿಗಳಿಲ್ಲವೆ? ಅವುಗಳ ಕುರಿತು ತಿಳಿದವರಿಂದ ಮಾಹಿತಿ ಸಂಗ್ರಹಿಸಿ ಪರಿಚಯ ಲೇಖನ ತಯಾರಿಸಿರಿ.



- ❐ 'ಮಾತು ಬಲ್ಲವನಿಗೆ ಜಗಳವಿಲ್ಲ ಊಟ ಬಲ್ಲವನಿಗೆ ರೋಗವಿಲ್ಲ' – ಈ ಗಾದೆಮಾತನ್ನು ವಿಸ್ತರಿಸಿ ಬರೆಯಿರಿ.
- ❐ ಕೆಳಗಿನ ವಾಕ್ಯಗಳನ್ನು ಘಟನೆಯೊಂದನ್ನು ತಿಳಿಸುವಂತೆ ಅನುಕ್ರಮವಾಗಿ ಬರೆಯಿರಿ.

  ಸಾಮಗ್ರಿಗಳನ್ನು ತಂದು ಹೇಗೋ ಮಾಡಿಕೊಟ್ಟಳು. ನಿಮ್ಮಿಗೆ ಹಿಡಿಸದಿದ್ದರೂ ತಿಂದಳು. ಅಮ್ಮಾ, ಅದನ್ನೇ ನನಗೂ ಮಾಡಿಕೊಡು ಎಂದು ಹಟ ಹಿಡಿದಳು. ಟಿ.ವಿ.ಯಲ್ಲಿ ಹುಡುಗಿಯೊಬ್ಬಳು ಹೇಳಿದ್ದನ್ನು ನಿಮ್ಮಿ ನೋಡಿದಳು. ಸ್ವಲ್ಪ ಹೊತ್ತು ಕಳೆದಾಗ ಹೊಟ್ಟೆಯಲ್ಲಿ ಏನೋ ತಳಮಳ ಆರಂಭವಾಯಿತು. ಈ ತಿಂಡಿ ಅದೆಷ್ಟು ರುಚಿ! ತಾಯಿಗೆ ಅನಿವಾರ್ಯವಾಯಿತು.
- ❐ ನಮ್ಮ ಗ್ರಾಮೀಣ ಆಹಾರ ಪದಾರ್ಥಗಳು ಮತ್ತು ಆಹಾರ ವಿಧಾನಗಳು ಆಧುನಿಕತೆಯ ಹೆಸರಿನಲ್ಲಿ ಬದಲಾಗುತ್ತಿವೆ. – ಈ ವಿಷಯದ ಕುರಿತು ಕಾರ್ಯಯೋಜನೆಯೊಂದನ್ನು ನಡೆಸಿರಿ.

***



# 4

# ಬದುಕು; ಬದುಕಲು ಬಿಡು

ದಯವಿಲ್ಲದ ಧರ್ಮವದೇವುದಯ್ಯಾ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ
ದಯವೇ ಧರ್ಮದ ಮೂಲವಯ್ಯ
ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯಾ

❒ ಈ ವಚನವು ಸಾರುವ ಸಂದೇಶವನ್ನು ಬರೆದು ತರಗತಿಯಲ್ಲಿ ಓದಿರಿ.

## ವೀರ ಲಕ್ಷ್ಮಮ್ಮ

ಈಗ ಬಹುವರ್ಷಗಳ ಹಿಂದೆ ಕೆಲದಿನ ನಾನು
ಸಂತೆವೇರಿಯಲಿ ಕೆಲಸದಲಿದ್ದೆ. ಸುತ್ತೆಲ್ಲ
ಗುಡ್ಡಗಾಡಿನ ಭೂಮಿ. ಹುಲಿ ಚಿರತೆ ಹೆಬ್ಬಾವು
ನರಿ ಕಾಡುಹಂದಿ ಓತೀಕೇತ ಮುಂಗಸಿಗೆ
ಸರಿ ಹೊರತು ನರಮನುಷ್ಯನಿಗೆ ಇದು ನೆಲವಲ್ಲ
ಇಂತು ಊರಾದ
ಸಂತವೇರಿಯಲಿ ನನ್ನನುಭವಕೆ ಬಂದೊಂದು
ಸಂಗತಿಯನರುಹುವೆನು.

ಹಳ್ಳಿಯಲಿ ಹಾಲಿಲ್ಲ ಹಾಲು ಇಲ್ಲದ ಮೇಲೆ
ಮೊಸರೆ ಮಜ್ಜಿಗೆ ಬೆಣ್ಣೆಯ ಹೆಸರೆ? ಎಲ್ಲಕೂ
ಶ್ರೀರಾಮ ರಕ್ಷೆ! ಮನೆಯಲಿ ಎಳೆಯ ಮಕ್ಕಳಿವೆ.
ಮನೆಯವರು ಮೂರುದಿನ ನೀರುಹಾಲನು ಕೊಂಡು
ಸಾಕಾಗಿ ಒಂದು ಎಮ್ಮೆಯನು ಕಟ್ಟುವುದೆಂದು
ನಿಶ್ಚಯಿಸಿದರು. ಮೂರು ನಾಲ್ಕು ತಿಂಗಳ ಒಂದು
ಕರು, ಅದರ ತಾಯಿ, ಎರಡೂ ಮನೆಗೆ ಬಂದವು.
ತುಂಬ ಒಳ್ಳೆ ಎಮ್ಮೆ ಎಂದು ಮನೆಯವರು ಅದ ಪ್ರೀತಿಗೌರವದಿಂದ
ಲಕ್ಷ್ಮಮ್ಮ ಎಂದು ಕರೆದರು.
ಊರ ಎಲ್ಲ ದನ ಕಾಡಿನಲಿ ಮೇಯಹೋಗುವುದಲ್ಲ! ಲಕ್ಷ್ಮಮ್ಮ
ಜೊತೆಗೆ ಹೋಗುವುದು. ಕರು ಹೋಗುವುದು ಬೇಡೆಂದು
ನಾನು ; ಮನೆಯವರು ಅದು ತಾಯಿಯ ಜೊತೆಯಲಿ ಹೋಗಿ
ನಡೆದಾಡಿ ಬರಲಿ ಎಂಬರು. ಅವರ ಮಾತಂತೆ
ಕರು ತಾಯ ಕೂಡ ಮಂದೆಯ ಜೊತೆಗೆ ಹೋಗುವುದು.
        ಹೊಟ್ಟೆತುಂಬಿದ್ದ



ಕರು ತಾಯ ಜೊತೆಗೆ ನಡೆಯುತಲಿರಲು ಆ ತಾಯಿ
ಸಂಸಾರಿ ಹೆಣ್ಣು ಮಗುವಿನ ರೀತಿ ತನ್ನೊಂದು
ಗಾಂಭೀರ್ಯದಿಂದ ಹೆಜ್ಜೆಯನಿಡುತ ನಡೆಯುವುದು
ನೋಡುವರೆ ಚೆನ್ನವಾಗಿಹುದು.

ತಿಂಗಳು ದಿವಸ ತಾಯಿ ಕರು
ದನದ ಮಂದೆಯ ಜೊತೆಗೆ ಹೋಗಿದ್ದು
ಸಂಜೆಯಲಿ ಮನೆಗೆ ಬಂದವು. ಹೈದ ಬೀಮಲ್ಯಾ
ಹಸು ಎಮ್ಮೆ ಕರು ಎಲ್ಲ ಕೂಡಿರುವ ಮಂದೆಯನು
ಊರ ಮಾಳಕೆ ಕರೆದು ತಂದುದೇ ತಡ ನಮ್ಮ
ಲಕ್ಷ್ಮಮ್ಮ ತಾನೆ ಮನೆಯನು ಬಂದು ಸೇರುವುದು ;
ಇಂತಿರುತ ಒಂದು ದಿನ ಸಂಜೆಯಲಿ ಲಕ್ಷ್ಮಮ್ಮ
ವಾಡಿಕೆಯ ವೇಳೆ ಕೊಟ್ಟಿಗೆಗೆ ಬರಲಿಲ್ಲ. ಇದು
ಏಕೆ ಎಂದೆ ನಮ್ಮ ಮನೆಯಾಕೆ ನೆರೆಯ ದನ
ಬಂದುವೇ ಎಂದು ನೋಡಿದರು. ಅವು ಬಂದಿಹವು
ಬೀಮಲ್ಯಾ ಎಲ್ಲಿ? ಬಂದನೆ ಎಂದು ನೋಡಿದರೆ,
ಅವನು ದನವಿನ ಮಂದೆಯನು ಊರಬಳಿ ತಂದು
ಮತ್ತೆ ಕಾಡಿಗೆ ಹೋದನೆಂದು ಜನ ಹೇಳಿದರು.
ಉಳಿದೆಲ್ಲ ಮನೆಯ ದನ ಬಂದು ಲಕ್ಷ್ಮಮ್ಮ ಕರು
ಇವು ಎರಡೆ ಬರಲಿಲ್ಲ. ಬೀಮಲ್ಯಾ ಅವಕಾಗಿ
ಮತ್ತೆ ಕಾಡಿಗೆ ಹೋದನೋ? ಏನು ಸಂಗತಿಯೊ?
ತಿಳಿಸಿ ಆಮೇಲೆ ಹೋಗಿದ್ದರಾಗದೆ? ನಮ್ಮ
ಮನೆಯಾಕೆ ತುಂಬ ಕಳವಳದಿಂದ ಮಕ್ಕಳನು
ನನ್ನೆಡೆಗೆ ಕಳುಹಿದರು. ನಾನು ಮನೆಯನು ಸಾರಿ,
ನೆರೆಮನೆಯ ಜನರೊಡನೆ ಮಾತಾಡಿ, ಲಕ್ಷ್ಮಮ್ಮ,
ಜೊತೆಗೆ ಕರು, ಕಾಡಿನಲಿ ನಿಂತುಬಿಟ್ಟಿರಬೇಕು
ಎಂದು ನಿಶ್ಚಯಿಸಿಕೊಂಡೆನು.

ಒಂದು ಗಂಟೆ ಎಷ್ಟೋ ಹೊತ್ತು
ಎಂಬಂತೆ ಜಿನುಗಿ ಕಳೆಯಿತು. ನಮ್ಮ ಮನೆಯಾಕೆ
"ಯಾಕಾದರೂ ನಾನು ಕರುವನೂ ಕಳುಹಿದೆನೊ?
ಬಡಪಾಯಿ ಏನಾಯಿತೊ, ಎತ್ತ ಹೋಯಿತೋ?
ಅದು ಎಲ್ಲಿಯೋ ಹೋಯಿತೆಂದೆ ಲಕ್ಷ್ಮಮ್ಮನೂ
ಜೊತೆಗೆ ಹೋಗಿರಬೇಕು. ಬೀಮಲ್ಯಾ ಎರಡನೂ
ಹೊಡೆದು ತಂದನೆ ಸಮ : ಅದಿಲ್ಲ ಮುಂದೇನು ಗತಿ?



ರಾತ್ರಿಯಲಿ ಕಾಡಿನಲಿ ದನವ ಹುಡುಕುವುದುಂಟೆ?
ಲಕ್ಷ್ಮಮ್ಮ ಕರು ಈಗ ಬಂದವೇ ಬಂದಂತೆ.
ಬರಲಿಲ್ಲ, ನಮ್ಮ ಋಣವನು ಮುಗಿಸಿ ತಾಯಿ ಮಗು
ಕಾಡ ಋಣವನು ಮುಗಿಸಹೋದಂತೆ", ಎಂದರು.
ಅವರ ಕಣ್ಣಲಿ ನೀರು. ನನಗಾದರೂ ಬಹಳ
ಧೈರ್ಯವಿರಲಿಲ್ಲ ಬಿಡಿ. ಆದರೂ, ಇವರೊಡನೆ
ಮಾತನಾಡಿದೆನೆ ಸುಮ್ಮನೆ ಗೋಳು ಬೆಳೆಯುವುದು,
ಎಂದವನೆ ನಾನು ಯಾರೋ ಒಬ್ಬ ಇಬ್ಬರನು
ಕರೆದು ಲಾಂದ್ರಗಳ ತರಿಸಿದೆನು ; ಪೋಲೀಸಿನಲಿ
ಕೆಲಸದಲಿ ಇದ್ದ ಒಬ್ಬರನು ಕೋವಿ ಸಮೇತ
ಜೊತೆಗೆ ಬರುವಂತೆ ಏರ್ಪಡಿಸಿದೆನು.

ಲಾಂದ್ರ ಬಡಿಗೆಗಳ
ಹಿಡಿದು ನಾಲ್ವರು ನಾವು, ಪೋಲೀಸ ಗೆಳೆಯರು
ಕೋವಿಯನು ಹಿಡಿದು, ಐವರು ಸಂಜೆ ಕವಿಯುತಿರೆ
ಕರು ಎಮ್ಮೆಗಳ ಕಾಡಿನಲಿ ಹುಡುಕ ಹೊರಟೆವು.
ಸುತ್ತಿನಲಿ ನೋಡಿದೆವು. ಯಾವುದೋ ಕೊರಳ ಗಂಟೆಯ ಶಬ್ದ
ಕೇಳಿದಂತಾಗಿ ಆ ಕಡೆ ಹೋಗತೊಡಗಿದೆವು.
ಮತ್ತೆ ಒಬ್ಬರು, "ನಮ್ಮ ಬಳಿ ಒಂದೆ ಕೋವಿ ಇದೆ.
ಹುಲಿ ಎಲ್ಲಿ ನಮ್ಮೆದುರು ಕಂಡರೂ ಕಂಡಿತೆ.
ಸುತ್ತಿನಲಿ ಎಮ್ಮೆ ಇರುವಂತೆ ಕಾಣಿಸಲಿಲ್ಲ.
ಕಾಡಿನೊಳಕಡೆ ನಡೆದು ಹೋಗಿದೆಯೊ, ಇತ್ತ ಕಡೆ
ಅತ್ತಕಡೆ ಸುತ್ತಿ ಮನೆಯನೆ ಹೋಗಿ ಸೇರಿದೆಯೊ,
ಹೇಳುವಂತಿಲ್ಲ. ನಾವಿಲ್ಲಿ ಸುಮ್ಮನೆ ಅಲೆದು
ಫಲವಿಲ್ಲ."
ಇಂತಾಗಿ ನಾವು ಅಲ್ಲಲ್ಲಿ ಎರಡರೆಗಳಿಗೆ
ಸುತ್ತಾಡಿ ಎಂತು ಹೋದೆವು ಅಂತೆ ಹಿಂದಿರುಗಿ
ಊರ ಸೇರಿದೆವು.

ರಾತ್ರಿ ಹುಡುಕಿದೆವೆ,
ಅಲ್ಲಿ ನಾವಿಬ್ಬರೂ ಮತ್ತೊಮ್ಮೆ ಹುಡುಕಿದೆವು.
ಅಲ್ಲಿಂದ ಮುಂದೆ ಹೋದೆವು; ನಾಲ್ಕು ಕಡೆ ಸುತ್ತಿ
ಎಲ್ಲೆಲ್ಲೊ ಇಣಕಿದೆವು. ಕೊರಳಗಂಟೆಯ ಶಬ್ದ
ಕೇಳಿದಂತಾಗಿ ನಾನೊಮ್ಮೆ "ಗಂಟೆಯ ಶಬ್ದ"
ಎಂದು ಆತುರದಿಂದ ಕೂಗಿದೆನು.



ರಾತ್ರಿಯೆಲ್ಲ ಈ ಕಾಡಿನಲಿ
ಹುಲಿಯ ಶತಪಥದ ದಾರಿಯಲಿ ಸಿಕ್ಕಿದ ಎಮ್ಮೆ
ಬೆಳಕು ಹರಿಯುವವರೆಗೆ ಬದುಕಿರುವುದೆ? ಅಸಾಧ್ಯ.
ಆದರೂ ಭ್ರಮೆ ಆಸೆ,
ಹೊದರಾಗಿ ಬೆಳೆದ ಕಾಡಿನ ಒಂದು ಪಟ್ಟೆಯನು
ದಾಟಿ ನಾನು, ಆಳು, ಪಟ್ಟೆಯಾಚೆಯ ಒಂದು
ಬಯಲ ಸೇರಿದೆವು. ಎದುರಲಿ ಒಂದು ಎಮ್ಮೆ ಇದೆ.
ಕನಸೊ ಎನಿಸಿತು ನನಗೆ. ಇಲ್ಲ ಎಮ್ಮೆಯೆ. ಅಲ್ಲೆ
ನೆಲದ ಮೇಲೆ ಅದೇನೋ ಕರುವಂತೆ ಮಲಗಿಹುದು.
ಅಷ್ಟು ಹೊತ್ತಿಗೆ ಅತ್ತ ಮುಖಮಾಡಿ ನಿಂತಿದ್ದ
ಎಮ್ಮೆ ನಮ್ಮತ್ತ ತಿರುಗಿತು. ನಮ್ಮ ಲಕ್ಷ್ಮಮ್ಮ!
ಲಕ್ಷ್ಮಮ್ಮ ಎಂದು ಕೂಗುತ ನಾನು ಓಡಿದೆನು.
ಆಳು ಬೆಪ್ಪಾಗಿ ಹಿಂದೆಯೆ ಓಡಿ ಬಂದನು.
ಲಕ್ಷ್ಮಮ್ಮ ಮೊದಲು ದುರುಗುಟ್ಟಿ ನನ್ನನ್ನು ನೋಡಿ
ಗುರುತು ಹಿಡಿಯಿತು. ನಾನು ಆ ಮೊದಲು ಎಮ್ಮೆಯನು
ಬಹಳ ಹಿಡಿದಾಡಿ ನಡೆಸಿರಲಿಲ್ಲ. ಆ ದಿವಸ
ಶುಭ ಲಗ್ನದಲಿ ಅದನು ಪ್ರೀತಿಯಲಿ ಮುಟ್ಟಿದೆನು.
ಎಮ್ಮೆಯಾದರೆ ಏನು, ನನ್ನಂತೆಯೇ ಒಂದು
ಜೀವ, ಎಂಬುದ ತಿಳಿದು ಸುಖದಿಂದ ಬೀಗಿದೆನು.
ನಮ್ಮ ಕಂಡುದು ಎಮ್ಮೆಗೂ ಬಹಳ ಸಂತೋಷ.
ಬಹುದೊಡ್ಡ ಜೀವ ; ಕೊಂಚಕೆ ತನ್ನ ಆಂತರ್ಯ
ಇಂತೆಂದು ತೆರೆದು ತೋರುವುದಲ್ಲ. ನಾನದನು
ಮುಟ್ಟಿದೆನೆ ಮುಸುಡಿಯನು ನನ್ನತ್ತ ಚಾಚಿತು.
ಅದರ ಮೈಮೇಲೆಲ್ಲ ಗಾಯ; ಕೋಡಿನ ಕೊನೆಗೆ
ರಕ್ತ ಕೆನೆಕಟ್ಟಿಹುದು. ಕರು ಅಲ್ಲಿ ಮಲಗಿರಲು,
ಸುತ್ತ ಹತ್ತಡಿಯ ದೂರಕೆ ನೆಲದ ಮೇಲೆಲ್ಲ
ಎಮ್ಮೆ ಓಡಿರುವ ಗುರುತಿದೆ. ಅಲ್ಲೆ ಸುತ್ತಲೂ
ಹುಲಿಯ ಹೆಜ್ಜೆ ಗುರುತು. ಹುಲಿ ಸುತ್ತಲೂ ನಡೆದು,
ಎಮ್ಮೆ ಉದ್ದಕೆ ಅದನು ತಡೆದು ಕಾದಿರಬೇಕು.
ಆಳು ಇದನೆಲ್ಲ ನೋಡಿದನು. "ದಣಿಗಳೆ ರಾತ್ರಿ
ಹುಲಿ ಒಂದು ಬಂದಿತ್ತು. ಚಿಕ್ಕಹುಲಿ ಇರಬೇಕು.
ಎಮ್ಮೆ ಒಂದೇ ಇತ್ತೆ ಇದನೆ ಬಡಿಯುತಲಿತ್ತು.
ಜೊತೆಗೆ ಕರು ಇದೆ. ಕಿರಿಯ ರಾಸ ಕೊಲ್ಲುವ ಎಂದು



ಹುಲಿ ಆದರ ಮೇಲೆ ಎರಗಿದೆ. ತಾಯಿ ಒಬ್ಬೊಂಟಿ
ಸಿಕ್ಕಿತ್ತೆ, ಹುಲಿ ಬಂದಿತೇ ಎಂಬ ಅಂಜಿಕೆಗೆ
ಅರ್ಧ ಸಾಯುತಲಿತ್ತು. ಜೊತೆಗೆ ಕರು ಇದೆ. ತಾಯಿ
ಭಯವ ಬಿಟ್ಟಿತು ; ಹುಲಿಯಮೇಲೆ ಬಿದ್ದಿತು. ಕೋಡು
ಹುಲಿಯ ತಾಗಿರಬೇಕು ; ರಕ್ತವಾಗಿದೆ ನೋಡಿ.
ಅದು ಎಷ್ಟುಹೊತ್ತು ಕಾದಿತೊ, ಕೊನೆಗೆ ಹುಲಿ ಸೋತು,
ಮತ್ತೆ ಬರುವ, ಎಂದು ಓಡಿಹೋಗಿರಬೇಕು,"
ಎಂದು ಹೇಳಿದನು. ಎಮ್ಮೆಯ ಕೋಡರಕ್ತದಲಿ
ಹುಲಿಯೊಡಲು ರೋಮ ಅಂಟಿರುವುದನು ತೋರಿದನು.
ತನ್ನೆದೆಯ ಕಲ್ಲುಮಾಡಿತು, ಸಹಜವೆನೆ ಬರದ
ದಿಟ್ಟತನದಿಂದ ಹುಲಿಯನು ಸೋಲಿಸಿತು. ಅಂತೆ
ನಡೆದ ಸಂಗತಿ ಇವನು ಊಹಿಸಿದ ತೆರ ಇರಲು
ತಾಯಿ ಕರುವನು ರಕ್ಷಿಸಿತು ಎಂತು ಅಂತೆ ಸರಿ
ಕರು ಅಲ್ಲಿ ಇದ್ದು ತಾಯನು ರಕ್ಷಿಸಿತು.

ಆಳು ಕರುವನೆಬ್ಬಿಸಿ ತಂದು ತಾಯ ಬಳಿ ನಿಲಿಸಿದನು.
ಅವ ನಾವು ಜೊತೆಗೆ ಊರಿಗೆ ಕರೆದು ತಂದೆವು.
ರಾತ್ರಿ ಕಾಡಲಿ ಸಿಕ್ಕಿಬಿದ್ದ ತಾಯ್ ಎಮ್ಮೆ ಕರು
ಜೀವಂತವಾಗಿ ಹಿಂದಕೆ ಬಂದವೆನೆ ಮಂದಿ
ನಂಬಲಾರದು. ಊರು ಊರೆ ಬಂದಿತು ; ಬಂದು
ಲಕ್ಷ್ಮಮ್ಮನನು ನೋಡಿ ಮುದ್ದಾಡಿ ಹೊಗಳಿತು.
ಮನೆಯಾಕೆ ಅದಕೆ ಕರುವಿಗೆ ಕುಂಕುಮವನಿಕ್ಕಿ
"ಹೋಗಿದ್ದ ಲಕ್ಷ್ಮಿ ಬಂದಿತು ; ದೃಷ್ಟಿ ತಗಲೀತು",
ಎಂದು ಏತರದೊ ಸಾಂಗ್ಯವ ಮಾಡಿದರು. "ಎಂಥ
ದಿಟ್ಟತನದೆಮ್ಮೆ ಲಕ್ಷ್ಮಮ್ಮ ! ನಮ್ಮೂರಿನಲಿ
ಹಿಂದೆ ಬಹುದಿಟ್ಟ ಹೆಂಗಸು ವೀರ ತಿಮ್ಮಮ್ಮ
ಎಂಬಾಕೆ ಯುದ್ಧದಲಿ ಹಗೆಯ ಸೋಲಿಸಿ ನಮ್ಮ
ಊರ ರಕ್ಷಿಸಿದಳೆಂಬರು. ನಮ್ಮ ಲಕ್ಷಮ್ಮ
ಅಂಥದೇ ಹೆಣ್ಣು. ಬರಿ ಲಕ್ಷ್ಮಮ್ಮನಲ್ಲ ; ಇದು
ವೀರಲಕ್ಷ್ಮಮ್ಮ" ಎಂದರು.

*– ಮಾಸ್ತಿ ವೆಂಕಟೇಶ ಅಯ್ಯಂಗಾರ್*



**ಮಾಸ್ತಿ ವೆಂಕಟೇಶ ಅಯ್ಯಂಗಾರ್**

ಕನ್ನಡ ಸಣ್ಣಕತೆಯ ಪ್ರಪಂಚದಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರರ ಸ್ಥಾನ ಅಗ್ರ ಶ್ರೇಣಿಯದು. ಉತ್ತಮ ನಾಟಕಕಾರರೂ, ವಿಮರ್ಶಕರೂ ಆಗಿದ್ದ ಮಾಸ್ತಿಯವರು ಕವಿಗಳಾಗಿಯೂ ಪ್ರಸಿದ್ಧರು. 'ಶ್ರೀನಿವಾಸ' ಎಂಬುದು ಇವರ ಕಾವ್ಯನಾಮ. 'ಮಲಾರ', 'ನವರಾತ್ರಿ', 'ಚೆಲುವು', 'ಸುನೀತ' ಇವರ ಕೆಲವು ಕವನಸಂಕಲನಗಳು. ಚೆನ್ನಬಸವನಾಯಕ, ತಿರುಪಾಣಿ, ಭಾರತತೀರ್ಥ, ಆದಿಕವಿ ವಾಲ್ಮೀಕಿ ಮೊದಲಾದವು ಇವರ ಇನ್ನಿತರ ಕೃತಿಗಳು. ಇವರ 'ಚಿಕವೀರ ರಾಜೇಂದ್ರ' ಎಂಬ ಕೃತಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ. ಪ್ರಸ್ತುತ 'ವೀರಲಕ್ಷ್ಮಮ್ಮ' ಕಥನಕವನವನ್ನು 'ನವರಾತ್ರಿ' ಎಂಬ ಕಥನಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ

- ❐ ಈ ಕಥನಕವನದಲ್ಲಿ ನಿಮಗಿಷ್ಟವಾದ ಭಾಗ ಯಾವುದು? ಯಾಕೆ ಇಷ್ಟವಾಯಿತೆಂಬುದನ್ನು ಸಮರ್ಥಿಸಿ ಬರೆಯಿರಿ.
- ❐ ಎಮ್ಮೆ ಮೂಕಪ್ರಾಣಿಯಾದರೂ ಅದು ಒಂದು ತಾಯಿ. ತನ್ನ ಕರುಳಕುಡಿಯ ಮೇಲಿನ ಅದರ ಮಮತೆ ಮಿಗಿಲಾದುದು. ಕಥನಕವನದಲ್ಲಿ ಅದು ಪ್ರಕಟವಾದ ಬಗೆಯನ್ನು ನಿರೂಪಿಸಿರಿ.
- ❐ 'ವೀರಲಕ್ಷ್ಮಮ್ಮ' ಕಥನಕವನದಲ್ಲಿ ನಿರೂಪಿತವಾದಂತಹ ಸಾಹಸ ಮತ್ತು ಪ್ರಾಮಾಣಿಕತೆಗಳನ್ನು ಮೆರೆದ ಇನ್ನಿತರ ಪ್ರಾಣಿಪಕ್ಷಿಗಳ ಪ್ರಸಂಗಗಳಿರಬಹುದು. ಅವುಗಳನ್ನು ಸಂಗ್ರಹಿಸಿ, ಒಂದನ್ನು ತರಗತಿಯಲ್ಲಿ ಹೇಳಿರಿ.

* * *

# ಹಾಲಜ್ಜನ ಅಳಲು

'ಬಿಸಿಲೆ' ಹಾಸನದ ಪಕ್ಕಕ್ಕಿದ್ದ ದಟ್ಟಾರಣ್ಯ. ಪಕ್ಷಿಸಂಕುಲಗಳಿಗೆ ಅಭಯಾರಣ್ಯವಾಗಿದ್ದ ಅಲ್ಲಿಗೆ ಘಟ್ಟದ ಕೆಳಗಿನಿಂದ ತಂಡ ಒಂದು ವಲಸೆ ಬಂದು ನೆಲೆಸಿತು. ಹೊಟ್ಟೆಯ ಪಾಡನ್ನು ಅರಸಿಕೊಂಡು ಬಂದ ಈ ತಂಡ, ಊರಲ್ಲಿ ವಸತಿಗಾಗಿ ಹುಡುಕಾಡದೆ 'ಬಿಸಿಲೆ' ಅರಣ್ಯವನ್ನು ಆಶ್ರಯಿಸಿತು. ತಂಡದ ನಾಯಕ ಪಾಂಡು ಬಹಳ ಬುದ್ಧಿವಂತ. ನಿರಕ್ಷರಕುಕ್ಷಿಯಾದರೂ ತೀಕ್ಷ್ಣಮತಿ. ಅರಣ್ಯದೊಳಗೆ ಪ್ರವೇಶಿಸುತ್ತಿದ್ದ ಹಾಗೆ ಸುತ್ತಲೂ ಒಮ್ಮೆ ತನ್ನ ತೀಕ್ಷ್ಣದೃಷ್ಟಿಯನ್ನು ಹರಿಸಿದ. ಬಣ್ಣ ಬಣ್ಣದ ಬಗೆಬಗೆಯ ಪಕ್ಷಿಗಳು ಬೃಹದಾಕಾರವಾಗಿ ಬೆಳೆದಿರುವ ಮರಗಳಲ್ಲಿ ಕುಳಿತಿವೆ. ಕೆಲವು ಮನುಷ್ಯ ಸುಳಿವಿಗೆ ಹೆದರಿ ಗೂಡೊಳಗೆ ಸೇರಿಕೊಂಡಿವೆ. ಕೆಲವು ಇನ್ನಷ್ಟು ಎತ್ತರಕ್ಕೆ ಹಾರಿ ಕುಳಿತುಕೊಂಡಿವೆ. ಒಂದೊಂದು ಮರಗಳ ಕಡೆಗೂ ದೃಷ್ಟಿ ಹರಿಸಿದ ಪಾಂಡು. ದೊಡ್ಡದೊಡ್ಡ ಮತ್ತಿ, ಹೊನ್ನೆ ಮರಗಳೂ, ಬೀಟಿ ತೇಗದ ಮರಗಳೂ ಟಿಸಿಲೊಡೆದು ಒಂದೊಂದು ಗೆಲ್ಲು ರಟ್ಟೆ ಗಾತ್ರ ಬೆಳೆದು, ಒಂದು ಮರದ ಗೆಲ್ಲಿಗೆ ಮತ್ತೊಂದು ಮರದ ಗೆಲ್ಲು ಸೇರಿಕೊಂಡು ಒಂದನ್ನೊಂದು ತಬ್ಬಿಕೊಂಡಂತೆ ಕಾಣುತ್ತಿತ್ತು. ಕಾಡು ದಟ್ಟವಾಗಿದೆ.

'ಬಿಸಿಲೆ' ಅರಣ್ಯ ಸುಮಾರು ೧೦,೧೦೦ ಎಕರೆ ವಿಸ್ತೀರ್ಣವನ್ನೊಳಗೊಂಡಿತ್ತು. ಕಾಡು ದಟ್ಟವಾಗಿದ್ದರಿಂದ ಸುಲಭವಾಗಿ ಒಳಗೆ ಪ್ರವೇಶಿಸಲು ಜನ ಅಂಜುತ್ತಿದ್ದರು. ಆದರೆ ವಲಸೆ ಬಂದ ಈ ತಂಡಕ್ಕೆ ಒಬ್ಬರಿಗೆ ಒಬ್ಬರು ಇದ್ದೇವೆ ಎನ್ನುವ ಧೈರ್ಯ. ಕಾಲುಗಳ ಬುಡದಲ್ಲಿ ಅಡ್ಡ ಬರುತ್ತಿದ್ದ ಕಾಡುಬಳ್ಳಿಗಿಡಗಳನ್ನು ಸವರುತ್ತ, ತಂಡ



ಅರಣ್ಯದೊಳಗೆ ಹೆಜ್ಜೆ ಇರಿಸಿತು. ಪ್ರತಿಯೊಬ್ಬರ ಕೈಯಲ್ಲೂ ಕತ್ತಿ ಅಥವಾ ಗುರಾಣಿಗಳಿದ್ದವು. ಕಾಡು ಎಂದ ಮೇಲೆ ಕಾಡುಪ್ರಾಣಿಗಳಿರಬಹುದು. ಎದುರು ಬಂದರೆ, ಅವನ್ನು ಸವರಲು ಆಯುಧವನ್ನು ಕೈಲಿ ಹಿಡಿದೇ ನಡೆದಿದ್ದರು ಎಲ್ಲಾ. ಗಂಡಸರೆಲ್ಲ ಹಿಂದಷ್ಟು ಮುಂದಷ್ಟು ಇದ್ದು, ತಂಡದಲ್ಲಿದ್ದ ಮೂರು ಮಂದಿ ಹೆಂಗಸರನ್ನು ಮಧ್ಯೆ ಬಿಟ್ಟು ಎಲ್ಲಾ ಮುನ್ನಡೆದಿದ್ದರು. ಬೇಗ ಬೇಗ ಕಾಡೊಳಗೆ ಹೆಜ್ಜೆಹಾಕುವಂತೆಯೂ ಇಲ್ಲ. ಕಾಲಿಗೆ ಅಡ್ಡ ಬರುವ ಗಿಡಗಂಟೆಗಳನ್ನು ಸವರದೆ ಮುಂದೆ ನುಗ್ಗುವ ಹಾಗೆಯೂ ಇಲ್ಲ. ನಾಲ್ಕು ಮಂದಿ ಗಿಡಗಂಟೆಗಳನ್ನು ಸವರಿ ದಾರಿ ಮಾಡಿಕೊಳ್ಳುತ್ತಿದ್ದರೆ, ನಾಲ್ಕು ಮಂದಿ ನಿಂತು ನೋಡುತ್ತಿದ್ದರು. ಯಾವುದಾದರೂ ಪ್ರಾಣಿ ಮೈಮೇಲೆ ಹಾರಿದರೆ ಎನ್ನುವ ಭೀತಿ ಎಲ್ಲರಿಗೂ ಇದ್ದೇ ಇತ್ತು.

ಕಾಡಿನ ಒಳಗೆ ಹೋಗುತ್ತಿದ್ದಂತೆ ಬೆಳಗಿನ ಹೊತ್ತಿನಲ್ಲೂ ಕತ್ತಲು ದಟ್ಟವಾಗುತ್ತಿದೆ. 'ಬಿಸಿಲೆ' ಬಿಸಿಲು ಮುಟ್ಟದ ಅರಣ್ಯ. ಒಳಗೆ ಹೋದಷ್ಟು ಕಗ್ಗತ್ತಲು. ಬಗೆಬಗೆಯ ವಿಧವಿಧ ಪ್ರಾಣಿಗಳ ಕೂಗು, ಜೊತೆಗೆ ಪಕ್ಷಿಗಳ ಕಲರವ ಜೀರುಂಡೆಗಳ ಝೇಂಕಾರ, ಗೂಗೆಯ ಘೂಂ ಘೂಂ.......... ಸದ್ದು ಇವೆಲ್ಲವುಗಳಿಂದ ಒಂದು ರೀತಿಯ ಭಯಾನಕ ವಾತಾವರಣ ಅಲ್ಲಿ ನೆಲೆಗೊಂಡಿತ್ತು. ಒಬ್ಬರ ಮುಖ ಒಬ್ಬರಿಗೆ ಕಾಣಿಸುತ್ತಿಲ್ಲ. ಒಬ್ಬರನ್ನೊಬ್ಬರು ಕೂಗುತ್ತಾ, ಹಿಂದೆ ಬರುತ್ತಿದ್ದಾರೆಯೇ ಇಲ್ಲವೇ ಎಂಬುದನ್ನು ಸ್ಥಿರಪಡಿಸಿಕೊಳ್ಳುತ್ತ ಅವರು ಮುನ್ನಡೆದಿದ್ದಾರೆ. ಇದ್ದಕ್ಕಿದ್ದಂತೆ ಮುಂದಿದ್ದ ಪಾಂಡು ಸರ್ರನೆ ನಿಂತು ಬಿಟ್ಟ. ಕಾಲಿಗೆ ಏನೋ ಮೃದುವಾದದ್ದು ಸ್ಪರ್ಶಿಸುತ್ತಿದ್ದ ಹಾಗೆ! ಹಾವಿರಬಹುದೇ? ಎನ್ನುವ ಅನುಮಾನ, ಭೀತಿ. ಬೆಂಕಿಕಡ್ಡಿ ಗೀರಿ ನೋಡಿದಾಗ ಬಿಳಿ ಮೊಲ ಚಿಗುರು ಹುಲ್ಲನ್ನು ತಿನ್ನುತ್ತಿದೆ! ಮುದ್ದಾದ ಮೊಲವನ್ನು ನೋಡಿ ಮಕ್ಕಳೆಲ್ಲ ಒಂದು ಕ್ಷಣ ನಿಂತುಕೊಂಡವು. ಮೆಲ್ಲನೆ ಹೊಂಚು ಹಾಕಿ ಸರ್ರನೆ ಹಿಡಿದುಕೊಂಡ ಸುಬ್ರಮಣಿ. ಮೊಲ ಹುಡುಗರ ಕೈಯಿಂದ ಕೈಗೆ ಬದಲಾಗುತ್ತ ಹುಡುಗರ ಆಯಾಸವನ್ನೇ ಕೆಲಕಾಲ ಪರಿಹರಿಸಿತು.





"ಕಾಡೊಳಗೆ ಬಿಟ್ಟುಬಿಡೊ ಅದನ್ನ, ಸುಮ್ನೆ ಹಿಂಸೆ ಮಾಡಬೇಡಿ" ಎಂದ ತಂಡದ ಹಿರಿಯ ಹಾಲಜ್ಜ. ಹುಡುಗರಿಗೂ ಮೊಲವನ್ನು ಹೊತ್ತು ಹೊತ್ತು ಸಾಕಾಗಿತ್ತು. ಅವರು ಮೊಲವನ್ನು ಕಾಡೊಳಗೆ ಬಿಟ್ಟದ್ದೇ ಅದು ಜಿಗಿದು ಓಡಿ ಹೋಯಿತು.

"ನಾವು ಅರಣ್ಯದ ಮಧ್ಯ ಭಾಗಕ್ಕೆ ಹೋಗೋಣ. ನಮ್ಮನ್ನು ಯಾರೂ ಕಾಣಬಾರದು. ನಾವು ಅಲ್ಲಿ ಒಂದಿಷ್ಟು ಮರಗಿಡಗಳನ್ನು ಕಡಿದು ಮೊದಲು ನಿಲ್ಲಲು ವಸತಿ ಕಟ್ಟಿಸಿಕೊಳ್ಳಬೇಕು. ಮುಂದಿನ ವಿಚಾರ ಆಮೇಲೆ" ಎಂದ ಪಾಂಡು.

"ಮರಗಿಡಗಳನ್ನು ಕಡಿಯುವುದೇ" ಎಂದ ಹಾಲಜ್ಜನ ಮಾತಿಗೆ ಉತ್ತರಿಸಬೇಕು ಎನ್ನುವಷ್ಟರಲ್ಲಿ ಕಾಡುಕೋಳಿಯೊಂದು ಇವರ ಇದಿರು ಬಂತು. ಅಷ್ಟರಲ್ಲೇ ಕಾಡುಬೆಕ್ಕು ಬಂದು ಹಾರುತ್ತಾ ಅತ್ತ ಹೋದುದನ್ನು ನೋಡಿ ಹುಡುಗರಿಗೆ ಸಂತೋಷವೋ ಸಂತೋಷ. ಅವನ್ನೆಲ್ಲ ಹುಡುಗರಿರಲಿ ಹಿರಿಯರೂ ಕಂಡಿರಲಿಲ್ಲ. ಆದರೆ ಹಾಲಜ್ಜ ನೋಡಿದ್ದಾನೆ. ಅವನು ಎಳೆಯವನಿದ್ದಾಗ ಅವನು ಹುಟ್ಟಿದ ಹಳ್ಳಿಯಲ್ಲೇ ದಟ್ಟವಾದ ಕಾಡುಗಳಿದ್ದವು. ಪಕ್ಕದ ಹಳ್ಳಿಗೆ ಹೋಗಬೇಕಾದರೆ ಕಾಡು ಹಾದು ಹೋಗಬೇಕು. ಕಾಡುದಾರಿಯೇ ನೆರೆಯ ಹಳ್ಳಿಗೆ ಸಮೀಪದ ದಾರಿ. ಹೀಗೆ ಕಾಡುದಾರಿಯಲ್ಲಿ ಹೋಗುವಾಗೆಲ್ಲ ಕಾಡುಕೋಳಿಯನ್ನು ಕಂಡಿದ್ದಾನೆ; ಕಾಡುಬೆಕ್ಕನ್ನು ನೋಡಿದ್ದಾನೆ ಹಾಲಜ್ಜ.

ಹಾರೆ, ಗುದ್ದಲಿ, ಗಡಿಪಾಯ ಎಲ್ಲಾ ಹಿಡಿದುಕೊಂಡು ಒಬ್ಬೊಬ್ಬರೇ ಎದ್ದರು. ನಿಂತ ಜಾಗದಲ್ಲಷ್ಟು ಬೃಹದಾಕಾರದ ಮರಗಳಿರಲಿಲ್ಲ. ಆದರೆ ಮರಗಿಡಗಳು ದಟ್ಟವಾಗಿ ಸೊಂಪಾಗಿ ಬೆಳೆದಿದ್ದವು. ಪಕ್ಷಿಗಳ ಗೂಡುಗಳೂ ಆ ಮರದ ತುಂಬಾ ಇದ್ದುವು. ವಿಧವಿಧದ ಬಣ್ಣಬಣ್ಣದ ಪಕ್ಷಿಗಳೂ ಆ ಮರಗಳ ಮೇಲೆ ಕುಳಿತಿವೆ. ಬಲವಾದ ಏಟು ಮರಕ್ಕೆ ಬಿದ್ದೊಡನೆ ಮರಗಳ ಮೇಲೆ ಕುಳಿತಿದ್ದ ಪಕ್ಷಿಗಳು ಪುರ್ರನೆ ಹಾರಿ ಆಕಾಶದಲ್ಲಿ ತೇಲಿಹೋದವು. ಹಾಲಜ್ಜ ತಲೆ ಎತ್ತಿ ಮೇಲೆ ನೋಡಿದ. ಮರಗಳ ಪೊಟರೆ ಪೊಟರೆಗಳಲ್ಲೂ ಪಕ್ಷಿಗಳು ಗೂಡು ಕಟ್ಟಿವೆ. ಮರ ಕೆಡವಿದರೆ ಪಕ್ಷಿಗಳ ಮರಿಮೊಟ್ಟೆಗಳು ಸಾಯುತ್ತವೆ ಎಂದು ಹಾಲಜ್ಜ ಯೋಚಿಸುತ್ತಾ ಅಂದ.

"ಬೇಡ ಪಾಂಡು ಮರ ಕಡಿಯಬೇಡ. ಕಾಡು ಕಡಿದರೆ ಊರು ನಾಶವಾಗುತ್ತದೆ. ಕಾಡಿದ್ದರೆ ಊರು" ಎಂದ.

ಪಾಂಡುಗೆ ಹಾಲಜ್ಜನ ಮಾತಿನ ಬಗ್ಗೆ ಅಲಕ್ಷ್ಯ. "ಊರಲ್ಲಿ ಇಷ್ಟು ದೊಡ್ಡ ಪರಿವಾರಕ್ಕೆ ಯಾರು ಜಾಗ ಕೊಡುತ್ತಾರೆ. ಕಷ್ಟಪಡುವವರಿಗೆ ಊರೂ ಒಂದೇ, ಅರಣ್ಯವೂ ಒಂದೇ. ಇಷ್ಟು ದಿನ ಊರಲ್ಲಿದ್ದು ಏನು ಸುಖ ಪಟ್ಟೆವು" ಎಂದು ತನ್ನಷ್ಟಕ್ಕೆ ಹೇಳಿಕೊಳ್ಳುತ್ತ ಮರಗಳನ್ನು ಕಡಿದು ಕೆಡಹುವುದರಲ್ಲಿ ಸನ್ನದ್ಧನಾಗಿದ್ದ. ನಾಲ್ಕು ಕೈ ಸೇರಿದ್ದರಿಂದ ಸಂಜೆ ಹೊತ್ತಿಗೆ ಹತ್ತಾರು ಮರಗಳು ಕೆಳಗೆ ಉರುಳಿ ಬಿದ್ದುವು. ಎಲ್ಲರೂ ಸೇರಿ ಉರುಳಿ ಬಿದ್ದ ಮರಗಳನ್ನು ಎಳೆದು ಅರಣ್ಯದೊಳಗೆ ತೂರಿದರು. ತಾವಿದ್ದ ಅಷ್ಟು ಜಾಗ ಸಮತಟ್ಟು ಮಾಡಿಕೊಂಡರು.

ಒಬ್ಬರು ನೆಲ ಅಗೆದರು. ಕಾಡೊಳಗೆ ಸಿಕ್ಕಿದ ಚಪ್ಪಡಿ ಕಲ್ಲುಗಳನ್ನು ಮತ್ತೊಬ್ಬರು ಹೊತ್ತು ತಂದರು. ಮಗದೊಬ್ಬರು ನೀರಿನ ಗುಮ್ಮಿಯ ಬಳಿ ಇದ್ದ ಜೇಡಿ ಮಣ್ಣನ್ನು ಹೊತ್ತು ತಂದರು. ಮಣ್ಣಿನ ಹೆಂಟೆಯಿಂದ ಮಣ್ಣಿನ ಗೋಡೆಯನ್ನು ಅಲ್ಲಲ್ಲಿ ಜೇಡಿ ಮಣ್ಣನ್ನು ಕೂಡಿಸಿ ಕಟ್ಟಿದರು. ಸಂಜೆ ಹೊತ್ತಿಗೆ ಪುಟ್ಟ ಗುಡಿಸಲು ಸಿದ್ಧವಾಯಿತು. ಮಾಡಿಗೆ ಮುಚ್ಚಲು ಚಾಪೆ, ಗೋಣಿ ಚೀಲ, ಎಲೆ ಸರಕು ಉಪಯೋಗಿಸಿ, ಮಳೆ ಬಂದರೂ ಒಳಗೆ ಬೀಳದಂತೆ

ಭದ್ರವಾಗಿ ಗುಡಿಸಲನ್ನು ಕಟ್ಟಿದರು. ಗುಡಿಸಲು ನಿರ್ಮಾಣವಾದದ್ದೇ ಹೆಂಗಸರು ಮೊದಲು ಒಂದು ಆರತಿ ಬೆಳಗಿ ಗುಡಿಸಲೊಳಗೆ ಕಾಲಿಟ್ಟರು. ಅವರ ಹಿಂದೆ ಗಂಡಸರು ಹೋದರು. ಇಷ್ಟೆಲ್ಲಾ ಆಗುತ್ತಿರುವಾಗ ಹಾಲಜ್ಜ ಮಾತ್ರ ಹೊರಗೇ ನಿಂತಿದ್ದ. ಧರೆಗುರುಳಿದ ಮರಗಳ ಕಡೆ ನೋಡುತ್ತ ನಿಟ್ಟುಸಿರುಬಿಡುತ್ತಿದ್ದ. ಗಿರಿ ಕಡಿದು ಹಾಕಿದ್ದ ಮರಗಳ ಪೊಟರೆಯೊಳಗೆ ಅನಾಥವಾಗಿ ಬಿದ್ದಿದ್ದ ಪಕ್ಷಿಗಳ ಗೂಡುಗಳನ್ನು ಶೇಖರಿಸುವುದರಲ್ಲಿ ತೊಡಗಿದ್ದ. ವಿಧವಿಧದ ಪಕ್ಷಿಗಳು ತರಾವರಿ ಗೂಡುಗಳನ್ನು ಕಟ್ಟಿದ್ದವು. ಎಷ್ಟು ಮರಿಗಳು, ಎಷ್ಟು ಮೊಟ್ಟೆಗಳು ನಾಶವಾಗಿವೆಯೋ ದೇವರಿಗೇ ಗೊತ್ತು. ಪಕ್ಷಿಗಳು ಆ ಗೂಡುಗಳನ್ನು ಎಷ್ಟು ವ್ಯವಸ್ಥಿತವಾಗಿ ಕಟ್ಟಿವೆ. ಮಳೆಗಾಳಿಯನ್ನು ತಡೆಯುವಂತೆ ಅವನ್ನು ನಿರ್ಮಿಸಿವೆ. ಒಂದು ಗೂಡಿಗಿಂತ ಮತ್ತೊಂದು ಗೂಡಿಗೆ ಎಷ್ಟೊಂದು ಅಂತರ ಎಷ್ಟೊಂದು ವ್ಯತ್ಯಾಸ! ಮನುಷ್ಯರು ಮನೆಗಳನ್ನು ನಿರ್ಮಿಸುವ ಹಾಗೆ ಅವು ನಿರ್ಮಿಸಿಕೊಂಡಿವೆ. ಹಾಲಜ್ಜ ಗಿರಿ ಶೇಖರಿಸುತ್ತಿದ್ದ ಒಂದೊಂದು ಗೂಡನ್ನು ಕೈಗೆತ್ತಿಕೊಂಡು ತಿರುಗಿಸಿ ಮುರುಗಿಸಿ ನೋಡಿದ. ದೂರದಲ್ಲಿ ಕುಳಿತು ಮೌನವಾಗಿ ರೋದಿಸುವ ಪಕ್ಷಿಸಂಕುಲಗಳ ಕಡೆಗೆ ಅವನ ದೃಷ್ಟಿ ಹೋಯಿತು. ಮೂಲಭಾಷೆಯಲ್ಲೇ ಅವು ಕಣ್ಣೀರು ಸುರಿಸುತ್ತಿವೆ. ಏನೋ ಎನಿಸಿತು ಹಾಲಜ್ಜನಿಗೆ. ಮರಗಳನ್ನು ಕಡಿದು, ಗೂಡುಗಳು ಕೆಳಗುರುಳಿದಾಗಿನಿಂದ ಅವುಗಳ ಕಲರವವೇ ಇಲ್ಲ. ದೂರದ ಮರಗಳಲ್ಲಿ ಕೇಳುವ ಪಕ್ಷಿಗಳ ಕಲರವದ ಹೊರತು ಆ ಸುತ್ತುಮುತ್ತಲೆಲ್ಲ ಪಕ್ಷಿಗಳು ಹಾರಾಡುತ್ತಿದ್ದರೂ, ಸದ್ದೇ ಇಲ್ಲ. ಹಾಗಾದರೆ ಪಕ್ಷಿಗಳು ಮನುಷ್ಯನಿಗಿಂತೇನು ಕಮ್ಮಿ! ಅವುಗಳೂ ಶೋಕವನ್ನು ಅನುಭವಿಸುತ್ತವೆ ಎಂದುಕೊಂಡಾಗ ಹಾಲಜ್ಜನ ಕರುಳು ಸುಡುತ್ತದೆ.

"ಹಾಲಜ್ಜ ಇಲ್ಲಿ ನೋಡು ಈ ಗೂಡು ಎಷ್ಟು ಸುಂದರವಾಗಿದೆ" ಎಂದು ಗಿರಿ ಹಾಲಜ್ಜನಿಗೆ ತೋರಿಸಿದ. ಆ ಗೂಡಿನ ಅಡಿಭಾಗ ಬಿಟ್ಟರೆ ಉಳಿದ ಭಾಗದಲ್ಲೆಲ್ಲ ಸಣ್ಣ ಸಣ್ಣ ತೂತುಗಳಿದ್ದವು. ಆ ಗೂಡು ನಿಜವಾಗಿಯೂ ಕಲಾತ್ಮಕವಾಗಿತ್ತು. ಗಿರಿಯ ಸಂತೋಷದಲ್ಲಿ ಹಾಲಜ್ಜ ಪಾಲ್ಗೊಳ್ಳಲಿಲ್ಲ. ಅವನ ಮನಸ್ಸಿಗೆ ತುಂಬಾ ನೋವಾಗಿತ್ತು. ಬೇಸರವಾಗಿತ್ತು. ಮರಗಿಡಗಳನ್ನು ಕೆಡವಿ ಪಕ್ಷಿಸಂಕುಲಗಳನ್ನು ದುಃಖದಲ್ಲಿ ಮುಳುಗಿಸಿ ಸಾಧಿಸಿದ್ದಾದರೂ ಏನು. ಗಿರಿ ಗೋಣಿಚೀಲದಲ್ಲಿ ಪಕ್ಷಿಗಳ ಗೂಡುಗಳನ್ನು ತುಂಬಿ ಒಳಗೆ ತಂದಿಟ್ಟ. ಕೈಲಿದ್ದ ಆ ಕಲಾತ್ಮಕ ಗೂಡನ್ನು ಮಾತ್ರ ಅವನು ಕೆಳಗಿಡದೆ ಅದರೊಳಗೆ ಏನಿದೆ ಎಂದು ಬಿಚ್ಚಿ ನೋಡಿದ. ಆ ಗೂಡಿನ ಒಳಗೆ ಸುತ್ತಲೂ ಬೂರುಗದ ಹತ್ತಿಯನ್ನು ತಂದು ಮೆತ್ತಿದ್ದವು ಪಕ್ಷಿಗಳು. ಮೃದುವಾದ ಹತ್ತಿಯನ್ನು ಹಾಸಿಗೆಯಂತೆ ದಪ್ಪಗೆ ದಟ್ಟವಾಗಿ ಗೂಡಿನ ತಳ ಭಾಗದಲ್ಲಿ ಉದ್ದಕ್ಕೂ ಮೆತ್ತಿದ್ದವು. ಮರಿಗಳು ಮೊಟ್ಟೆ ಒಡೆದು ಹೊರ ಬಂದಾಗ ಅವುಗಳ ಮೈಗೆ ಒತ್ತದಿರಲಿ ಎಂದು ಆ ಹತ್ತಿಯನ್ನು ತುಂಬಿರಬಹುದೇ ಎಂದುಕೊಂಡಾಗ ಯಾವ ಮನುಷ್ಯನಿಗೆ ಕಡಿಮೆ ಈ ಪಕ್ಷಿಗಳು ಎನಿಸಿತು ಹಾಲಜ್ಜನಿಗೆ. ಆದರೆ ಆ ಗೂಡಿನ ತಳದಲ್ಲಿದ್ದ ಮೊಟ್ಟೆಗಳು ಹಾಲಜ್ಜನ ಕಣ್ಣಲ್ಲಿ ನೀರು ಬರಿಸಿದವು. ಅವನು ನೋಡಲಾರದೆ ಅಂದ –

"ಆ ಗೋಣಿ ಚೀಲವನ್ನು ತೆಗೆದು ಹೊರಗಿಡು. ಅದರಲ್ಲಿ ಇನ್ನೆಷ್ಟು ಮೊಟ್ಟೆ, ಪಕ್ಷಿಗಳ ಮರಿಗಳಿವೆಯೋ"

"ಇಲ್ಲ ಎಲ್ಲಾ ಹೊರಗೆ ಒದರಿ ಗುಡ್ಡೆ ಹಾಕಿದ್ದೇನೆ. ನೋಡು ಬಾ" ಎಂದ. ಹಾಲಜ್ಜ ಈ ಮಾತಿಗೆ ಉತ್ತರಿಸಲಿಲ್ಲ.

ಮರುದಿನ ಮತ್ತಷ್ಟು ಕಾಡುಗಳ ಸರ್ವನಾಶಕ್ಕೆ ತೊಡಗಿದರು. ತಮ್ಮ ನೆಲೆಯನ್ನು ವಿಶಾಲವಾಗಿ ಪಸರಿಸಿಕೊಳ್ಳುವ ಪ್ರಯತ್ನ ಅವರದ್ದಾಗಿತ್ತು. ಪಾಂಡು ತಮ್ಮಂದಿರಜೊತೆ ಸೇರಿ ಮತ್ತಷ್ಟು ಮರಗಳನ್ನು ಕಡಿಯಲು ಮುಂದಾಗಿದ್ದ. ಒಳಗೆ ಇದ್ದ ಹಾಲಜ್ಜ ಹೊರಗೆ ಬಂದ. ಹಣ್ಣು ಹಣ್ಣು ಮುದುಕ. ಬಳುಕುವ ಶರೀರ, ಸವಕಲು



ತೊಡೆ, ಇಡೀ ಶರೀರ ನಡುಗುತ್ತಿತ್ತು. ಹಾಗೆಂದು ಅಜ್ಜ ಕಳಪೆಯಲ್ಲ. ಕೈಗೆ ಕೋಲು ಕೊಟ್ಟರೆ, ಜೊತೆಗೆ ಒಂದು ಜನ ಮಾಡಿಕೊಟ್ಟರೆ, ಇಡೀ ಅರಣ್ಯ ಸುತ್ತಿ ಬರಬಲ್ಲ. ಕಣ್ಣುಗಳೂ ದೃಷ್ಟಿ ಕಳೆದುಕೊಂಡಿಲ್ಲ. ಕಿವಿಯೂ ಕೇಳಿಸುತ್ತದೆ. ಎಲ್ಲರಿಗಿಂತ ಹಿರಿಯವನಾದಂತೆ ಬುದ್ಧಿಮತ್ತೆಯಲ್ಲೂ ಹಿರಿಯನೇ. ಯೋಚನೆ ವಿವೇಚನೆ ಅವನಿಗೆ ಇದ್ದ ಹಾಗೆ ಅಲ್ಲಿ ಒಬ್ಬರಿಗೂ ಇಲ್ಲ. ಅವನು ಕೋಲೂರುತ್ತ ಮರ ಕಡಿಯುವಲ್ಲಿಗೆ ಬಂದ. ಬೃಹದಾಕಾರವಾಗಿ ಬೆಳೆದ ಆ ಮರಗಳೂ ಎಷ್ಟು ಮಳೆಗಾಳಿಯನ್ನು ತಡೆದಿದ್ದುವೋ! ಈಗ ರಾಕ್ಷಸರ ಕೈಗೆ ಸಿಕ್ಕಿ ಸರ್ವನಾಶ ಹೊಂದುತ್ತಿವೆ. ಹಸಿ ಹಸಿ ಮರಗಳೂ ಬುಡ ಕಳಚಿ ಬಿದ್ದಿವೆ. ಮರಗಳಿಗೆ ಪೆಟ್ಟು ಬಿದ್ದ ಜಾಗದಲ್ಲಿ ನೀರು ಸೋರುತ್ತಿದೆ. ಮನುಷ್ಯನಿಗೆ ಗಾಯವಾದರೆ ರಕ್ತ ಸೋರುವ ಹಾಗೆ. ಪಕ್ಷಿಗಳು ಮನುಷ್ಯರಂತೆ ಮಾತನಾಡುವುದಿಲ್ಲ. ಆದರೂ ಅವಕ್ಕೊಂದು ಭಾಷೆಯಿದೆ. ಹಾಗೆ ಮರಗಿಡಗಳಿಗೆ ಜೀವವಿದ್ದಂತೆ ಕಾಣುವುದಿಲ್ಲ. ಆದರೆ ಅವಕ್ಕೂ ಜೀವವಿದೆ. ಆ ಜೀವವಿರುವುದರಿಂದಲೇ ಕಡಿದಾಗ, ಪೆಟ್ಟು ಬಿದ್ದ ಭಾಗದಲ್ಲಿ ನೀರಿನಂತಹ ಸೊನೆ ಸೋರುತ್ತದೆ. 'ಮನುಷ್ಯನ ಶರೀರದಲ್ಲಿ ರಕ್ತ ಹರಿಯುವಂತೆ ಮರಗಿಡಗಳಲ್ಲಿ ಹರಿಯುವುದೇನು? ಅದು ರಕ್ತವೇ ಅಲ್ಲವೆ?' ಎಂದು ಯೋಚಿಸಿದ. ಪಕ್ಕದಲ್ಲಿದ್ದ ಮರಗಳು ಬುಡ ಕಳಚಿ ಬಿದ್ದ ಮರಗಳನ್ನು ನೋಡಿ ದುಃಖಿಸುತ್ತವೆ ಏನೋ! ಎನಿಸಿತು ಹಾಲಜ್ಜನಿಗೆ. ಅವುಗಳಿಂದ 'ಸೂಂಯಿ' ಎಂದು ಬೀಸಿ ಬರುವ ಗಾಳಿಯಲ್ಲಿ ದುಃಖವೇ ತುಂಬಿದೆ ಎಂದು ಅನಿಸಿದಾಗ ಹಾಲಜ್ಜ ಮರ ಕಡಿಯುತ್ತಿದ್ದ ಪಾಂಡುವಿನ ಹತ್ತಿರಕ್ಕೆ ಬಂದು ಹೇಳಿದ.

"ಮಗ ಕಾಡು ಬೇಕು. ಕಾಡಿದ್ದರೆ ಊರು ನೋಡು. ಈ ಮರಗಳು ಕೆಳಗುರುಳಿ ಬಿದ್ದಿವೆ. ಇದನ್ನು ನೋಡಿ ಉಳಿದ ಮರಗಳು ನಿಟ್ಟುಸಿರುಬಿಡುವಂತೆ, ದುಃಖಿಸುವಂತೆ ಕಾಣುವುದಿಲ್ಲವೇ ನಿನಗೆ" ಎಂದ.

ದೀನನಾಗಿ ಮೊರೆಯಿಡುವಂತಿದ್ದ ಹಾಲಜ್ಜನ ಮಾತಿಗೆ ಪಾಂಡುವಿಗೆ ಉತ್ತರಿಸಲಾಗಲಿಲ್ಲ.

– **ಪ್ರೇಮಾಭಟ್**

### ಪ್ರೇಮಾಭಟ್

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸೃಜನಶೀಲ ಮಹಿಳಾ ಸಾಹಿತಿಯಾಗಿ ಪ್ರಸಿದ್ಧರಾದವರು ಪ್ರೇಮಾಭಟ್. ಅವರು ತಮ್ಮ ಸೂಕ್ಷ್ಮ ಸಂವೇದನೆಯಿಂದ ಕನ್ನಡ ಕಥಾ ಪ್ರಪಂಚಕ್ಕೆ ಹೊಸ ಆಯಾಮವನ್ನು ಕಲ್ಪಿಸಿದರು. ಕಾದಂಬರಿ ಕ್ಷೇತ್ರಕ್ಕೆ ಇವರ ಕೊಡುಗೆ ಅನನ್ಯವಾದುದು. ಕೌಟುಂಬಿಕ ಕಥಾಹಂದರವನ್ನೊಳಗೊಂಡಿರುವ ಇವರ ಕಥೆ, ಕಾದಂಬರಿಗಳು ಬಹಳ ಜನಪ್ರಿಯವಾಗಿವೆ. ಮನೆ, ಮದುಮಗಳು, ಹೆರ್ಗದ ದುರ್ಗಾಮಾತೆ, (ಕವನ ಸಂಕಲನಗಳು), ಮನಮೆಚ್ಚಿದವಳು, ಅಕ್ಷತೆ – 108 ಕತೆಗಳು, ಪಂಚಾಮೃತ – 108 ಕತೆಗಳು, ಹೊಸಕಡತ (ಕಥಾಸಂಕಲನಗಳು), ಅವಳ ಬಾಳು, ಕುಂಕುಮ ಶೋಭಿನಿ, ಸುಜಾತ, ಹೂಬಿಸಿಲು, ಭಾವ ಬಂಧನ, ಮಿಣುಕುಹುಳು, ಯಜ್ಞ, ಭ್ರಮಣ (ಕಾದಂಬರಿಗಳು) ಮೊದಲಾದವು ಇವರ ಪ್ರಸಿದ್ಧ ಕೃತಿಗಳು.

ಪ್ರಸ್ತುತ ಪಾಠಭಾಗವನ್ನು ಅವರ 'ಕಾಡು ಕಡಿದು ಊರು ಮಾಡಿದರು' ಎಂಬ ನೀಳ್ಗತೆಯಿಂದ ಸಂಗ್ರಹಿಸಲಾಗಿದೆ.



- ಈ ಕಥೆಯಲ್ಲಿ ಬೇರೆ ಬೇರೆ ಸಂದೇಶಗಳಿವೆ. ಅವುಗಳನ್ನು ಪಟ್ಟಿಮಾಡಿರಿ.
- ಹಾಲಜ್ಜನ ಪಾತ್ರ ಚಿತ್ರಣ ಮಾಡಿರಿ.
- "ನಮ್ಮಂತೆಯೇ ಗಿಡಮರಗಳಿಗೂ ಪ್ರಾಣಿಪಕ್ಷಿಗಳಿಗೂ ಭಾವನೆಗಳಿವೆ, ಸ್ಪಂದನಗಳಿವೆ, ನೋವು ನಲಿವುಗಳಿವೆ" ಈ ಮಾತಿಗೆ ಕಥೆಯ ಆಧಾರದಲ್ಲಿ ನಿಮ್ಮ ಪ್ರತಿಕ್ರಿಯೆಯನ್ನು ನೀಡಿ ಸಮರ್ಥಿಸಿರಿ.
- 'ಹಾಲಜ್ಜನ ಅಳಲು' ಕಥೆಯ ಕೊನೆಯಲ್ಲಿ ದೀನನಾಗಿ ಮೊರೆಯಿಡುವ ಹಾಲಜ್ಜನ ಮಾತಿಗೆ ನಿರುತ್ತರನಾದ ಪಾಂಡುವನ್ನು ಗಮನಿಸುತ್ತೇವೆ. ಪಾಂಡುವಿನ ಮನಃಪರಿವರ್ತನೆಯಾಗಿರಬಹುದೇ? ಕಥೆಯನ್ನು ಮುಂದುವರಿಸಿ ಬರೆಯಿರಿ. ಅರ್ಥಪೂರ್ಣ ಮುಕ್ತಾಯವನ್ನು ಕೊಡಿರಿ.

❐ ಪದಗಳ ಭಾವನಾಮ ರೂಪವನ್ನು ಉಪಯೋಗಿಸಿಕೊಂಡು ಬರೆದ ವಾಕ್ಯಗಳನ್ನು ಗಮನಿಸಿರಿ.

- ಯಯಾತಿಯು ಶೂರನಾದ ಅರಸನಾಗಿದ್ದನು.
  ಯಯಾತಿಯ ಶೌರ್ಯ ಎದುರಾಳಿಗಳ ಎದೆ ನಡುಗಿಸಿತು.
- ಉನ್ನತವಾದ ಗಿರಿಶೃಂಗಗಳ ನಡುವೆ ಡಾರ್ಜಿಲಿಂಗ್ ಪ್ರದೇಶವಿದೆ.
  ಗಿರಿಶೃಂಗಗಳ ಔನ್ನತ್ಯ ನೋಡುಗರನ್ನು ಆಕರ್ಷಿಸುತ್ತಿದೆ.

❐ ಕೆಳಗಿನ ವಿಶೇಷಣ ಪದಗಳನ್ನು ಮತ್ತು ಅವುಗಳ ಭಾವನಾಮರೂಪಗಳನ್ನು ಬಳಸಿಕೊಂಡು ಮೇಲಿನಂತೆ ವಾಕ್ಯಗಳನ್ನು ರಚಿಸಿರಿ.

- ಉದಾರ
- ವಿಶಾಲ
- ಕ್ರೂರ
- ದೀನ

* * *

## ನಿದ್ರಾಭರದೊಳಿರ್ದರ ಕೊಲುವುದುಚಿತವೆ ?

(ಕಥಾ ಸಂದರ್ಭ : ನಿಷಧ ರಾಜ್ಯದ ಒಡೆಯನಾದ ನಳನು ಬೇಟೆಯಾಡಿ ಬಳಲಿ ವಿಶ್ರಾಂತಿಗಾಗಿ ಉದ್ಯಾನವನಕ್ಕೆ ಬಂದನು. ಅಲ್ಲಿಯೇ ಸಮೀಪದ ಕೊಳದಲ್ಲಿ ವಿಹರಿಸುತ್ತಿದ್ದ ರಾಜಹಂಸದ ವೈಭವವನ್ನು ಕಂಡು ಬೆರಗಾಗಿ ಅದನ್ನು ಹಿಡಿದುಕೊಂಡನು. ಆಗ ಬೆದರಿದ ರಾಜಹಂಸ ಪರಹಿಂಸೆ ಸಲ್ಲದೆಂದು ಬಿನ್ನವಿಸಿಕೊಳ್ಳುವ ಸನ್ನಿವೇಶ ಈ ಕಾವ್ಯಭಾಗದಲ್ಲಿದೆ.)



ಏನ ಹೇಳುವೆನರಸ ಹೊಕ್ಕರು
ಕಾನನವ ಬಳಸಿದರು ಮೃಗತತಿ
ಯಾನಲಾಪುದೆ ತೆಗೆದು ಹಾಯ್ದುದು ಭಟರ ಘಲ್ಲಣೆಗೆ
ಆನೆಗಳ ಕೆಡಹಿದರು ಬಲಸಂ
ಧಾನದಲಿ ಹುಲಿ ಕರಡಿ ಮುಸು ಮೊಲ
ವಾನರಾದಿ ಸಮಸ್ತ ಮೃಗಗಳ ತರುಬಿ ಕೆಡಹಿದರು ।೧।

ಹತ್ತಿ ತದ್ಗಿರಿಶಿಖರವನು ಮರ
ಮೊತ್ತದಲಿ ಬಲೆಗಳನು ಹಾಯ್ಕಿದ
ರೊತ್ತಿ ಸೋಹಿದರೊಂದು ಘನತರ ಸಿಂಹವಬ್ಬರಿಸಿ
ಹೊತ್ತು ಕೋಪದಿ ಸೈನ್ಯವನು ಮುರಿ
ದೊತ್ತಿ ಬರುತಿರೆ ಕಂಡು ನೃಪ ಬೆಂ
ಬತ್ತಿ ಕಡಿದನು ಮೃಗಪತಿಯ ವನವೆಲ್ಲ ಬೆರಗಾಗೆ ।೨।

ನಿಲಿಸಿ ಬೇಂಟೆಯನಲ್ಲಿ ಬಳಲಿದ
ಬಲ ಸಮೇತದಿ ಬಂದು ತತ್ಪುರ
ವಳಯದುದ್ಯಾನವನು ಹೊಕ್ಕನು ಬಲಿದ ವಿರಹದಲಿ
ನಲವು ಹಿಂಗಿದ ಮನದ ದುಗುಡದೊ
ಳಿಳಿದು ತೊಳೆದನು ಜಾನುಜಂಘೆಯ
ಕೊಳದಿ ಪರಿಹೃತನಾಗಿ ಸಂಚರಿಸಿದನು ವನದೊಳಗೆ ।೩।





ಆ ಕೊಳದ ತೀರದಲಿ ತರುಗಳ
ನೇಕವದರೊಳಗೊಂದು ಠಾವಿನೊ
ಳೇಕ ವೃಕ್ಷದ ನೆಳಲಿನಲಿ ನವಕುಸುಮದಿಕ್ಕೆಯಲಿ
ಆ ಕಮಲಜನ ತುರಗ ನಿದ್ರಾ
ವ್ಯಾಕುಲದಿ ಮಲಗಿರಲು ಕಂಡ ಶು
ಭಾಕರೋನ್ನತ ಶುಭ್ರತೇಜದ ರಾಜಹಂಸವನು ।೪।

ಅರುಣಮಯದಾನನದ ಪದಯುಗ
ಗರಿಗಳುನ್ನತ ಧವಳ ದೇಹದ
ಪರಮ ತೇಜದೊಳೆಸೆವ ಹಂಸೆಯ ಕಂಡು ಬೆರಗಾಗಿ
ಹರಹರಾ! ಇದರಾಯತವ ಮುರ
ಹರನು ತಾನೇ ಬಲ್ಲನೆನುತ
ಕ್ಕರದಿ ಮೆಲ್ಲನೆ ಕರವ ನೀಡುತ ಪಿಡಿದ ಹಂಸವನು ।೫।

ಒದರಿ ಕುಣಿಯಲು ಹಸ್ತದೊಳಗದ
ಕದಲದಂತಿರೆ ಪಿಡಿಯಲರಸನ
ವದನಕಮಲವ ನೋಡಿ ಹೆದರಿತು ಬಹಳ ಭೀತಿಯಲಿ
ಹೃದಯ ಕರಗುವ ಮಾತನೆಂದುದು
ಮದಕರಿಗೆ ನೊರಜಂತರವೆ ಕೈ
ಸದರದವರನು ಕೊಲುವುದೇನರಿದೆಂದುದಾ ಪಕ್ಷಿ ।೬।

ಕರಿಗಳನು ಮುರಿದಿಡುವ ಸಿಂಹಕೆ
ನರಿಗಳಿದಿರೇ ತಾನು ನಿನಗಂ
ತರವೆ ಸಾಕಂತಿರಲಿ ಕಂಡವರೆಲ್ಲ ಕಡುನಗರೆ
ಅರಿಭಯಂಕರ ಶತ್ರುಗಳ ಸಂ
ಹರಿಸುವುದು ನೃಪನೀತಿ ನಿನಗಿದು
ತರವೆ ಬಿಡು ಪರಹಿಂಸೆ ದೋಷವಿದೆಂದುದಾ ಪಕ್ಷಿ ।೭।

ಬಡಬಗೌತಣವಿಕ್ಕುವೆಡೆಯೊ
ಕ್ಕುಡಿತೆ ಜಲವೇ ಮಂಜು ಸುರಿಯ
ಲ್ಕೊಡನೆ ಕೆರೆ ತುಂಬುವುದೆ ನೃಪ ನೀನೆನ್ನ ಭುಂಜಿಸಲು
ಒಡಲಿಗಾಪ್ಯಾಯನವೆ ಕೇಳೆಲೆ
ಪೊಡವಿಪತಿ ಬಿಡು ನನ್ನ ಮನೆಯಲಿ
ಮಡದಿ ಸುತರುಮ್ಮಳವ ನೋಡೆಂದೊರಲಿತಾ ಪಕ್ಷಿ ।೮।



ಮರನ ಹುತ್ತವನೇರಿದರ ಸರಿ
ಗರದಿ ದೈನ್ಯಂಬಡುವರಾಯುಧ
ಮುರಿದ ಬರಿಗೈಯವರ ನೀರೊಳು ಹೊಕ್ಕು ನಿಂದವರ
ತರುಣಿಯರ ಮರೆಗೊಂಡವರ ನಿ
ಬ್ಬರದಿ ಮುರಿದೋಡುವರ ನಿದ್ರಾ
ಭರದೊಳಿರ್ದರ ಕೊಲುವುದುಚಿತವೆ ಎಂದುದಾ ಪಕ್ಷಿ ।೯।

ನುಡಿಗೆ ನಾಚಿದನರಸ ಹಂಸದ
ನಡವಳಿಗೆ ಮೆಚ್ಚಿದನು ನಿನ್ನನು
ಹಿಡಿದು ಕೊಲ್ಲುವವನಲ್ಲ ನಿನ್ನಾಲಯಕೆ ಹೋಗೆಂದು
ಬಿಡಲು ರೆಕ್ಕೆಯ ಕೊಡಹಿ ಹಾರಿತು
ಒಡನೆ ಮರಳಿತು ಧರೆಗೆ ರಾಯನ
ಕಡೆಗೆ ಮಂಡಿಸಿ ಕುಳಿತು ನುಡಿದುದು ನೃಪಗೆ ವಿನಯದಲಿ ।೧೦।

– ***ಕನಕದಾಸ***

**ಕನಕದಾಸ**

ಕನಕದಾಸರು (ಕ್ರಿ.ಶ. ಸುಮಾರು ೧೫೦೮ – ೧೬೦೬) ದಾಸ ಸಾಹಿತ್ಯ ಪರಂಪರೆಯಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದಿದ್ದಾರೆ. ಇವರ ಪೂರ್ವನಾಮ ತಿಮ್ಮಪ್ಪ. ಇವರ ಜನ್ಮಸ್ಥಳ ಬಾಡ ಎಂಬ ಗ್ರಾಮ. ಕಾಗಿನೆಲೆಯ ಆದಿಕೇಶವನನ್ನು ಆರಾಧ್ಯದೈವವನ್ನಾಗಿ ಮಾಡಿಕೊಂಡು ಅಲ್ಲಿಯೇ ನೆಲೆ ನಿಂತವರು. ಇವರು ಕೀರ್ತನೆಗಳನ್ನಲ್ಲದೆ ನಳಚರಿತೆ, ರಾಮಧಾನ್ಯಚರಿತೆ, ಹರಿಭಕ್ತಿಸಾರ ಮತ್ತು ಮೋಹನ ತರಂಗಿಣಿ ಎಂಬ ಕಾವ್ಯಗಳನ್ನು ರಚಿಸಿದ್ದಾರೆ. ಕನಕದಾಸರ ನಳಚರಿತ್ರೆಗೆ ಮಹಾಭಾರತದ ಕಥೆ ಮೂಲ. ಅಲ್ಲಲ್ಲಿ ಕೆಲವು ಸ್ವಕಲ್ಪಿತ ವಿವರಣೆಗಳನ್ನು ಬಿಟ್ಟರೆ ಕಥಾವಸ್ತುವಿನಲ್ಲಿ ಯಾವುದೇ ಮಾರ್ಪಾಡು ಮಾಡಿಕೊಂಡಿಲ್ಲ.

❒ 'ಪರಹಿಂಸೆ ದೋಷ'ವೆಂದು ನಳನಿಗೆ ಬಿನ್ನವಿಸಿಕೊಂಡು ಅದರಿಂದ ವಿಮುಖನಾಗುವಂತೆ ಬೇಡಿಕೊಂಡ ಹಂಸದ ಹೃದಯಸ್ಪರ್ಶಿಯಾದ ಮಾತುಗಳನ್ನು ವ್ಯಾಖ್ಯಾನಿಸಿ ಬರೆಯಿರಿ.

❒ ಸ್ವಾರಸ್ಯ ಬರೆಯಿರಿ.

- ಕರಿಗಳನು ಮುರಿದಿಡುವ ಸಿಂಹಕೆ ನರಿಗಳಿದಿರೇ
- ಮಂಜು ಸುರಿಯಲ್ಕೊಡನೆ ಕೆರೆ ತುಂಬುವುದೇ
- ನಿದ್ರಾಭರದೊಳಿರ್ದರ ಕೊಲುವುದುಚಿತವೆ

❒ 'ಜೀವಿಗಳ ಭಾವನೆಗಳಿಗೆ ಸ್ಪಂದಿಸುವುದರ ಮೂಲಕ ಮಾನವೀಯತೆ ರೂಪುಗೊಳ್ಳುತ್ತದೆ' – ಎಂಬ ಹೇಳಿಕೆಯ ಕುರಿತು ಕಾವ್ಯಭಾಗದ ಹಿನ್ನೆಲೆಯಲ್ಲಿ ಟಿಪ್ಪಣಿ ಬರೆಯಿರಿ.



- ‘ಮುರಿದು’ ‘ಒತ್ತಿ’ ಎಂಬ ಎರಡು ಪದಗಳು ಸೇರಿ ‘ಮುರಿದೊತ್ತಿ’ ಎಂಬ ಒಂದು ಪದವಾಗಿದೆ. ಹೀಗೆ ಸೇರುವಾಗ ಮೊದಲ ಪದದ ಕೊನೆಯ ‘ಉ’ ಲೋಪವಾಗಿರುವುದನ್ನು ಇಲ್ಲಿ ಗಮನಿಸಬಹುದು. ಇದನ್ನು ಲೋಪ ಸಂಧಿ ಎನ್ನುತ್ತೇವೆ.

  ಹೀಗೆ ಲೋಪ ಸಂಧಿಯಾಗುವ ಪದಗಳನ್ನು ಕಾವ್ಯಭಾಗದಿಂದ ಪಟ್ಟಿಮಾಡಿ ಬರೆಯಿರಿ.

  - ಬೆರಗು + ಆಗಿ = ಬೆರಗಾಗಿ
  - ................................
  - ................................
  - ................................

- ಕೆಳಗಿನ ಪದ್ಯದ ಸಾಲುಗಳಲ್ಲಿರುವ ಅಕ್ಷರಗಳನ್ನು ಗುರುಲಘುಗಳಾಗಿ ಗುರುತಿಸಿರಿ. ಮೂರು, ನಾಲ್ಕು ಹಾಗೂ ಮೂರು, ನಾಲ್ಕು ಮಾತ್ರೆಗಳಿಗನುಸಾರವಾಗಿ ಗಣವಿಭಜನೆ ಮಾಡಿರಿ. ಮೂರನೆಯ ಮತ್ತು ಆರನೆಯ ಪಾದಗಳ ಕೊನೆಯ ಅಕ್ಷರವನ್ನು ಗುರುವಾಗಿ ಗುರುತಿಸಿರಿ. ಈ ರೀತಿಯ ಲಕ್ಷಣವಿರುವ ರಚನೆಗಳನ್ನು ಭಾಮಿನಿ ಷಟ್ಪದಿ ಎಂದು ತಿಳಿಯಿರಿ.

  ಕರಿಗಳನು ಮುರಿದಿಡುವ ಸಿಂಹಕೆ
  ನರಿಗಳಿದಿರೇ ತಾನು ನಿನಗಂ
  ತರವೆ ಸಾಕಂತಿರಲಿ ಕಂಡವರೆಲ್ಲ ಕಡುನಗರೆ
  ಅರಿಭಯಂಕರ ಶತ್ರುಗಳ ಸಂ
  ಹರಿಸುವುದು ನೃಪನೀತಿ ನಿನಗಿದು
  ತರವೆ ಬಿಡುಪರಹಿಂಸೆ ದೋಷವಿದೆಂದುದಾ ಪಕ್ಷಿ

***



# 5

# ಮನವು ಹೂವಾಗಲಿ

ಮನಸು ಬೆಳೆದಂತೆಲ್ಲ ಹಸಿವು ಬೆಳೆಯುವುದಯ್ಯ
ತಣಿಸಲದನೊಗೆಯುವುದು ಬಗೆಬಗೆಯ ಯುಕ್ತಿ
ಮನುಜನೇಳಿಗೆಯದರಿಂ, ಆ ಮನಸಿನೇಳಿಗೆಗೆ
ಕೊನೆಯೆಲ್ಲಿ ಚಿಂತಿಸೆಲೊ – ಮಂಕುತಿಮ್ಮ ॥

**– ಡಿ.ವಿ.ಜಿ.**

*(ಮಂಕುತಿಮ್ಮನ ಕಗ್ಗದಿಂದ)*

- ಕವಿಯು ಮುಕ್ತಕದಲ್ಲಿ ಮನಸಿನ ಬಗ್ಗೆ ಏನು ಹೇಳಿದ್ದಾರೆ? ಅದರ ಕುರಿತಾಗಿ ತರಗತಿಯಲ್ಲಿ ಚರ್ಚಿಸಿ ನಿಮ್ಮ ಅಭಿಪ್ರಾಯವನ್ನು ಮಂಡಿಸಿರಿ.

## ಇನ್ನಿನಿಸು ನೀ ಮಹಾತ್ಮಾ ಬದುಕಬೇಕಿತ್ತು!

ಇನ್ನಿನಿಸು ನೀ ಮಹಾತ್ಮಾ ಬದುಕಬೇಕಿತ್ತು!
ಈಗ ಭಾರತಕತ್ಯಗತ್ಯವಿದೆ ನಿನ್ನ;
ಬಿರುಗಾಳಿಗೊಲೆವ ಹಡಗಂತಿಹುದದಾಸತ್ತು,
ನಿನ್ನ ಹೊರತಾರೊಯ್ಯೆ ರೇವಿನೊಳದನ್ನ? ॥೧॥

ಹಿಮನಗವೊ ನಿನ್ನಚಲ ವಿಮಲ ಭಗವದ್ಭಕ್ತಿ,
ಜಗವನಪ್ಪುವ ವಾರ್ಧಿಯೆನೆ ಜಗತ್ಪ್ರೀತಿ,
ನಿನ್ನ ಸೂರ್ಯಾತಪಕಭಿನ್ನಮಾತ್ಮಿಕ ಶಕ್ತಿ –
ಕಾದುದೈ ನಮ್ಮನೀವರಮೇಕ ರೀತಿ! ॥೨॥

ಸ್ವಾರ್ಥಪರರಾಗಿಹೆವು, ದೇವರಿಲ್ಲೆಮಗಿಂದು
ಸೋದರತೆ ಇಲ್ಲ ಮುಂದಿನದಿಲ್ಲ ಗೊಡವೆ;
ಧರ್ಮ ಬಾಹಿರರೆಮ್ಮನೆತ್ತಲಿನ್ನಾರೆಂದು
ತೋಚದೆ ಮಹಾತ್ಮ ನಿನಗಿಂತು ಮೊರೆಯಿಡುವೆ ॥೩॥

ಗಾಳಿ ಕಾಣದೆ ಬೀಸಿ ಉಸುರುಗೊಳಿಪಂತೆ,
ತಾರ ನವಜೀವನವ ನಮ್ಮನುಳಿಪಂತೆ!

**– ಮಂಜೇಶ್ವರ ಗೋವಿಂದ ಪೈ**



## ಗೋವಿಂದ ಪೈ

ಮಂಜೇಶ್ವರ ಗೋವಿಂದ ಪೈಯವರು ೧೮೮೩, ಮಾರ್ಚ್ ೨೩ ರಂದು ಜನಿಸಿದರು. ಇವರ ತಂದೆ ಸಾಹುಕಾರ್ ತಿಮ್ಮ ಪೈ. ತಾಯಿ ದೇವಕಿಯಮ್ಮ.

ಹುಟ್ಟು ಭಾಷಾಪ್ರೇಮಿಯಾಗಿದ್ದ ಪೈಯವರು ಫ್ರೆಂಚ್, ಜರ್ಮನ್, ಇಟಾಲಿಯನ್, ಗ್ರೀಕ್, ಇಂಗ್ಲಿಷ್, ಹಿಂದಿ, ಕನ್ನಡ, ಕೊಂಕಣಿ, ಮರಾಠಿ, ತಮಿಳು, ಮಲೆಯಾಳಂ, ಅರ್ಧಮಾಗಧಿ, ಬಂಗಾಳಿ, ಪ್ರಾಕೃತ, ಪಾಲಿ, ಪರ್ಷಿಯನ್, ತುಳು ಹಾಗೂ ಸಂಸ್ಕೃತಭಾಷೆಯನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದರು. ಬಹುಭಾಷಾ ಪರಿಣತರೂ, ಸಂಶೋಧಕರೂ ಇತಿಹಾಸಕಾರರೂ ಕವಿಗಳೂ ನಾಟಕಕಾರರೂ ಅನುವಾದಕರೂ ಆಗಿದ್ದ ಗೋವಿಂದ ಪೈಗಳ ಸಾಹಿತ್ಯ ಸೇವೆ ವೈಶಿಷ್ಟ್ಯಪೂರ್ಣವಾಗಿತ್ತು.

ಇವರು ಗಿಳಿವಿಂಡು, ಇಂಗಡಲು, ನಂದಾದೀಪ, ಹೃದಯರಂಗ ಎಂಬ ಕವನ ಸಂಕಲನಗಳನ್ನೂ ಗೊಲ್ಗೊಥಾ ಮತ್ತು ವೈಶಾಖಿ ಎಂಬ ಖಂಡಕಾವ್ಯಗಳನ್ನೂ ಚಿತ್ರಭಾನು, ಹೆಬ್ಬೆರಳು, ತಾಯಿ ಮತ್ತು ನೋ ನಾಟಕಗಳನ್ನೂ ರಚಿಸಿದ್ದಾರೆ.

ಮದ್ರಾಸು ಸರ್ಕಾರವು ೧೯೪೮ರಲ್ಲಿ ಇವರಿಗೆ 'ರಾಷ್ಟ್ರಕವಿ' ಪ್ರಶಸ್ತಿಯನ್ನು ನೀಡಿ ಅವರನ್ನು ಗೌರವಿಸಿದೆ. ಅವರು ೧೯೫೦ರಲ್ಲಿ ಮುಂಬಯಿಯಲ್ಲಿ ಜರಗಿದ ೩೪ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು.

ಗೋವಿಂದ ಪೈಗಳು ೧೯೬೩ರಲ್ಲಿ ತಮ್ಮ ೮೦ನೆಯ ವಯಸ್ಸಿನಲ್ಲಿ ವಿಧಿವಶರಾದರು.

ಈ ಕವನವನ್ನು ಮಂಜೇಶ್ವರ ಗೋವಿಂದ ಪೈಗಳ "ಇಂಗಡಲು" ಎಂಬ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

- 'ಇನ್ನಿನಿಸು ನೀ ಮಹಾತ್ಮಾ ಬದುಕಬೇಕಿತ್ತು' – ಕವನಕ್ಕೆ ಈ ಶೀರ್ಷಿಕೆ ಎಷ್ಟರ ಮಟ್ಟಿಗೆ ಒಪ್ಪುತ್ತದೆ? ನಿಮ್ಮ ಅಭಿಪ್ರಾಯವನ್ನು ಸಮರ್ಥಿಸಿ ಬರೆಯಿರಿ.
- ಕವನದ ಆಶಯವನ್ನು ಬರೆಯಿರಿ.
- ಪ್ರಾಸವು ಕವಿತೆಯ ಸೌಂದರ್ಯವನ್ನು ಹೆಚ್ಚಿಸುತ್ತದೆ. ಈ ಕವನದಲ್ಲಿ ಪ್ರಾಸವಿರುವ ಪದಗಳನ್ನು ಗುರುತಿಸಿ ಬರೆಯಿರಿ.

❒ ಅಲಂಕಾರವನ್ನು ಗುರುತಿಸಿರಿ.

ಹಿಮನಗವೊ ನಿನ್ನಚಲ ವಿಮಲ ಭಗವದ್ಭಕ್ತಿ
ಜಗವನಪ್ಪುವ ವಾರ್ಧಿಯೆನೆ ಜಗತ್ಪ್ರೀತಿ

ಈ ಪದ್ಯಭಾಗದಲ್ಲಿ ಗಾಂಧೀಜಿಯವರ ಭಗವದ್ಭಕ್ತಿಯನ್ನು ಹಿಮಾಲಯ ಪರ್ವತದಷ್ಟು ಸ್ಥಿರವಾದುದು ಎನ್ನಲಾಗಿದೆ. ಆದರೆ ಭಕ್ತಿ ಎಷ್ಟೇ ಗಾಢವಾಗಿದ್ದರೂ ಹಿಮಾಲಯದಷ್ಟು ಸ್ಥಿರವಾಗಿ ಇರುವುದು ಸಾಧ್ಯವಿಲ್ಲ. ಇಲ್ಲಿ ಗಾಂಧೀಜಿಯವರ ಭಗವದ್ಭಕ್ತಿಯನ್ನು ಹಿಮಾಲಯದಂತೆ ಅಚಲ ಎಂದು ಕವಿ ಉತ್ಪ್ರೇಕ್ಷಿಸಿ ಹೇಳಿದ್ದಾರೆ. ಇದೇ ರೀತಿ ಉತ್ಪ್ರೇಕ್ಷೆ ಅಲಂಕಾರವಿರುವ ಬೇರೆ ಕವನದ ಸಾಲುಗಳನ್ನು ಗುರುತಿಸಿ ಬರೆಯಿರಿ.

* * *



# ಭರತಮಾತೆ

(ಕಥಾ ಸಂದರ್ಭ : ಅಯೋಧ್ಯೆಯ ಮಹಾರಾಜನಾದ ದಶರಥನು ತನ್ನ ಹಿರಿಯ ಪುತ್ರನಾದ ಶ್ರೀರಾಮನಿಗೆ ಪಟ್ಟಾಭಿಷೇಕವನ್ನು ಮಾಡುವುದಾಗಿ ತೀರ್ಮಾನಿಸುತ್ತಾನೆ. ಇದನ್ನರಿತ ಕಿರಿಯರಾಣಿ ಕೈಕೆಯ ದಾಸಿಯಾದ ಮಂಥರೆಯು ರಾಣಿಯನ್ನು ಕಂಡು, ರಾಮ ರಾಜನಾದರೆ ನಿನಗೆ ಉಳಿಗಾಲವಿಲ್ಲವೆಂದೂ ನಿನ್ನ ಮಗ ಭರತನೇ ರಾಜನಾಗುವಂತೆ ಮಹಾರಾಜನನ್ನು ಒಪ್ಪಿಸಬೇಕೆಂದೂ ದುರ್ಬೋಧನೆಯನ್ನು ಮಾಡುತ್ತಾಳೆ. ದಾಸಿಯ ಮಾತಿಗೆ ಮರುಳಾದ ಕೈಕೆಯು ಹಿಂದೆ ದೇವಾಸುರ ಯುದ್ಧಸಂದರ್ಭದಲ್ಲಿ ತಾನು ಪತಿಯಿಂದ ಪಡೆದಿದ್ದ, ಆದರೆ ಕೇಳದೇ ಉಳಿದಿದ್ದ ಎರಡು ವರಗಳನ್ನು ಈಗ ಕೇಳಿ ತನ್ನ ಆಸೆಯನ್ನು ಈಡೇರಿಸಿಕೊಳ್ಳಲು ಬಯಸುತ್ತಾಳೆ. ಅದರಂತೆ ದಶರಥ ಮಹಾರಾಜನಲ್ಲಿ ಶ್ರೀರಾಮನನ್ನು ಹದಿನಾಲ್ಕು ವರುಷ ವನವಾಸಕ್ಕೆ ಕಳುಹಿಸುವಂತೆಯೂ ತನ್ನ ಮಗ ಭರತನಿಗೆ ಪಟ್ಟಾಭಿಷೇಕ ಮಾಡುವಂತೆಯೂ ವರವನ್ನು ಬೇಡುತ್ತಾಳೆ. ಇದನ್ನರಿತ ಶ್ರೀರಾಮನು ಪತ್ನಿ ಸೀತೆ ಮತ್ತು ಸಹೋದರ ಲಕ್ಷ್ಮಣ ಸಮೇತವಾಗಿ ಕಾಡಿಗೆ ತೆರಳುತ್ತಾನೆ.)

ಸತಿಯ ರೂಪದ ಮೋಹಜ್ವಾಲೆಯಲ್ಲಿ ಕುದಿದು, ಬೆಂದು, ಕ್ಷಣಗಳುರುಳಿದಂತೆಲ್ಲ ಪುತ್ರವಿರಹದಗ್ಧನಾದ ದಶರಥನ ಉನ್ಮಾದ ಭೀಷಣವಾಗಿ ಉಲ್ಬಣಿಸಿತು. ನಡುರಾತ್ರಿಯಲ್ಲಿ ಹಾಸುಗೆಯಿಂದೆದ್ದು, ಹತ್ತಿರ ಕಣ್ಮುಚ್ಚದೆ ಕಾವಲು ಕುಳಿತಿದ್ದ ಕೌಸಲ್ಯೆಯನ್ನು, ಕೈಕೆ ಬಾಯೆಂದು ಬಾಚಿ ತಬ್ಬಿಕೊಂಡು ಮುದ್ದಿಸುತ್ತ ನಗುವನು. ಇದ್ದಕ್ಕಿದ್ದ ಹಾಗೆ ತೊಲಗಾಚೆ ಎಂದು ತಳ್ಳುವನು. ಕೈಕೆಯನ್ನು ಕರೆ ಎಂದು ಅವಳನ್ನು ಬರಿಸಿ ತಟ್ಟೆಯನ್ನು ಬೀಸಿ ಅವಳ ಮುಖದ ಮೇಲೆ ಎಸೆಯುವನು. ರಾಮ ರಾಮ ರಾಮಾ ಎಂದು ಬಯಲನ್ನು ತಬ್ಬುವನು. ಅರುಣರವಿಯನ್ನು ಕಂಡು ಅದನ್ನು ನಂದಿಸುವಂತೆ ವಸಿಷ್ಠನಿಗೆ ಆಜ್ಞೆ ಮಾಡುವನು. ಸುಮಂತ್ರನನ್ನು ಕರೆಕರೆದು ಅವನು ಬರದಿರಲು, ಸುತ್ತುಮುತ್ತಣ ಜನರನ್ನು ಬಾಯಿಗೆ ಬಂದಂತೆ ಬಯ್ಯುವನು. ಒಮ್ಮೆ ಮಗನನ್ನು ಕಂಡಂತೆ ಕೈಚಾಚಿ ಕರೆಕರೆದು ಓಡೋಡಿ ಮುಗ್ಗುರಿಸಿ ಆಳೆತ್ತರದ ಹಳ್ಳಕ್ಕೆ ಧುಮುಕಿದನು. ಮೈ ಉಳುಕಿ, ಎಲುಬು ಮುರಿದು, ರಕ್ತ ಕೋಡಿವರಿಯಿತು. ಹತ್ತಿರವಿದ್ದ ಜನ ಗೋಳ್ಗರೆದು, ಮೆಲ್ಲನೆ ಎತ್ತಿ ತಂದು, ಮಣ್ಣೊರಸಿ ಮೈಗೆ ಎಣ್ಣೆ ಬಳಿದು, ಮದ್ದು ಹಚ್ಚಿ, ಮೃದು ತಲ್ಪದಲ್ಲಿ ಮಲಗಿಸಿದರು.

ರಾಮನನ್ನು ಬಿಟ್ಟು ಬಂದ ಸುಮಂತ್ರನು ದೊರೆಯ ಶೋಚನೀಯ ಸ್ಥಿತಿಯನ್ನು ಕಂಡು ಕಣ್ಣೀರಿಟ್ಟನು. ದೊರೆ ಅವನನ್ನು ಗುರುತಿಸಲಾರದೆ ಹೆಣಗಣ್ಣಿನಂತೆ ಮಿಳ್ಮಿಳನೆ ನೋಡುತ್ತಿದ್ದನು. ಸುಮಂತ್ರ ರಘುರಾಮನ ಸಂದೇಶವನ್ನು ಹೇಳಿದನು. ಕಲ್ಬೊಂಬೆಯಂತೆ ದೊರೆ ಕೇಳಿದನು. ಕೇಳುತ್ತ ಕೇಳುತ್ತ ಮಂಚದಿಂದ ನೆಲಕ್ಕುರುಳಿದನು. ಸ್ತ್ರೀಜಾಲ ಗೋಳಿಟ್ಟಿತು. ಆ ಆಕ್ರಂದನವನ್ನು ಕೇಳಿ ಆಬಾಲವೃದ್ಧರನ್ನೊಳಗೊಂಡ ಪಟ್ಟಣದ ಜನ ಬಂದು ರೋದಿಸತೊಡಗಿದರು. ಕೌಸಲ್ಯೆ ಸುಮಿತ್ರೆಯರು ದೊರೆಯನ್ನು ಮಂಚದ ಮೇಲೆ ಮಲಗಿಸಿ, ಶೈತ್ಯೋಪಚಾರ ಮಾಡಿದರು. ಎಚ್ಚೆತ್ತ ದೊರೆಯನ್ನು ವಸಿಷ್ಠ ವಾಮಾದಿಗಳು ಸಮಾಧಾನಗೊಳಿಸಲು ಪ್ರಯತ್ನಿಸಿದರು. ದೊರೆಯ ದುಃಖ ನೂರ್ಮಡಿಸಿತು; ಹುಚ್ಚು ಹೆಚ್ಚಿತು. ಬಳಿಯಿದ್ದವರನ್ನು ಬಡಿದಟ್ಟಿ, ಕೈಗೆ ಯಾರೂ ಸಿಗದಿರಲು, ತನ್ನ ಕಣ್ಣನ್ನು ತಾನೇ ಕಿತ್ತುಕೊಂಡನು. ರಕ್ತ ಸೋರುತ್ತಿದ್ದ ಆ ಕಣ್ಣನ್ನು ಕೈಯಲ್ಲಿ ಹಿಡಿದುಕೊಂಡು ಕೈಕೆಯನ್ನು ಕೂಗಿ, ಕನಲಿ



"ಇಗೋ ಕೋಸಲ ದೇಶ ನನ್ನ ಕೈಯಲ್ಲಿ ಕಂಗೊಳಿಸುತ್ತಿದೆ. ಹೇ ಪ್ರಿಯತಮಾಪಿಶಾಚಿನಿ, ನನ್ನ ರಾಮನನ್ನು ನನಗೆ ಕೊಡು. ಕಣ್ತುಂಬ ನೋಡಿ ಸಾಯುತ್ತೇನೆ. ಇಷ್ಟಕ್ಕೆಲ್ಲ ನಿನ್ನ ರೂಪ ಕಾರಣವಲ್ಲ, ನನ್ನ ಈ ಹಾಳ್ಗಣ್ಣುಗಳು. ನಿನ್ನ ಪಾಪದ ರೂಪ ಈಗೆಲ್ಲಿದೆ, ಹೇಳು? ಓ ಅಂಧತಪಸ್ವಿಯೆ, ಶಬ್ದವೇಧೀ ಧನುರ್ವಿದ್ಯೆಯ ಬಲದಿಂದ ನೀರು ಕುಡಿದ ಮೃಗವೆಂದು ತಿಳಿದು, ಕಾಣದೆ ನಿನ್ನ ಮಗನನ್ನು ಕೊಂದುದರಿಂದ ವಿಧಿ ನನ್ನನ್ನು ಇಂತಹ ಶಾಪಕ್ಕೆ ಗುರಿಮಾಡಿದೆ. ನೋಡಲ್ಲಿ! ನನ್ನ ಆತ್ಮಕ್ಕೆ ಶಾಂತಿ ಅವತರಿಸುತ್ತಿದೆ! ಏನು ದಿವ್ಯದರ್ಶನ, ಓ, ಬೆಳಕೆ, ಕಣ್ಣು ಹೋದಾಗ ನೀನು ಕಣ್ಣು ತೆರೆಯುತ್ತೀಯಲ್ಲವೇ? ಕುರುಡನ ಮಹಿಮೆ ಕುರುಡನಿಗೆ ಮಾತ್ರ ಗೋಚರ. ಓ ರಾಮ, ನೀನು ವನವಾಸವನ್ನಪೇಕ್ಷಿಸಿದುದು ಇದಕ್ಕೆಯೆ? ಅಂದು ಕ್ರತುಪುರುಷ ಇತ್ತ ಸಂದೇಶದ ಅರ್ಥ ಈಗ ಗೋಚರವಾಗುತ್ತಿದೆ. ನೀನು ನನ್ನ ಮಗನಾದುದಕ್ಕೆ, ಇದೋ ನಮಸ್ಕಾರ! ದೇವ, ನಾನು ಧನ್ಯ!" ಎನ್ನುತ್ತ ತಿರೆಗುರುಳಿದನು. ಮಂಥರೆ ದೊರೆಯ ಕಡೆಗೆ ಓಡಿದಳು. ಆ ವಿರೂಪೆಗೆ ಭೀತಿಯುಂಟೆ? ಅವಳು ಹತ್ತಿರ ಬರುವಷ್ಟರಲ್ಲಿ ಮೃತ್ಯು ಅವನನ್ನು ಅಪ್ಪಿಕೊಂಡಳು.

ಅತ್ತ ಆ ರಾತ್ರಿ ಕೇಕೆಯಪುರದ ಮನೆಯಲ್ಲಿ ಭರತದೇವನು ಕೆಟ್ಟ ಕನಸಾಗಲು ಹಾಸುಗೆಯಿಂದೆದ್ದು ಕುಳಿತು, ಹೊರಗೆ ನೋಡಿದನು. ನೋಡುತ್ತಿದ್ದಂತೆ ಪ್ರಕಾಶಮಾನವಾದ ನಕ್ಷತ್ರವೊಂದು ಗಗನಪಟದಲ್ಲಿ ಕೆಂಗೆಂಡದಂತೆ ಉರುಳುರುಳಿ ಮರೆಯಾಯಿತು. ಒಡನೆಯೇ ಶತ್ರುಘ್ನನನ್ನು ಎಬ್ಬಿಸಿ ತಾನು ಕಂಡ ಕನಸನ್ನು ವಿವರಿಸಿದನು. "ಎಲೈ ತಮ್ಮನೆ, ನನಗೊಂದು ರಕ್ಕಸ ಕನಸಾಯಿತು. ಅದನ್ನು ನೆನೆದು ಮೈ ನಡುಗುತ್ತಿದೆ, ನಾಲಗೆ ತೊದಲುತ್ತಿದೆ; ಬೆವರು ಉಕ್ಕುತ್ತಿದೆ. ಬುದ್ಧಿ ಮಂಕಾಗುತ್ತಿದೆ. ನಾನು ಕನಸಿನಲ್ಲಿ ಕಂಡ ನಾಡು ಯಾವುದೊ ತಿಳಿಯದು. ಕತ್ತಲು ಕವಿಯುತ್ತಿದೆ. ಆಕಾಶಕ್ಕೆದುರಾಗಿ ಹೆಬ್ಬೆಟ್ಟದ ತುದಿಯ ಬಂಡೆಯೊಂದು ಅಪಶಕುನದಂತೆ ನಿಂತಿದೆ. ನಾನೊಬ್ಬನೆ ಆ ಬೆಟ್ಟದ ಕಣಿವೆಯಲ್ಲಿ ನಡೆದೆನು. ನಿಡಿದು ಗೋಳ್ದನಿಯೊಂದು ನನ್ನ ಕಿವಿಯನ್ನು ಮೀಟಿತು. ನಾನು ನಡುನಡುಗಿ ನೋಡುತ್ತಿರಲು ಬೆಟ್ಟದ ತುದಿಬಂಡೆಯ ಮೇಲೆ ನೆರಳಿನಂತಿದ್ದ ವ್ಯಕ್ತಿಯೊಂದು ಕಣ್ಣಿಗೆ ಬಿತ್ತು. ಆ ವ್ಯಕ್ತಿಚಿತ್ರದಲ್ಲಿ ತಂದೆಯನ್ನು ಗುರುತಿಸಿದೆನು. ಅವನ ತಲೆ ಕೆದರಿತ್ತು. ಮೈ ಕೊಳೆಯಾಗಿತ್ತು. ಆ ತುದಿಯಿಂದ ಬುಡದ ಹೇಸಿಗೆಯ ಮಡುವಿಗೆ ತಲೆಕೆಳಗಾಗಿ ಧುಮುಕಿದನು. ನಾನು ದೂರದಿಂದ ನೋಡುತ್ತಿದ್ದೆನೆ ಹೊರತು ಸಹಾಯಮಾಡಲಾಗಲಿಲ್ಲ. ಕೈಯಿಂದ ಎಣ್ಣೆಯನ್ನು ಮೊಗೆಮೊಗೆದು ಕುಡಿಯುತ್ತಿದ್ದನು. ತಿಲಾನ್ನವನ್ನು ತಿನ್ನುತ್ತಿದ್ದನು. ಆಕಾಶದ ಚಂದ್ರ ನೆಲಕ್ಕೆ ಬಿದ್ದನು. ಕತ್ತಲೆ ಕವಿಯಿತು. ಭೂಮಿ ಪಾತಾಳಕ್ಕೆ ಬೀಳುವಂತಾಯಿತು. ಆಮೇಲೆ ತಂದೆ, ಕಪ್ಪುಬಟ್ಟೆಯನ್ನು ಹೊದ್ದು, ರಕ್ತವರ್ಣದ ಹೂಮಾಲೆಯನ್ನು ಧರಿಸಿ, ಕೆಂಪುಗಂಧವನ್ನು ಹಚ್ಚಿಕೊಂಡು ಹಿಂದುಮುಂದಾಗಿ ಕತ್ತೆಯನ್ನೇರಿ ದಕ್ಷಿಣಾಭಿಮುಖವಾಗಿ ಹೋಗುತ್ತಿದ್ದುದನ್ನು ಕಂಡೆನು. ಕರಿಮೊಗದ ರಾಕ್ಷಸ ಸ್ತ್ರೀಯೊಬ್ಬಳು ಅವನನ್ನು ಹಿಡಿದೆಳೆದು ಕಿಲಕಿಲನೆ ನಗುತ್ತಿದ್ದುದನ್ನು ಕಂಡು ಬೆದರಿದೆ. ಕೊನೆಗೆ ಆ ಸ್ವಪ್ನ ಒಡೆದೆದ್ದೆನು."

ಆ ಸ್ವಪ್ನ ಕಥೆಯನ್ನು ಕೇಳಿದ ತಮ್ಮನಿಗೆ ಗಂಟಲೊಣಗಿತು. ಸಂಕಟದ ಸೂಜಿಮೊನೆಯ ಮೇಲೆ ಇರುಳನ್ನು ಹೇಗೋ ಕಳೆದು, ಮಾವನಿಗೆ ಎದೆಯ ಕುದಿಯನ್ನು ತಿಳಿಸಿ ಯಾವ ಸಂತೈಕೆಗೂ ಒಪ್ಪದೆ, ಕುದುರೆಗಳನ್ನು ಏರಿ, ಪರಿವಾರವನ್ನು ಒಲ್ಲದೆ, ಇಬ್ಬರೂ ಅಯೋಧ್ಯಾಭಿಮುಖವಾಗಿ ಹೊರಟರು. ಅನೇಕ ನದಿಗಿರಿಗ್ರಾಮ ನಗರವನಗಳನ್ನು ಹಿಂದಿಕ್ಕಿ, ಏಳು ದಿನಗಳು ಅವಸರವಾಗಿ ಪಯಣಮಾಡಿ ಮನುನಗರಿಯನ್ನು ಸಮೀಪಿಸಿದರು. ಭರತನು ಶತ್ರುಘ್ನನನ್ನು ಕುರಿತು "ಸೋದರನೆ, ರವಿ ಮೂಡಿ ಮೇಲೆ ಬಂದಿದ್ದರೂ, ನಗರ ನಿದ್ದೆಯಲ್ಲಿರುವಂತೆ ಮೂಕವಾಗಿದೆ. ಜನರ



ಕೋಲಾಹಲವಾಗಲೀ ಮಂಗಳಗೀತ ವಾದ್ಯಗಳಾಗಲೀ ಕೇಳಿಬರುತ್ತಿಲ್ಲ. ಅಗರು ಗಂಧಗಳ ಕಂಪು ಇಲ್ಲವಾಗಿದೆ. ಉದ್ಯಾನತರುಗಳಲ್ಲಿ ಗಿಳಿಕೋಗಿಲೆಗಳ ಗಾನವಿಲ್ಲ. ಹೂಗಳು ಬಾಡಿವೆ. ಈ ಮಹಾನಗರಿ ಪಾಳ್ಮನೆಯಂತೆ ಕಾಣುತ್ತಿದೆ. ವೈಜಯಂತಿ ಹೆಬ್ಬಾಗಿಲಿನ ಈಚೆಗಿರುವ ಪಿತೃದೇವಮಂದಿರದಲ್ಲಿಯೂ ಶೂನ್ಯ ಸುರಿಯುತ್ತಿದೆ. ಪೂಜ್ಯ ಪಿತೃದೇವತೆಗಳಿಗೆ ನಮಸ್ಕರಿಸಿ ಪುರವನ್ನು ಪ್ರವೇಶಿಸೋಣ” ಎಂದು ಹೇಳಿ ಮಂದಿರವನ್ನು ತಮ್ಮನೊಡನೆ ಹೊಕ್ಕನು.

ಅದನ್ನು ಹೊಕ್ಕದೆ ತಡ, ಇಬ್ಬರೂ ವಿಸ್ಮಯ ಬಡಿದವರಂತೆ ನಿಂತರು. ದಿವಂಗತ ರವಿಕುಲನೃಪರ ಪ್ರತಿಮೆಗಳ ಸಾಲಿನ ಕೊನೆಯಲ್ಲಿ ದಶರಥನ ಪ್ರತಿಮೆಯನ್ನು ಕಂಡು ಒಬ್ಬರೊಬ್ಬರ ಮುಖವನ್ನು ನೋಡಿಕೊಂಡರು. ಭೀತಿಸಂಶಯಗಳಿಂದ ಒಬ್ಬರೂ ಮಾತಾಡಲಿಲ್ಲ. ಹೃದಯದ ಹೆದರಿಕೆಯನ್ನು ತೋಡಿಕೊಳ್ಳಲು ಇಬ್ಬರೂ ಹೆದರಿದರು. ನಿಡುಸುಯ್ಯುತ್ತ, ಕುದುರೆಗಳನ್ನೇರಿ ವಾಯುವೇಗದಲ್ಲಿ ಪುರವನ್ನು ಹೊಕ್ಕರು. ಬೀದಿಗಳನ್ನು ಗುಡಿಸಿರಲಿಲ್ಲ. ಹೆಣ ಬಾಯಿಬಿಟ್ಟಂತೆ ಮನೆಯ ಬಾಗಿಲು ತೆರೆದಿವೆ. ರಂಗೋಲಿಗಳ ಚಿಹ್ನೆಯೇ ಇಲ್ಲ; ತೋರಣದ ಸುಳಿವೇ ಇಲ್ಲ; ಗುಡಿಗಳಲ್ಲಿ ಗಂಟೆಗಳ ದನಿಯಿಲ್ಲ; ಜನರ ಚಲನೆಯಂತೂ ಕಾಣಿಸಲಿಲ್ಲ. ಹಾಳು ಹಂಪೆಯನ್ನು ಹೊಕ್ಕ ಕನ್ನಡಿಗರಂತಾಯಿತು, ಭರತ ಶತ್ರುಘ್ನರ ಅವಸ್ಥೆ. ರಾಜಬೀದಿಗಳಲ್ಲಿ ಓಡೋಡಿ, ಮಂಕು ಕವಿದಿದ್ದ ತಂದೆಯ ಅರಮನೆಯನ್ನು ಪ್ರವೇಶಿಸಿ, ಭೀಕರೋದ್ವಿಗ್ನರಾದರು.

ತಂದೆಯನ್ನು ಕಾಣದೆ ತಲ್ಲಣಿಸಿ, ಶತ್ರುಘ್ನನನ್ನು ಅವನ ತಾಯಿಯ ಅರಮನೆಗೆ ಕಳುಹಿಸಿ, ಭರತ ತನ್ನ ತಾಯಿಯ ರತ್ನಮಂದಿರಕ್ಕೆ ನಡೆದನು. ನಿರ್ಜನೆಯೂ, ನಿರಾಭರಣೆಯೂ, ರವವಿಹೀನೆಯೂ ದುಃಖದಗ್ಧಳೂ ಆದ ತಾಯಿಯ ಕಾಲಮೇಲೆ ದಿಂಡುರುಳಿ “ಅಯ್ಯ ಎಲ್ಲಿ, ಅರಮನೆ ಏಕೆ ಕಂದಿದೆ, ನಿನ್ನ ಸ್ಥಿತಿಯೂ ಅಪಶಕುನವನ್ನು ಸಾರುತ್ತಿದೆ ಏನು ಕಾರಣ” ಎಂದು ನಡುಕು ದನಿಯಲ್ಲಿ ಕೇಳಿದನು. ಕೈಕೆ ಮಗನ ಉಬ್ಬೆಗವನ್ನು ಕಂಡು ಮಾತಾಡಲಾರದೆ ಅತ್ತಳು, ಅಪ್ಪಿದಳು, ಮುಂಡಾಡಿದಳು. ಹುಚ್ಚಿಯಂತೆ ದಿಟ್ಟಿಸಿದಳು; ಕೊನೆಗೆ ಗದ್ಗದಕಂಠೆಯಾಗಿ, “ಮಗನೆ, ಈ ಪಾಪಿಯನ್ನು ಮನ್ನಿಸಲಾರೆಯಾ?” ಎಂದು ಬೇಡಿದಳು. “ತಾಯಿ, ಆತ್ಮನಿಂದೆ ಬೇಡ. ನಿನ್ನ ಅಪ್ಪುಗೆಯನ್ನು ಪಡೆಯುವ ಪಾಪಿಯೂ ಎಂಥ ಪುಣ್ಯಶಾಲಿಯಿರಬೇಕು?” ಎಂದ ಭರತನ ಮಾತಿಗೆ ತಾಯಿ ಉತ್ತರವಿತ್ತಳು : “ದಿವಂಗತ ದಶರಥಕುಮಾರ, ವನವಾಸಿ ರಘುರಾಮ ಹೃದಯ ಚಂದ್ರಚಕೋರ, ಹೆತ್ತವಳೆಂದು ಈ ನೀಚಳನ್ನು ಹೊಗಳಬೇಡ. ವರವನ್ನು ಬೇಡಿ ಕೇಡನ್ನು ತಂದೆ, ತಂದೆಗೆ ಅಪಮೃತ್ಯುವನ್ನು ತಂದೆ, ಕೌಸಲ್ಯೆಯ ಕಂದನನ್ನು ಕಾಡಿಗಟ್ಟಿದೆ, ನನ್ನ ಕಂದನ ಕುತ್ತಿಗೆಗೆ ತಿರೆಯ ಹೊರೆಯನ್ನು ಕಟ್ಟಿದೆ. ಪುತ್ರಾಭ್ಯುದಯ ಮೋಹದ ಅಂಧಕಾರದಲ್ಲಿ ಮುಂದನ್ನು ಅರಿಯದಾದೆ. ಮಗನೆ, ನಾನು ಹಾಳಾದೆ : ನಿನ್ನ ಬಾಳಿಗೆ ವಿಷವಾದೆ, ರವಿಕುಲಕ್ಕೆ ದಾವಾಗ್ನಿಯಾದೆ, ಲೋಕನಿಂದೆಗೆ ಗುರಿಯಾದೆ.”

“ಸಾತ್ವಿಕ ಸರಳ ಜೀವಿಯಾದ ಮಗನೆ, ನನ್ನ ಹೃದಯವನ್ನು ನೀನು ಅರಿಯಲಾರೆ. ತಾಯಿಯೊಲ್ಮೆಗೆ ಮಗನ ಮೇಲ್ಮೆಗಿಂತ ಬೇರೆ ಬಯಕೆಯುಂಟೆ? ನೀನಿಲ್ಲದಾಗ ಕೌಸಲ್ಯೆಯ ಮಗನಿಗೆ ಪಟ್ಟ ಕಟ್ಟುವ ಸನ್ನಾಹವನ್ನು ಅರಿತು ನಿನ್ನನ್ನು ಸಾಕಿದ ದಾಸಿ ನನಗೆ ತಿಳಿಸಿದಳು. ನೀನು ಬರುವ ತನಕ ಹಿಂದೆ ರಾಜೇಂದ್ರ ಕೊಟ್ಟಿದ್ದ ವರಗಳ ನೆರವಿನಿಂದ, ಅಭಿಷೇಕವನ್ನು ತಡೆಯುವಂತೆ ಅವಳೇ ನನ್ನನ್ನು ಹುರಿದುಂಬಿಸಿದಳು. ದುರ್ವಿಧಿಯ ಲೀಲೆಯಿಂದ ಆ ಪ್ರಯತ್ನ ಇಂಥ ದುಷ್ಪರಿಣಾಮಕ್ಕೆ ಕಾರಣವಾಯಿತು. ಕಂದ, ನಿನ್ನ ಹೃದಯ ನನಗೆ ಗೊತ್ತು. ಆದರೆ ನನ್ನ ಕರ್ತವ್ಯವನ್ನು



ಹೇಗೆ ಮರೆಯಲಿ? ಈಗ ಅತ್ತು ಪ್ರಯೋಜನವೇನು? ಮುದಿದೊರೆ ರಾಮ ಲಕ್ಷ್ಮಣರನ್ನು ಮಾತ್ರ ಜಪಿಸುತ್ತ, ಕೈಕೆಯ ಮಗನನ್ನು ಮರೆತು, ಕೊನೆಗೆ ಎಲ್ಲರೂ ಎಲ್ಲಿಗೆ ಹೋಗುತ್ತಾರೆಯೋ ಅಲ್ಲಿಗೆ ಹೋದನು. ರಾಮ ಪಿತೃವಾಕ್ಯ ಪರಿಪಾಲನಾರ್ಥವಾಗಿ ಕಾಡಿಗೆ ಹೋದನು. ರಾಜ್ಯ ಅರಾಜಕವಾಗಿದೆ. ಈಗ ಕೋಸಲವನ್ನು ಪಾಲಿಸಲು ನೀನಲ್ಲದೆ ಮತ್ತಾರಿದ್ದಾರೆ?"

ಪಿತೃಮರಣವಾರ್ತೆಯೂ ಅಗ್ರಜವನವಾಸ ಪ್ರಾಪ್ತಿವೃತ್ತಾಂತವೂ ಕಿವಿದೆರೆಯನ್ನು ಸೋಕಿದುದೆ ತಡ, ಮುಂಗಾರ ಬಿರುಮಳೆಗೆ ಬೇರುದುರಿ ತಲೆ ತಿರುಗಿ ತೂಗಿ ತೊನೆಯುತ್ತಿದ್ದ ಬೆಟ್ಟ ನೆತ್ತಿಯ ಹೆಮ್ಮರಕ್ಕೆ ಸಿಡಿಲು ಬಡಿದಂತಾಗಿ, ಭರತನ ಕರುಣಮಯ ದೇಹ ತಾಯಿಯ ಪಾದಮೂಲದಲ್ಲುರುಳಿತು. ಕೈಕೆ ಗಡಗಡನೆ ನಡುಗುತ್ತ ಅವನನ್ನು ಎತ್ತಿ ಕುಳ್ಳಿರಿಸಿಕೊಂಡು ಸಂಕಟದ ಕಥೆಯನ್ನು ವಿಸ್ತರಿಸಿದಳು.

ಕೈಕೆಯ ಮಾತುಗಳನ್ನು ಕೇಳುತ್ತಲೇ ಭರತ ತಾಯಿಯಿಂದ ದೂರ ಸರಿದು "ಸಾಕು ತಾಯಿ, ಸಾಕು, ಹಾಲೂಡಿದೆದೆಯಲ್ಲಿಯೆ ವಿಷವನ್ನು ಊಡಿ ಕೊಲ್ಲಬೇಡ. ಹೆತ್ತಾಗಲೇ ಕತ್ತು ಹಿಸುಕದೆ ಇಲ್ಲಿಯ ತನಕ ಏಕೆ ಸಾಕಿದೆ? ಹೇ ಭರತಮಾತೆ, ಮಗನನ್ನು ಪಡೆದೂ ನಿನಗೆ ಬಂಜೆತನ ಒದಗಿತೆ? ರಾಮ ನಿನಗೆ ಅನ್ಯನೇ? ಅವನನ್ನು ಕಾಡಿಗೆ ಅಟ್ಟಿ ನಿನ್ನ ವೈಧವ್ಯವನ್ನೂ ಈ ನಾಡಿಗೆ ಮತ್ತು ನಮಗೆ ಅನಾಥತ್ವವನ್ನೂ ತಂದೆಯಲ್ಲವೆ? ಅಣ್ಣನನ್ನುಳಿದ ಬದುಕು ಸಾವಿಗೆಣೆ; ಈ ನೆಲದ ಸಿರಿ ಪಾಳು ಮಣ್ಣು ಅಳಿದ ತಂದೆಯನ್ನು ಬದುಕಿಸಲಾಗದು. ಅಣ್ಣನನ್ನಾದರೂ ಹಿಂದಕ್ಕೆ ಕರೆತರುತ್ತೇನೆ. ಅವನು ಬರಲೊಪ್ಪದಿದ್ದರೆ ತಪೋಜೀವನವನ್ನಾಶ್ರಯಿಸಿ, ರಾಮಸೇವೆಯಲ್ಲಿ ನಿರತನಾಗುವೆನು. ತಾಯಿಯ ಶ್ರೇಯೋಭಿವೃದ್ಧಿ ಮಗನಿಗೆ ಸೇರಿದುದಾದ್ದರಿಂದ, ನಿನ್ನ ಕೀಳ್ಗೆಯ್ಮೆಯನ್ನು ಈ ರೀತಿಯಲ್ಲಾದರೂ ಕೊನೆಗೊಳಿಸುತ್ತೇನೆ" ಎಂದು ತಿರಸ್ಕಾರದಿಂದ ನುಡಿದು ಜಿಗುಪ್ಸೆಯಿಂದ ಹೊರಟನು. ಒಡನೆಯೆ ಕೈಕೆ ಮಗನ ಕಾಲು ಹಿಡಿದು, ಬಾಚಿ ತಬ್ಬಿಕೊಂಡು, ಮೊಳಕಾಲೂರಿ, ದೈನ್ಯದಿಂದ, ಬಿನ್ನಹಕ್ಕೆ ಬಾಯಿ ಬಂದಂತೆ ಗೋಳಾಡಿದಳು; "ಹಾ ಮಗನೆ, ಕೆಟ್ಟೆ, ನಾನು ಕೆಟ್ಟೆ. ನನ್ನನ್ನು ಕೈಬಿಡಬೇಡ. ಜಗತ್ತೆ ನನ್ನನ್ನು ತೊರೆದಿದೆ. ಶೂನ್ಯತೆಗೆ ನೂಕುವ ಬದಲು ನರಕಕ್ಕಾದರೂ ನೂಕು. ಹೊಲೆಗೆ ಹೊಲೆ ಮಡಿಯಲ್ಲ; ಕೊಲೆಗೆ ಕೊಲೆ ಪರಿಹಾರವಲ್ಲ. ನೋವು ನೋವಿಗೆ ಕೊನೆಯಲ್ಲ. ನಾನು ಮಾಡಿದುದನ್ನೆ ನೀನು ಮಾಡುವೆಯಾ? ತಪ್ಪಿನಿಂದ ತಪ್ಪನ್ನು ಒಪ್ಪು ಮಾಡುವಿಯಾ? ಕಂದ, ಕಾಲು ಹಿಡಿದು ಬೇಡಿಕೊಳ್ಳುತ್ತೇನೆ, ನಿನ್ನೊಡನೆ ನನ್ನನ್ನೂ ಮಂಗಳದ ಮನೆಗೆ ಕರೆದುಕೊಂಡು ಹೋಗು. ಸದ್ದಿಲ್ಲದೆ ನಿನ್ನ ನೆಳಲಂತೆ ನಡೆದುಕೊಳ್ಳುತ್ತೇನೆ. ಇನ್ನು ಕೈಕೆಗೆ ಬಾಯಿಲ್ಲಯ್ಯ. ಕಲ್ಲಾದ ಅಹಲ್ಯೆಯನ್ನು ನುಡಿಸಿದ ರಾಮಪಾದದ ಸೋಂಕಿಗೂ ನನ್ನ ಕಲ್ತನ ಅಳಿಯದು. ನನ್ನನ್ನು ಕೈ ಬಿಡದೆ ಕಾಪಾಡು." ತನ್ನಡಿಗೆ ಮುಡಿ ಚಾಚಿ ಕೆಡೆದ ಜನನಿಯ ದೈನ್ಯಾವಸ್ಥೆಯನ್ನು ಕಂಡು ಭರತ ಕರಗಿ ಕಂಬನಿಗರೆದನು. ತಾಯಿಯನ್ನಪ್ಪಿಕೊಂಡು "ತಾಯಿ, ಹೆದರಬೇಡ, ಎದೆಯ ಕುದಿಬೇನೆಯಿಂದ ಬಗೆಯ ಮೈಲಿಗೆ ಮಡಿಯಾಗುತ್ತದೆ. ಪಾಪ ಪಶ್ಚಾತ್ತಾಪದಿಂದ ಸೀದುಹೋಗುತ್ತದೆ. ರಾಮನ ತಮ್ಮನ ತಾಯಿಗೆ ಕೇಡು ಒದಗುವುದೆ? ಸೃಷ್ಟಿ ರಚನೆಯಲ್ಲಿ ಪಾಪಿಗೂ ಉದ್ಧಾರ ಸಾಧ್ಯ. ಉಗುರ ಮೊನೆಯ ಹಿಂಸೆಗೆ ತಂತಿ ಇಂಪಾದ ದನಿ ಈಯುವಂತೆ ವೈಣಿಕ ವಿಧಿಯ ಕೈಗೆ ನೀನುಗುರಾಗಲಾಗಿ ರಾಮಾಯಣ ಬೃಹದ್ ಗೀತೆ ಹೊರ ಹೊಮ್ಮಿ ಧರೆಗಿಂಪಾಯಿತು. ಭಗವದ್ ಸಾಗರವಾಯಿತು. ತಾಯಿ, ಕೊರಗಿ ಕಂಗೆಡಬೇಡ" ಎಂದು ಸಂತೈಸಿದನು.

– *ದೇ.ಜ.ಗೌ.*



## ದೇ.ಜ.ಗೌ.

ದೇವೇಗೌಡ ಜವರೇ ಗೌಡರು ೧೯೧೮ ಜುಲೈ ೬ ರಂದು ಚನ್ನಪಟ್ಟಣ ತಾಲೂಕಿನಲ್ಲಿ ರೈತರಾಗಿದ್ದ ದೇವೇಗೌಡ ಮತ್ತು ಚನ್ನಮ್ಮ ದಂಪತಿಗಳ ಮಗನಾಗಿ ಜನಿಸಿದರು. ಕನ್ನಡ ಸಾಹಿತ್ಯದ ಮೇರು ಕವಿಗಳಲ್ಲಿ ಕುವೆಂಪು ಒಬ್ಬರು. ಅವರು ಬರೆದ ಆಧುನಿಕ ಮಹಾಕಾವ್ಯ 'ಶ್ರೀ ರಾಮಾಯಣದರ್ಶನಂ'. ಇದಕ್ಕೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ. ಈ ಕೃತಿಯ ಗದ್ಯಾನುವಾದವಾದ"ಶ್ರೀರಾಮಾಯಣದರ್ಶನಂ – ವಚನ ಚಂದ್ರಿಕೆ"ಯೆಂಬ ಕೃತಿಯಿಂದ ಪ್ರಸ್ತುತ ಪಾಠಭಾಗವನ್ನು ಆಯ್ದುಕೊಳ್ಳಲಾಗಿದೆ.

ಬೆಂಗಳೂರು, ಮೈಸೂರುಗಳಲ್ಲಿ ಹಲವಾರು ವರ್ಷಗಳ ಕಾಲ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ದೇ.ಜ.ಗೌ ೧೯೬೯ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದರು.

ಇವರು ಷಡಕ್ಷರ ದೇವ, ನಂಜುಂಡಕವಿ, ಸಾಹಿತ್ಯ ಮಾರ್ಗ – ಈ ಮೂರು ವಿಮರ್ಶಾಗ್ರಂಥಗಳನ್ನೂ ಮೋತಿಲಾಲ್ ನೆಹರು, ರಾಷ್ಟ್ರಕವಿ ಕುವೆಂಪು, ತೀ.ನಂ. ಶ್ರೀ, ಮೊದಲಾದ ಜೀವನ ಚರಿತ್ರೆಗಳನ್ನೂ ರಚಿಸಿದ್ದಾರೆ. ಧರ್ಮಾಮೃತ, ಜೈಮಿನಿ ಭಾರತ ಸಂಗ್ರಹ, ನಳಚರಿತ್ರೆ, ಕಬ್ಬಿಗರಕಾವ, ರಾಮಧಾನ್ಯ ಚರಿತೆ ಮುಂತಾದ ಕೃತಿಗಳನ್ನು ಸಂಪಾದಿಸಿದ್ದಾರೆ. ಇವಲ್ಲದೆ ಸಮಾಜ ಶಿಕ್ಷಣ ಕುರಿತಾದ ಲೇಖನಗಳನ್ನೂ ಪ್ರವಾಸಕಥನಗಳನ್ನೂ ರಚಿಸಿದ್ದಾರೆ.

ಇವರು ೧೯೬೩ ರಲ್ಲಿ ಶ್ರೀ ಸಿದ್ಧಗಂಗಾ ಕ್ಷೇತ್ರದಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಗೋಷ್ಠಿಯ ಉದ್ಘಾಟಕರೂ ೧೯೭೦ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ನಡೆದ ೪೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. ಮೇಲಿನ ಪಾಠಭಾಗವನ್ನು ಅವರ 'ಶ್ರೀರಾಮಾಯಣ ದರ್ಶನ ವಚನಚಂದ್ರಿಕೆ' ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ. ಈ ಕೃತಿಯು ಕುವೆಂಪುರವರ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದ ಗದ್ಯಾನುವಾದವಾಗಿದೆ.

- ❒ ಪಾಠಭಾಗದಿಂದ ಆಯ್ದು ಕೆಳಗೆ ಕೊಡಲಾದ ಕಥಾ ಸಂದರ್ಭಗಳನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
  - ದಶರಥನ ಅಂತಿಮಕ್ಷಣ
  - ಭರತನಿಗೆ ಬಿದ್ದ ಕೆಟ್ಟಕನಸು
  - ಅಯೋಧ್ಯೆಯನ್ನು ಪ್ರವೇಶಿಸಿದಾಗ ಭರತ – ಶತ್ರುಘ್ನರು ಕಂಡ ದೃಶ್ಯ.
  - ಭರತನ ಉದ್ವೇಗವನ್ನು ಕಂಡ ಕೈಕೆಯ ಸ್ಥಿತಿ.
- ❒ ನೀವು ಕಾಣುವ ಕನಸುಗಳಿಗೂ ವಾಸ್ತವ ಬದುಕಿಗೂ ಸಂಬಂಧವಿದೆಯೇ? ತರಗತಿಯಲ್ಲಿ ಚರ್ಚಿಸಿ ನಿಮ್ಮ ಅನಿಸಿಕೆಯನ್ನು ಬರೆಯಿರಿ.
- ❒ ಈ ಪಾಠಭಾಗದಲ್ಲಿ ನಿಮ್ಮ ಮನಸ್ಸಿಗೆ ನಾಟಿದ ಭಾಗ ಯಾವುದು? ಯಾಕೆ?
- ❒ ಭರತನು ತಾಯಿಯನ್ನು ನಿಂದಿಸಿದುದರ ಕುರಿತು ನಿಮ್ಮ ಅಭಿಪ್ರಾಯವೇನು? ಈ ಬಗೆಗೆ ವಿಮರ್ಶಾ ಟಿಪ್ಪಣಿಯೊಂದನ್ನು ತಯಾರಿಸಿರಿ.



❒ ಸ್ವಾರಸ್ಯವನ್ನು ತಿಳಿಸಿರಿ.

- ಹಾಲೂಡಿದೆದೆಯಲ್ಲಿ ವಿಷವೂಡಿದೆ.
- ಉಗುರಮೊನೆ ಹಿಂಸೆಗೆ ತಂತಿ ಇಂಪಾದ ದನಿ ಈಯುವಂತೆ.

❒ ಪಾಠಭಾಗದಲ್ಲಿ ಬರುವ ಪಾತ್ರಗಳ ಸಂಭಾಷಣೆಯನ್ನು ಬರೆದು ಏಕಪಾತ್ರಾಭಿನಯವಾಗಿ ತರಗತಿಯಲ್ಲಿ ಪ್ರದರ್ಶಿಸಿರಿ.

❒ 'ಭಾವನಾತ್ಮಕ ಸಮತೋಲನ ಇಲ್ಲದ ವ್ಯಕ್ತಿಗಳು ಸಮಾಜದಲ್ಲಿ ಸಮಸ್ಯೆಯನ್ನು ಸೃಷ್ಟಿಸುವರು' – ಈ ಹೇಳಿಕೆಯನ್ನು ಸಮಾಜದಲ್ಲಿ ನಡೆಯುತ್ತಿರುವ ಪ್ರಚಲಿತ ಸಮಸ್ಯೆಗಳ ಆಧಾರದಲ್ಲಿ ಚರ್ಚಿಸಿ ಲೇಖನವೊಂದನ್ನು ಬರೆಯಿರಿ.

❒ ಶೈತ್ಯೋಪಚಾರ – ಈ ಪದವನ್ನು 'ಶೈತ್ಯ+ಉಪಚಾರ' ಎಂಬುದಾಗಿ ವಿಂಗಡಿಸಬಹುದು. ಭೀಕರೋದ್ವಿಗ್ನ – ಈ ಪದವನ್ನು ವಿಂಗಡಿಸಿ ಬರೆಯಿರಿ. ಮೇಲಿನ ಎರಡೂ ಪದಗಳಲ್ಲಾದ ಬದಲಾವಣೆಗಳನ್ನು ಗುರುತಿಸಿರಿ. ಈ ರೀತಿಯಲ್ಲಿ ಸಂಧಿಯಾಗುವ ಪದಗಳನ್ನು ಗುಣಸಂಧಿ ಎನ್ನುವರು. ಇಂತಹ ಇನ್ನಷ್ಟು ಪದಗಳನ್ನು ಸಂಗ್ರಹಿಸಿ ಬರೆಯಿರಿ.

* * *

# ಬಭ್ರುವಾಹನನ ಮೂಡಿಗೆಯೊಳಂಬಾಗಿರ್ದಳು

(ಕಥಾಸಂದರ್ಭ : ಪಾಂಡವಯಜ್ಞಾಶ್ವವು ಸಂಚರಿಸುತ್ತಾ ನೀಲಧ್ವಜನ ಆಳ್ವಿಕೆಯಲ್ಲಿರುವ ಮಾಹಿಷ್ಮತೀ ಪಟ್ಟಣವನ್ನು ಪ್ರವೇಶಿಸುವುದು. ದೂತರಿಂದ ವಿಚಾರವನ್ನರಿತ ರಾಜನು ಕುದುರೆಯ ಬೆಂಗಾವಲಿಗಾಗಿ ಬಂದಿರುವ ಅರ್ಜುನನನ್ನು ಆದರಿಸಿ, ಕಪ್ಪಕಾಣಿಕೆಯನ್ನಿತ್ತು ಕಳುಹಿಸಲು ತೀರ್ಮಾನಿಸುವನು. ಆದರೆ ಆತನ ಪತ್ನಿಯಾದ ಜ್ವಾಲೆಯು ತನ್ನಳಿಯನಾದ ಅಗ್ನಿದೇವನ ಬಲವಿದೆ ಎಂಬ ಗರ್ವದಿಂದ ಯಜ್ಞಾಶ್ವವನ್ನು ಬಂಧಿಸಿ ಯುದ್ಧವನ್ನು ಸಾರುವಂತೆ ಒತ್ತಾಯಿಸುವಳು. ಯುದ್ಧದಲ್ಲಿ ನೀಲಧ್ವಜನು ತನ್ನ ಮಕ್ಕಳು, ಸಹೋದರರು, ಸೇನೆ ಎಲ್ಲವನ್ನೂ ಕಳೆದುಕೊಂಡು ಸೋಲನ್ನನುಭವಿಸುವನು. ಇದರಿಂದ ನೊಂದ ಆತನು ತನ್ನ ಸೋಲಿಗೆ ಪತ್ನಿಯಾದ ಜ್ವಾಲೆಯೇ ಕಾರಣಳೆಂದು ಅವಳನ್ನು ದೂಷಿಸುತ್ತಾನೆ.)

ವಾಜಿ ನಡೆದುದು ಬಳಿಕ ತೆಂಕಮೊಗಮಾಗಿ ಸೇ ।
ನಾ ಜಾಲಸಹಿತ ನೀಲಧ್ವಜಂ ಪೊರಮಟ್ಟ ।
ನಾ ಜನಪನಂ ಕೂಡಿಕೊಂಡು ಮುಂದಕೆ ಸವ್ಯಸಾಚಿ ತೆರಳಿದನಿತ್ತಲು ॥
ತೇಜಮಿಲ್ಲದೆ ಮನೆಯೊಳಿಂ ಪೆಣ್ಣೊಡಲ್ವೆಳಸು ।
ವೀ ಜೀವಮೇತಕೆನಗೆನುತೆ ನಿಜ ವಲ್ಲಭನ ।
ರಾಜ ಗೃಹಮಂ ಬಿಟ್ಟು ಪೋದಳಾ ಜ್ವಾಲೆಯುನ್ಮುಖನೆಂಬ ತಮ್ಮನೆಡೆಗೆ ॥೧॥



ಉನ್ಮುಖಂ ಕಂಡಿದಿರ್ಗೊಂಡಗ್ರಜಾತೆಯಂ ।
ಸನ್ಮಾನಿಸಿದನೇಕೆ ಬಂದೆಯೆನೆ ಫಲುಗುಣಂ ।
ಮನ್ಮನೋರಥಮೆಲ್ಲಮಂ ಕಿಡಿಸಿ ಮಕ್ಕಳಂ ಕೊಂದು ಪತಿಯಂ ಗೆಲ್ದನು ॥
ತನ್ಮರಣಕೊಂದು ದಾಯವನೆಸಗದಿರಲೆನ್ನ ।
ಜನ್ಮವೇತಕೆ ನಿನ್ನ ದೆಸೆಯಿಂದೆ ನರನ ವಿಲ
ಸನ್ಮೌಳಿ ಮಸ್ತಕವನರಿಸದಿರೆನೆಂದೊಡಾ ಜ್ವಾಲೆಗವನಿಂತೆಂದನು ॥೨॥

ವಾಯಕರ್ಜುನನ ತಲೆ ಬೀಳ್ದಪುದೆ ಕೃಷ್ಣನ ಸ ।
ಹಾಯಮಿರಲೆಲೆ ಮರುಳೆ ಹರಿಯ ಹಗೆಗೊಂಡು ಕೆಡು ।
ವಾಯಸಂ ತನಗೇಕೆ ರಾಘವಂ ಮಾಡಿದುಪಹತಿಯಂ ದಶಾನನಂಗೆ ॥
ದಾಯಮಂ ಪೇಳ್ದವನ ವಂಶಮಂ ಸವರಿಸಿದ ।
ಮಾಯಕಾತಿಯವೊಲೆನ್ನಾಲಯಕೆ ಬಂದೆನಗ ।
ಪಾಯಮಂ ತಾರದಿಲ್ಲಿಂದ ಪೋಗೆಂದವಳನುನ್ಮುಖಂ ಕೋಪಿಸಿದನು ॥೩॥

ಜ್ವಾಲೆ ಬಳಿಕನುಜನಂ ಬೈದು ಕೋಪದೊಳಾತ ।
ನಾಲಯದೊಳಿರದೆ ಪೊರಮಟ್ಟು ನಡೆತರೆ ಮುಂದೆ ।
ಲೀಲೆ ಮಿಗೆ ನಲಿನಲಿದು ಸುಳಿದಿಳಿದು ಬೆಳೆದಳಿದು ತಳೆದುಳಿದೆ ಪೊಳೆದು ಸೆಳೆದು ॥
ಮೇಲೆಮೇಲೊದಗುವ ಘನಪ್ರವಾಹದ ಸುಕ ।
ಲ್ಲೋಲ ಮಾಲಾಕುಲದ ಬುದ್ಬುದದ ಜಲ ಜಂತು ।
ಜಾಲದ ಲಳಿಯ ಲುಳಿಯ ಲಹರಿಗಳ ವಿಸ್ತರದ ವರ ಗಂಗೆಯಂ ಕಂಡಳು ॥೪॥

ಕೂರ್ಮಗಡಿಯಾಗಿರ್ಪ ಗುಣ್ಪಿಂದೆ ತನ್ನೆಡೆಯೊ ।
ಳಾರ್ಮುಳುಗಲವರಿಂದ್ರರಹರೆಂಬ ಪೆಂಪಿಂದೆ ।
ಘೂರ್ಮಿಸುವ ಗಂಗಾಪ್ರವಾಹಮಂ ಕಂಡಳಾ ಜ್ವಾಲೆ ಬಳಿಕಲ್ಲಿ ನಿಂದು ॥
ಧಾರ್ಮಿಕರಿವರೊಳುಂಟೆ ತನ್ನನೆಂತಾದೊಡಂ ।
ನೀರ್ಮುಟ್ಟದಂತೊಯ್ಯನಾ ತಡಿಗೆ ದಾಂಟಿಸುವ ।
ಕೂರ್ಮೆಯುಳ್ಳವರೆಂದೊಡಲ್ಲಿರ್ದ ನಾವಿಕರ್ ಕೇಳ್ದವಳ್ಗಿಂತೆಂದರು ॥೫॥

ನಾವಿಕರು ಗಂಗಾನದಿಯ ನೀರಿನ ಸ್ಪರ್ಶದ ಮಹತ್ವವನ್ನು ತಿಳಿಸುತ್ತಾರೆ. ಜ್ವಾಲೆಯು ಆಗ ಗಂಗೆಯು ನಿಜವಾಗಿ ಪಾಪಿ, ಅವಳು ನನ್ನ ಮುಂದೆ ಬಂದು ನಿಂತರೆ ಆಗ ವಿಷಯವನ್ನು ತಿಳಿಸುವೆನು ಎನ್ನುತ್ತಾಳೆ. ಆಗ ಗಂಗೆಯು ಪ್ರತ್ಯಕ್ಷಳಾಗಿ ಜ್ವಾಲೆಯಲ್ಲಿ ಹೇಳುತ್ತಾಳೆ.

ದೋಷ ಹರೆ ತಾನೆಂದು ವೇದ ಶಾಸ್ತ್ರಂಗಳುರೆ ।
ಘೋಷಿಪುವು ಮುಟ್ಟಲಾಗದು ತನ್ನನೆಂದು ನೀಂ ।
ದೂಷಿಸುವ ಕಾರಣಮದಾವುದೌ ಜ್ವಾಲೆ ಪೇಳೆಂದು ಜಾಹ್ನವಿ ನುಡಿಯಲು ॥
ದೂಷಣದ ಮಾತನಾಡುವಳಲ್ಲ ಲೋಕದ ಸು ।
ಭಾಷಿತವನುಸಿರಬೇಹುದು ಪುತ್ರರಿಲ್ಲದಿಹ ।
ಯೋಷೆಯಂಗಸ್ಪರ್ಶನಂ ಪಾಪಮೆಂಬರದಕಾಗಿ ಬೆದರಿಗೆನೆಂದಳು ॥೬॥

ಎಂದೊಡೆ ಕೆರಳ್ದು ಭಾಗೀರಥಿ ಸಮಸ್ತ ನೃಪ ।
ವೃಂದದೊಳ್ ತನ್ನ ಮಗನುದ್ದಾಮನಾಗಿರ್ಪ ।
ನೆಂದುಮಳಿವವನಲ್ಲವಂ ಯದೃಚ್ಛಾಮರಣಿ ಭಾಗವತ ಮಸ್ತಕಮಣಿ ॥
ವೃಂದಾರಕೋಪಮಂಸತ್ಯಸಂಧಂ ಭೀಷ್ಮ ।
ನೆಂದು ಮೂಲೋಕದೊಳ್ ಪ್ರಖ್ಯಾತನಾಗಿಹಂ ।
ಮಂದಮತಿ ನೀನೆನಗೆ ಸುತರಿಲ್ಲೆನಲ್ ಬಹುದೆ ಪೋಗೆಂದೊಡಿಂತೆಂದಳು ॥೭॥

ಉಂಟು ನೀನಾಡಿದಿನಿತೆಲ್ಲಮುಂ ತಥ್ಯವಹು ।
ದೆಂಟಕೊಂದುಳಿದುದಂ ಬಲ್ಲೆನಾನದರಿಂದೆ ।
ವೆಂಟಣಿಸಿತಿನ್ನೆಗಂ ನಿನ್ನೇಳ್ಗೆ ಮೂಜಗದೊಳೀಗ ದಾಯಾದ್ಯರೊಳಗೆ ॥
ಗಂಟಕ್ಕಿದಾಹವದೊಳರ್ಜುನಂ ತವ ಸೂನು ।
ವಂ ಟಕ್ಕಿನಿಂ ಕೊಂದನಲ್ಲದಿರ್ದೊಡೆ ಮತ್ತೆ ।
ಕಂಟಕಮದೆತ್ತಣದು ಕೇಳ್ ತವಾಭ್ಯುದಯಕೆಂದಾಜ್ವಾಲೆ ಕಾಳ್ಗೆಡೆದಳು ॥೮॥

ಪಚ್ಚೆಲೆಯ ತರುವನೊಣಗಿದ ಪೊರೆಯ ಮರದ ಕಾ ।
ಳ್ಕಿಚ್ಚು ಕೊಂಡುರಿವವೊಲ್ ಜ್ವಾಲೆಯ ಮುಳಿಸಿನೊಡನೆ ।
ಪೆಚ್ಚಿತಮರಾಪಗೆಯ ಕೋಪಮೆತ್ತಿದ ಹಸ್ತದಿಂ ಭೀಷ್ಮನಂ ಧುರದೊಳು ॥
ಎಚ್ಚು ಕೊಂದರ್ಜುನನ ತಲೆಯನಾತನ ಸುತಂ ।
ಕೊಚ್ಚಿ ಕೆಡಹಲಿ ತಿಂಗಳಾರಕಾಹವದೊಳೆಂ ।
ದುಚ್ಚರಿಸಿ ಶಾಪಮಂ ಕೊಟ್ಟಡಗಿದಳ್ ಜಲದ ಮಧ್ಯದೊಳ್ ದಿವಿಜ ತಟನಿ ॥೯॥

ನಾರಿಯರ ಚಲಮೆಂತುಟೋ ಕೇಳ್ ಮಹೀಶ ಭಾ ।
ಗೀರಥಿಗೆ ಕೋಪಮಂ ಬರಿಸಿ ಕೊಡಿಸಿದಳತಿಕ ।
ಠೋರತರ ಶಾಪಮಂ ಜ್ವಾಲೆ ಬಳಿಕದು ಸಾಲದಾ ನರನ ತಲೆಯನರಿವ ॥
ಕೂರಲಗಿನಸ್ತ್ರವಾದಪೆನೆಂದು ಸುರನದಿಯ ।
ತೀರದೊಳ್ ವಹ್ನಿ ಪ್ರವೇಶಮಂ ಮಾಡಿ ಜಂ ।
ಭಾರಿ ತನಯನ ಸೂನು ಬಭ್ರುವಾಹನನ ಮೂಡಿಗೆಯೊಳಂಬಾಗಿರ್ದಳು ॥೧೦॥

– **ಲಕ್ಷ್ಮೀಶ**

**ಲಕ್ಷ್ಮೀಶ**

ಈ ಪದ್ಯಭಾಗವನ್ನು ಕವಿ ಲಕ್ಷ್ಮೀಶನ ಜೈಮಿನಿ ಭಾರತದಿಂದ ಆಯ್ದುಕೊಳ್ಳಲಾಗಿದೆ. ಲಕ್ಷ್ಮೀಶನು ಈಗಿನ ಚಿಕ್ಕಮಗಳೂರು ಜಿಲ್ಲೆಯ ದೇವನೂರಿನವನು. ಈತನ ಕಾಲ ಸುಮಾರು ೧೬ನೇ ಶತಮಾನ. 'ಕರ್ಣಾಟ ಕವಿ ಚೂತವನ ಚೈತ್ರ' ಎಂಬುದು ಈತನ ಬಿರುದು. ಸಾಹಿತ್ಯ ಪ್ರೇಮಿಗಳು ಈತನನ್ನು 'ನಾದಲೋಲ' ಎಂದೂ ಕರೆದಿದ್ದಾರೆ. ಸಂಸ್ಕೃತದಲ್ಲಿ ಜೈಮಿನಿ ಮುನಿಯು ಬರೆದ ಮಹಾಭಾರತದಲ್ಲಿರುವ ಪಾಂಡವಾಶ್ವಮೇಧದ ಕಥೆಯನ್ನು ಆಧರಿಸಿ ಈತನು ಕನ್ನಡದಲ್ಲಿ ಬರೆದ ಕೃತಿ ಜೈಮಿನಿ ಭಾರತವಾಗಿ ಪ್ರಸಿದ್ಧಿಯನ್ನು ಪಡೆದಿದೆ. ಇದು ವಾರ್ಧಕ ಷಟ್ಪದಿಯಲ್ಲಿದೆ.



- ❒ ಪದ್ಯಭಾಗದ ಪದಗಳನ್ನು ಅರ್ಥಪೂರ್ಣವಾಗಿ ವಿಂಗಡಿಸಿ ಓದಿರಿ.
  - ಪೆಣ್ಣೊಡಲ್ವೆಳಸುವೀ – ಪೆಣ್ಣ + ಒಡಲು + ಎಳಸುವ + ಈ
  - ಜೀವಮೇತಕೆನಗೆನುತೆ – ಜೀವಂ + ಏತಕೆ + ಎನಗೆ + ಎನುತೆ
  - ಜ್ವಾಲೆಯುನ್ಮುಖನೆಂಬ – ಜ್ವಾಲೆ + ಉನ್ಮುಖನ + ಎಂಬ
  - ತೇಜಮಿಲ್ಲದೆ ಮನೆಯೊಳಿಂ – .....................
- ❒ ಈ ಕೆಳಗಿನ ಆಶಯಗಳು ಅರ್ಥವಾಗಿ ಬರುವ ಪದ್ಯದ ಸಾಲುಗಳನ್ನು ಗುರುತಿಸಿ ಹೇಳಿರಿ.
  - ಜ್ವಾಲೆಯು ಪತಿಗೃಹವನ್ನು ಬಿಟ್ಟು ತೆರಳಿದಳು.
  - ಉನ್ಮುಖನು ಸಹೋದರಿಯನ್ನು ಇದಿರ್ಗೊಂಡು ಸನ್ಮಾನಿಸಿದನು.
  - ಈ ನದಿಯ ನೀರು ನನಗೆ ಸೋಂಕದಂತೆ ಆ ದಡಕ್ಕೆ ದಾಟಿಸುವ ಧರ್ಮಾತ್ಮರಾದ ನಾವಿಕರಿಲ್ಲಿರುವರೇ?
  - ನಾನು ಪಾಪಕಳೆಯುವವಳೆಂದು ವೇದಶಾಸ್ತ್ರಗಳು ಸಾರಿಹೇಳುತ್ತವೆ.
  - ಅರ್ಜುನನ ತಲೆಯನ್ನು ತುಂಡರಿಸುವ ಹರಿತವಾದ ಅಸ್ತ್ರವಾಗುವೆನು.
- ❒ ಕಾವ್ಯಭಾಗದಲ್ಲಿ ಹಿಂದುಮುಂದಾಗಿರುವ ಪದಗಳನ್ನು ಅರ್ಥಕ್ಕೆ ಹೊಂದುವಂತೆ ವ್ಯವಸ್ಥಿತವಾಗಿ ಜೋಡಿಸುವುದನ್ನು ಅನ್ವಯಾನುಸಾರ ಎನ್ನುತ್ತಾರೆ.

  ಉದಾ : ವಾಜಿನಡೆದುದು ..... ತಮ್ಮನೆಡೆಗೆ ॥

ಈ ಪದ್ಯವನ್ನು ವಾಜಿ ತೆಂಕಣಮೊಗವಾಗಿ ನಡೆದುದು. ನೀಲಧ್ವಜಂ ಸೇನಾಬಲ ಸಹಿತ ಪೊರಮಟ್ಟನು. ಸವ್ಯಸಾಚಿ ಆ ಜನಪನಂ ಕೂಡಿಕೊಂಡು ಮುಂದಕೆ ತೆರಳಿದನು. ಇತ್ತಲು ಆ ಜ್ವಾಲೆಯು ಇಂತೇಜಮಿಲ್ಲದೆ ಮನೆಯೊಳು ಪೆಣ್ಣೊಡಲ್ ಎಳಸುವ ಈ ಜೀವಂ ಏತಕೆ ಎನುತ ನಿಜವಲ್ಲಭನ ರಾಜಗೃಹಮಂ ಬಿಟ್ಟು ಉನ್ಮುಖನೆಂಬ ತಮ್ಮನೆಡೆಗೆ ಪೋದಳು.

ಈ ರೀತಿಯಾಗಿ ಅರ್ಥಕ್ಕೆ ಭಂಗ ಬಾರದಂತೆ ಓದಬಹುದು. ನೀವೂ ನಿಮಗಿಷ್ಟವಾದ ಒಂದು ಪದ್ಯವನ್ನು ಆಯ್ದುಕೊಂಡು ಅನ್ವಯಾನುಸಾರವಾಗಿ ಬರೆಯಿರಿ.

- ❒ ಪದ್ಯಭಾಗದಲ್ಲಿ ಬಂದಿರುವ ಗಂಗೆ ಮತ್ತು ಜ್ವಾಲೆಯರ ಸಂಭಾಷಣೆಯನ್ನು ಹೊಸಗನ್ನಡದಲ್ಲಿ ಬರೆಯಿರಿ.
- ❒ ಲಕ್ಷ್ಮೀಶನ ಜೈಮಿನಿ ಭಾರತವು ಹಲವು ಉಪಕತೆಗಳ ಹಂದರ. ಈ ಪದ್ಯಭಾಗದಲ್ಲಿಯೂ ಒಂದು ಉಪಕತೆಯನ್ನು ಉಲ್ಲೇಖಿಸಲಾಗಿದೆ. ಅದನ್ನು ಗುರುತಿಸಿ ಪರಾಮರ್ಶನ ಗ್ರಂಥಗಳ ಸಹಾಯದಿಂದ ಆ ಕಥೆಯನ್ನು ಓದಿ ತಿಳಿದುಕೊಳ್ಳಿರಿ.
- ❒ ಈ ಪದ್ಯಭಾಗಕ್ಕೆ ಸೂಕ್ತವಾದ ಇನ್ನೊಂದು ಶೀರ್ಷಿಕೆಯನ್ನು ನೀಡಿರಿ.
- ❒ ವೈಯಕ್ತಿಕ ಸೇಡಿನ ಪರಿಣಾಮವಾಗಿ ಸಮಾಜದಲ್ಲಿ ಅನೇಕ ಘಟನೆಗಳು ನಡೆಯುತ್ತವೆ. ಹಾಗಾಗದಿರಲು ನಾವೇನು ಮಾಡಬೇಕು ಎಂಬುದನ್ನು ಚರ್ಚಿಸಿ ಟಿಪ್ಪಣಿಯನ್ನು ತಯಾರಿಸಿರಿ.
- ❒ ಪಚ್ಚೆಲೆಯ ತರುವನೊಣಗಿದ ಪೊರೆಯಮರದ ಕಾಳ್ಗಿಚ್ಚು ಕೊಂಡುರಿವವೊಲ್ –

  ಇಲ್ಲಿ ಜ್ವಾಲೆಯ ಸಿಟ್ಟಿನೊಂದಿಗೆ ಗಂಗಾಮಾತೆಯ ಸಿಟ್ಟು ಸೇರಿಕೊಂಡುದು ಕಾಡಿಗೆ ಬೆಂಕಿಬಿದ್ದು ಉರಿಯುವಾಗ ಒಣಗಿದ ಮರಗಳ ಜೊತೆಗೆ ಸಮೀಪದಲ್ಲಿರುವ ಹಸುರೆಲೆಗಳಿರುವ ಮರಗಳು ಸುಡುವಂತೆ ಆಯಿತು ಎಂದು ಕವಿ ವರ್ಣಿಸುತ್ತಾನೆ. ಪದ್ಯಭಾಗದಲ್ಲಿ ಬಂದಿರುವ ಈ ರೀತಿಯ ವರ್ಣನೆಯ ಭಾಗವನ್ನು ಗುರುತಿಸಿ ಬರೆಯಿರಿ.
- ❒ ಪ್ರಸ್ತಾರ ಹಾಕಿ ಛಂದಸ್ಸನ್ನು ಗುರುತಿಸುವ –

  ಪಠ್ಯಭಾಗದಲ್ಲಿರುವ ಒಂದು ಪದ್ಯವನ್ನು ಆಯ್ದು ಪ್ರಸ್ತಾರವನ್ನು ಹಾಕಿ ಐದೈದು ಮಾತ್ರೆಗಳ ಗಣಗಳಾಗಿ ವಿಂಗಡಿಸಿ ಬರೆಯಿರಿ. ಮೂರು ಮತ್ತು ಆರನೆಯ ಪಾದಗಳ ಕೊನೆಯ ಅಕ್ಷರವನ್ನು ಗುರುವಾಗಿ ಗುರುತಿಸಿರಿ. ಈ ರೀತಿಯ ಲಕ್ಷಣವಿರುವ ರಚನೆಗಳನ್ನು ವಾರ್ಧಕ ಷಟ್ಪದಿ ಎಂದು ತಿಳಿಯಿರಿ.

***



# 6

# ಬಾಳ ಸಂಜೆಗೆ ಬೇಕು ಊರುಗೋಲು

# ಬಿದ್ದಿಯಬೇ ಮುದುಕಿ

ಬಿದ್ದಿಯಬೇ ಮುದುಕಿ
ಬಿದ್ದೀಯಬೇ.

ನೀ ದಿನ ಹೋದಾಕಿ
ಇರು ಭಾಳ ಜೋಕಿ
ಬಿದ್ದೀಯಬೇ ಮುದುಕಿ ಬಿದ್ದೀಯಬೇ.



ಸದ್ಯಕಿದು ಹುಲುಗೂರು ಸಂತಿ
ಗದ್ದಲದೊಳಗ್ಯಾಕ ನಿಂತಿ?
ಬಿದ್ದು ಇಲ್ಲಿ ಒದ್ದಾಡಿದರ
ಎದ್ದು ಹ್ಯಾಂಗ ಹಿಂದಕ ಬರತಿ?
ಬುದ್ಧಿಗೇಡಿ ಮುದುಕಿ ನೀನು ಬಿದ್ದೀಯಬೇ.

ಬುಟ್ಟಿಯಲ್ಲಿ ಪತ್ತಲ ಇಟ್ಟಿ
ಅದನು ಉಟ್ಟ ಹೊತ್ತೊಳು ಜೋಕಿ;
ಕೆಟ್ಟಗಂಟಿ ಚೌಡೇರು ಬಂದು
ಉಟ್ಟುದನ್ನೆ ಕದ್ದಾರ ಜೋಕಿ!
ಬುದ್ಧಿಗೇಡಿ ಮುದುಕಿ ನೀನು ಬಿದ್ದೀಯಬೇ.

ಶಿಶುನಾಳಾಧೀಶನ ಮುಂದೆ
ಕೊಸರಿ ಕೊಸರಿ ಹೋಗಬ್ಯಾಡ,
ಹಸನವಿಲ್ಲ ಹರಯ ಸಂದ
ಪಿಸುರು ಪಿಚ್ಚುಗಣ್ಣಿನ ಮುದುಕಿ
ಬುದ್ಧಿಗೇಡಿ ಮುದುಕಿ ನೀನು ಬಿದ್ದೀಯಬೇ.

***– ಸಂತ ಶಿಶುನಾಳ ಶರೀಫ***

- ❒ ಕವನದಲ್ಲಿ ಮುದುಕಿಯ ಸ್ಥಿತಿಯನ್ನು ಹೇಗೆ ಚಿತ್ರಿಸಲಾಗಿದೆ? ನಿಮ್ಮ ಅನಿಸಿಕೆಗಳನ್ನು ಹೇಳಿರಿ.
- ❒ ರಾಗವಾಗಿ ಹಾಡಿರಿ.



# ಮುದುಪಂಗೆ ಕಟ್ಟಿದ ವೀರಪಟ್ಟಂ

(ಕಥಾ ಸಂದರ್ಭ : ಕೃಷ್ಣ ಸಂಧಾನವು ವಿಫಲವಾಗಿ ಪಾಂಡವರಿಗೆ ತಮ್ಮ ರಾಜ್ಯ ಮರಳಿ ಪಡೆಯಲು ಯುದ್ಧವೊಂದೇ ಅನಿವಾರ್ಯವಾಗುತ್ತದೆ. ಪಾಂಡವರ ಸೈನ್ಯವು ಯುದ್ಧ ಭೂಮಿಯಾದ ಕುರುಕ್ಷೇತ್ರದಲ್ಲಿ ಬೀಡುಬಿಟ್ಟಿರುವುದನ್ನು ಅರಿತ ಸುಯೋಧನನು ವಯೋವೃದ್ಧರೂ ಜ್ಞಾನವೃದ್ಧರೂ ಆದ ಭೀಷ್ಮರಿಗೆ ತನ್ನ ಸೇನೆಯ ವೀರಪಟ್ಟವನ್ನು ಕಟ್ಟುತ್ತಾನೆ. ಇದನ್ನು ಸಹಿಸದ ಕರ್ಣನು ಭೀಷ್ಮರನ್ನು ವಯೋವೃದ್ಧರೆಂದು, ಕೈಲಾಗದವರೆಂದು ಆಕ್ಷೇಪಿಸುತ್ತಾನೆ. ಆ ಸನ್ನಿವೇಶದಲ್ಲಿ ಕರ್ಣ, ದ್ರೋಣ ಹಾಗೂ ಭೀಷ್ಮರ ನಡುವೆ ನಡೆದ ಸಂವಾದವು ಈ ಕಾವ್ಯಭಾಗದಲ್ಲಿ ನಿರೂಪಿತವಾಗಿದೆ.)

ವ।। ಪರಶುರಾಮನನಂಜಿಸಿದ ವೀರಂಗೆ ವೀರಪಟ್ಟಮಂ ಕಟ್ಟಿ ಪಗೆವರನೆನ್ನ ಮಂಚದ ಕಾಲೊಳ್ ಕಟ್ಟಿದೆನೆಂದು ಪೊಟ್ಟಳಿಸುವ ಸುಯೋಧನನ ನುಡಿಯನವಕರ್ಣಿಸಿ ಕರ್ಣನಿಂತೆಂದಂ –

ಚಂ।। ಭಗವತಿಯೇ¥ುವೇ≥ತೆರದಿಂ ಕಥೆಯಾಯ್ತಿವರೇ¥ು ನೀನಿದಂ।  
ಬಗೆದಿವರಿನ್ನುಮಾಂತಿ¥pವರೆಂದು ವಿಮೋಹಿಸಿ ವೀರಪಟ್ಟಮಂ।।  
ಬಗೆಯದೆ ಕಟ್ಟಿದೈ ಗುರುಗಳಂ ಕುಲವೃದ್ಧರನಾಜಿಗುಯ್ದು ಕೆ।  
ಮ್ಮಗೆ ಪಗೆವಾಡಿಯೊಳ್ ನಗಿಸಿಕೊಂಡೊಡೆ ಬಂದಪುದೇಂ ಸುಯೋಧನಾ ।।೧।।

ಕಂ।। ಕಟ್ಟಿದ ಪಟ್ಟಮೆ ಸರವಿಗೆ।  
ನೆಟ್ಟನೆ ದೊರೆ ಪಿಡಿದ ಬಿಲ್ಲೆ ದಂಟಿಂಗೆಣೆ ಕ।।  
ಣ್ಗೆಟ್ಟ ಮುದುಪಂಗೆ ಪಗೆವರ।  
ನಿಟ್ಟೆಲ್ವಂ ಮು¥pವೊಡೆನಗೆ ಪಟ್ಟಂಗಟ್ಟಾ ।।೨।।

ವ।। ಎಂಬುದುಮಾ ನುಡಿಗೆ ಸಿಡಿಲ್ದು ಕುಂಭಸಂಭವನಿಂತೆಂದಂ –

ಕಂ।। ಸಿಂಗದ ಮುಪ್ಪುಂನೆಗ≥p।  
ಗಾಂಗೇಯರ ಮುಪ್ಪುಮಿ≥pಕೆವಡೆಗುಮೆ ವನಮಾ।।  
ತಂಗಂಗಳಿನಸುಹೃಚ್ಚತು।  
ರಂಗ ಬಲಂಗಳಿನದೆಂತುಮಂಗಾಧಿಪತೀ ।। ೩ ।।

ವ।। ಎಂದು ನುಡಿದ ಗುರುವಿನ ಕರ್ಣಕಠೋರ ವಚನಂಗಳ್ಗೆ ಕರ್ಣಂ ಕಿನಿಸಿ –

ಕಂ।। ಗಂಗಾಸುತಂ ಪೃಥಾಸುತ।  
ರಂ ಗೆಲ್ದೊಡೆ ತಪಕೆ ಪೋಪೆನವರ್ಗಳ ಕೆಯ್ಯೊಳ್।।  
ಗಾಂಗೇಯನ≥pದೊಡಹಿತರ।  
ನಾಂ ಗೆಲೆ ತಳ್ತಿ¥pವೆನನ್ನೆಗಂ ಬಿಲ್ವಿಡಿಯೆಂ ।।೪।।



ವ॥ ಎಂದು ಕರ್ಣಂ ಪ್ರತಿಜ್ಞೆಗೆಯ್ವುದುಂ ಸಿಂಧುತನೂಜನಿಂತೆಂದಂ –

ಚಂ॥ ಕಲಿತನದುರ್ಕು ಜವ್ವನದ ಸೊರ್ಕು ನಿಜೇಶನ ನಚ್ಚು ಮಿಕ್ಕ ತೋ।
ಳ್ವಲದ ಪೊಡರ್ಪು ಕರ್ಣ ನಿನಗುಳ್ಳನಿತೇನೆನಗುಂಟೆ ಭಾರತಂ॥
ಕಲಹಮಿದಿರ್ಚುವಂ ಹರಿಗನಪ್ಪೊಡೆ ಮೊಕ್ಕಳಮೇಕೆ ನೀಂ ಪಳಂ।
ಚಲೆದಪೆಯಣ್ಣ ಸೂ≥ಡೆಯಲಪ್ಪುದು ಕಾಣ ಮಹಾಜಿರಂಗದೊಳ್ ॥೫॥

ಕಂ॥ ಮುದುಪರ ಬಿಲ್ಬಲ್ಮೆಯುಮಿ¥p
ವದಟುಂ ಬಗೆವಾಗಳಣ್ಣನೆಂದಂತುಟೆ ತ॥
ಪ್ಪದು ಕರಮೆ ತುಚ್ಛಮಕ್ಕುಂ।
ಕದನದೊಳಿನ್ನೆನ್ನ ನುಡಿದ ನುಡಿಯಂ ಕೇಳಿಂ ॥೬॥

ಮ॥ ಪಿಡಿಯೆಂ ಚಕ್ರಮನೆಂಬ ಚಕ್ರಿಯನಿಳಾಚಕ್ರಂ ಭಯಂಗೊಳ್ವಿನಂ।
ಪಿಡಿಯಿಪ್ಪೆಂ ಕರಚಕ್ರಮಂ ನರರಥಂ ತೂಳ್ದಾ ಕುರುಕ್ಷೇತ್ರದಿಂ॥
ಪಡುವೆಣ್ಗಾವುದ ಪೋಗೆ ಪೋಗಡಿಸುವೆಂ ನಿಚ್ಚಂ ಧರಾಧೀಶರಂ।
ಪಡಲಿಟ್ಟಂತಿರೆ ಮಾ≥Wವ್ಪನೋವದೆ ಪಯಿಂಛಾಸಿರ್ವರಂ ಯುದ್ಧದೊಳ್ ॥೭॥

ವ॥ ಎಂದು ಮಹಾ ಪ್ರತಿಜ್ಞಾರೂಢನಾದಂ

– *ಪಂಪ*

**ಪಂಪ**

ಪಂಪನು ಕನ್ನಡದ ಆದಿಕವಿ. ಈತನ ತಂದೆ ಭೀಮಪ್ಪಯ್ಯ; ತಾಯಿ ಅಬ್ಬಣಬ್ಬೆ. ಪಂಪನು ಹುಟ್ಟಿದ್ದು ಕ್ರಿ.ಶ. ೯೦೨ರಲ್ಲಿ. ವೈದಿಕ ಮನೆತನದಲ್ಲಿ ಜನಿಸಿದ ಭೀಮಪ್ಪಯ್ಯನು ಜೈನಮತವನ್ನು ಸ್ವೀಕರಿಸಿದನು. ಪಂಪನು ಚಾಲುಕ್ಯ ದೊರೆ ಅರಿಕೇಸರಿಯ ಆಶ್ರಯದಲ್ಲಿದ್ದನು. ಕವಿತಾಗುಣಾರ್ಣವ, ಸರಸ್ವತೀ ಮಣಿಹಾರ; ಸಂಸಾರ ಸಾರೋದಯ ಎಂಬಿವು ಈತನ ಬಿರುದುಗಳು. ಪಂಪನು ಬರೆದ ಕಾವ್ಯಗಳು ಎರಡು. ೧. ಆದಿಪುರಾಣ, ೨. ವಿಕ್ರಮಾರ್ಜುನ ವಿಜಯ. ಮಹಾಭಾರತದ ಕಥೆ ವಸ್ತುವಾಗಿರುವ ವಿಕ್ರಮಾರ್ಜುನ ವಿಜಯವು 'ಪಂಪ ಭಾರತ' ವೆಂದೇ ಪ್ರಸಿದ್ಧವಾಗಿದೆ. ಇದರಲ್ಲಿ ಆಶ್ರಯದಾತನಾದ ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಲಾಗಿದೆ. ಪಂಪನಿಗಿಂತ ಹಿಂದೆ ಹುಟ್ಟಿಕೊಂಡ ಯಾವುದೊಂದು ಕಾವ್ಯವೂ ಪೂರ್ತಿಯಾಗಿ ದೊರೆಯದೆ ಹೋದುದರಿಂದ ಪಂಪನು 'ಆದಿಕವಿ' ಎಂಬ ಕೀರ್ತಿಗೆ ಪಾತ್ರನಾಗಿದ್ದಾನೆ. ಈ ಕಾವ್ಯಭಾಗವನ್ನು ಪಂಪನು ರಚಿಸಿದ 'ವಿಕ್ರಮಾರ್ಜುನ ವಿಜಯಂ' ಎಂಬ ಚಂಪೂಕಾವ್ಯದಿಂದ ಆರಿಸಲಾಗಿದೆ.

❒ ಈ ಪದ್ಯಭಾಗದಲ್ಲಿ ಬಂದಿರುವ ಪದಗಳನ್ನು ಅರ್ಥಕೆಡದಂತೆ ವಿಂಗಡಿಸಿ ಬರೆಯಿರಿ.

ಉದಾಹರಣೆ:

- ಪರಶುರಾಮನನ್ + ಅಂಜಿಸಿದ
- ಪಗೆವರನ್ + ಎನ್ನ
- ನುಡಿಯನ್ + ಅವಕರ್ಣಿಸಿ



❐ ಪದಕೋಶದ ಸಹಾಯದಿಂದ ಹಳೆಗನ್ನಡ ರೂಪಕ್ಕೆ ಹೊಸಗನ್ನಡ ರೂಪವನ್ನು ನೀಡಿರಿ.

| ಹಳೆಗನ್ನಡ ರೂಪ | ಹೊಸಗನ್ನಡ ರೂಪ |
|---|---|
| ಪಗೆವರನೆನ್ನ ಮಂಚದ ಕಾಲೊಳ್ ಕಟ್ಟಿದೆನ್ | ಹಗೆಗಳನ್ನು ನನ್ನ ಮಂಚದ ಕಾಲಿಗೆ ಕಟ್ಟಿದೆನು |
| ನಗಿಸಿಕೊಂಡೊಡೆ ಬಂದಪುದೇಂ | |
| ಪಿಡಿದ ಬಿಲ್ಲೆ ದಂಟಿಂಗೆಣೆ | |
| ಪರಶುರಾಮನನಂಜಿಸಿದ ವೀರ | |
| ಪೃಥಾಸುತರಂ ಗೆಲ್ದೊಡೆ ತಪಕೆ ಪೋಪೆನ್ | |

❐ ಈ ಕೆಳಗೆ ಕೊಡಲಾದ ರೀತಿಯಲ್ಲಿ ಕಾವ್ಯಭಾಗವನ್ನು ಅನ್ವಯಾನುಸಾರ ಓದಿರಿ.

ಕಣ್ಗೆಟ್ಟ ಮುದುಪಂಗೆ ಕಟ್ಟಿದ ಪಟ್ಟಮೆ ಸರವಿಗೆ ನೆಟ್ಟನೆ ದೊರೆ

ಪಿಡಿದ ಬಿಲ್ಲೆ ದಂಟಿಂಗೆಣೆ

ಪಗೆವರ ನಿಟ್ಟೆಲ್ಲಂ ಮು¥pವೊಡೆನಗೆ ಪಟ್ಟಂಗಟ್ಟಾ

❐ ಭೀಷ್ಮರಿಗೆ ವೀರಪಟ್ಟವನ್ನು ಕಟ್ಟಿದ್ದು ಸರಿಯೇ? ತರಗತಿಯಲ್ಲಿ ನಡೆಯುವ ಚರ್ಚಾಗೋಷ್ಠಿಯಲ್ಲಿ ನಿಮ್ಮ ನಿಲುವನ್ನು ಮಂಡಿಸಲು ಟಿಪ್ಪಣಿಯನ್ನು ಬರೆಯಿರಿ.

❐ "ವೃದ್ಧರ ಜೀವನಾನುಭವ, ಅರಿವು, ಪರಿಣತಿ ಹೊಸ ತಲೆಮಾರಿಗೆ ದಾರಿದೀಪವಾಗುತ್ತವೆ" ಈ ಮಾತಿನ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಸಮರ್ಥಿಸಿ ಪತ್ರಿಕೆಯೊಂದರ ಓದುಗರ ಓಲೆ ವಿಭಾಗದಲ್ಲಿ ಪ್ರಕಟಿಸಲು ಒಂದು ಲೇಖನವನ್ನು ಬರೆಯಿರಿ.

❐ ಈ ಸಾಲುಗಳಿಗೆ ಪ್ರಸ್ತಾರ ಹಾಕಿರಿ.

ಕುಲಜರನುದ್ಧತರಂ ಭುಜ ।

ಬಲಯುತರಂ ಪಿತರನೀ ಸಭಾಮಧ್ಯದೊಳ ।।

ಗ್ಗಲಿಸಿದ ಮದದಿಂ ನಾಲಗೆ ।

ಕುಲಮಂ ತುಬ್ಬುವವೊಲು¥ದೆ ನೀಂ ಕೆಡೆನುಡಿವೈ ।।

❐ ಈಗಾಗಲೇ ಯಕ್ಷಗಾನದ ಹಾಡುಗಳನ್ನು ಗಮನಿಸಿದ್ದೀರಿ. ನಿಮ್ಮ ಶಾಲೆಯಲ್ಲಿ 'ಭೀಷ್ಮಕರ್ಣರ ಸಂವಾದ' ಯಕ್ಷಗಾನ ಕೂಟವೊಂದು ಜರಗಿದೆ ಎಂದು ಭಾವಿಸಿರಿ. ಇದರಲ್ಲಿ ಭೀಷ್ಮಕರ್ಣರ ಪಾತ್ರಗಳೊಳಗೆ ನಡೆದ ಸಂಭಾಷಣೆಯನ್ನು ಬರೆಯಿರಿ.

* * *



# ಹೊಸಚಿಗುರು ಹಳೆಬೇರು...

ಅಜ್ಜಿಗೆ ಈಗ ೮೮ ವರ್ಷ. ಆದರೆ ಆಕೆಯ ಕಣ್ಣು, ಕಿವಿ ಆರೋಗ್ಯ ಮನಸ್ಸಿಗೆ ನಲವತ್ತರ ವಯಸ್ಸು. ಗಂಜಿ ಹಾಕಿ ಇಸ್ತ್ರಿ ಮಾಡಿದ ಕಾಟನ್ ಸೀರೆ ಉಟ್ಟರೆ ಅದನ್ನು ಮುಕ್ತವಾಗಿ ಮೆಚ್ಚುತ್ತಾಳೆ. ಸೀರೆಯ ಕಲರ್ ಕಾಂಬಿನೇಷನ್, ಅಂಚು, ಸೆರಗು, ವಿನ್ಯಾಸಗಳ ಬಗ್ಗೆ ಆಕೆಯ ವ್ಯಾಖ್ಯಾನ ಅಭಿರುಚಿಗಳು ಪ್ರಶ್ನಾತೀತ. ಮರಿಮಗಳ ಬಾಡಿಗೆಮನೆಯ ವ್ಯವಸ್ಥೆ ಅವ್ಯವಸ್ಥೆಗಳ ಬಗ್ಗೆ, ಅದು ತಾನೇ ಸಂಸಾರ ಹೂಡಬೇಕಾಗಿರುವ ಮನೆಯೇನೋ ಎಂಬಷ್ಟು ಆಸ್ಥೆ. ಮೊಮ್ಮಗ ಸರಿಯಾದ ತಳಪಾಯವಿಲ್ಲದ ಮನೆಯ ಮೇಲೆ ಎರಡು ಮಹಡಿ ಕಟ್ಟುತ್ತಿದ್ದಾನಲ್ಲ ಅಂತ ಕೊರಗು.

ಆಕೆ ನಾನಾ ರೀತಿಯಲ್ಲಿ ವಿಶಿಷ್ಟ ಹೆಂಗಸು. ತಾನು ಓದಲಿಲ್ಲ ಎಂಬ ಕೊರಗು ಈಗಲೂ ಆಕೆಯನ್ನು ಬಾಧಿಸುತ್ತದೆ. ಚಿಕ್ಕಂದಿನಲ್ಲಿ ಆಕೆಯನ್ನು ಎರಡನೇ ಕ್ಲಾಸಿಗೇ ಸ್ಕೂಲು ಬಿಡಿಸಿ ಹತ್ತಿ ಕೀಳುವ ಕೂಲಿ ಕೆಲಸಕ್ಕೆ ಕಳುಹಿಸಿದರಂತೆ. ಹದಿಮೂರಕ್ಕೆ ಮದುವೆ. ಓದುವ ಆಸೆ ಮನಸ್ಸಿನಲ್ಲೇ ಗೂಡು ಕಟ್ಟಿಕೊಂಡು ಜೀವಂತವಾಗಿತ್ತು. ಮೊಮ್ಮಕ್ಕಳಿಂದ ಅಕ್ಷರಗಳನ್ನು ತನ್ನ ಹೆಸರು ಬರೆಯುವುದನ್ನು ಕಲಿತಳು. ಮುದ್ದೆಗೆ ಹಿಟ್ಟು ಬೇಯಿಸುವಾಗ ಕೈಬಿಡುವಾಗಿರುವ ಸಮಯದಲ್ಲಿ ಸ್ಲೇಟಿನಲ್ಲಿ ಅಕ್ಷರ ತಿದ್ದುತ್ತಿದ್ದಳು. ಅಡಿಗೆಮನೆ ಪಕ್ಕದಲ್ಲಿದ್ದ ಸ್ಟೋರ್‌ರೂಂನಲ್ಲಿ ಏನಿತ್ತೋ ಏನಿಲ್ಲವೋ..... ಆಕೆಯ ಸ್ಲೇಟು ಬಳಪ ಮಾತ್ರ ಅಲ್ಲಿ ಜೋಪಾನವಾಗಿತ್ತು. ಎಲ್ಲ ವಿಷಯಗಳ ಬಗೆಗೂ ಆಕೆಗೆ ಆಸಕ್ತಿ, ಅನುಭವ, ತಿಳುವಳಿಕೆ. ತನ್ನ ಎಲ್ಲ ಮಕ್ಕಳ ಮನೆಯ Plan ಗಳನ್ನೂ ಆಕೆಯೇ ಹಾಕಿದ್ದು. ಅಡಿಗೆಮನೆಯ ಒಂದು ಬದಿಯಲ್ಲಿ ರಂಗೋಲಿ ಪುಡಿಯಲ್ಲಿ ನಕ್ಷೆ ಬರೆದು ಯಾವ ಯಾವುದು ಎಲ್ಲೆಲ್ಲಿ ಬರಬೇಕು ಎಷ್ಟೆಷ್ಟು ಅಳತೆ ಇರಬೇಕು ಅಂತ ತಿಳಿಸುತ್ತಿದ್ದಳು. ಆಕೆಯ ಮೇಲ್ವಿಚಾರಣೆಯಲ್ಲಿ ಸಿಮೆಂಟು ಮರಳಿನ ಮಿಶ್ರಣ ನಡೆದು ಕಟ್ಟಿದ ಮನೆಗಳಲ್ಲಿ ಈವತ್ತಿನವರೆಗೂ ಒಂದೂ ಬಿರುಕಿಲ್ಲ. ಹೆಣ್ಣು ಹೆಂಗಸಿನ ಮಾತು ಅಂತ ಆಲಕ್ಷಿಸಿದವರು ನಿಜಕ್ಕೂ ಕೈಸುಟ್ಟುಕೊಂಡರು. ಆಕೆ ತನ್ನ ಮಕ್ಕಳೂ, ಮೊಮ್ಮಕ್ಕಳೂ, ಮರಿಮಕ್ಕಳೂ ಸೇರಿದಂತೆ ಏನಿಲ್ಲವೆಂದರೂ ೪೦–೫೦ ಎಳೆಕೂಸುಗಳಿಗೆ, ತನ್ನ ಕಾಲುಗಳ ಮೇಲೆ ಹಾಕಿಕೊಂಡು ಎಣ್ಣೆನೀವಿ ಸ್ನಾನ ಮಾಡಿಸಿರಬಹುದು. ಆ ಪ್ರತಿಯೊಂದು ಮಗುವಿನ ಅಳು, ನಗು, ಮೈಬಣ್ಣ, ಮೈಚರ್ಮ, ಅವಕ್ಕೆ ಬಂದ ಖಾಯಿಲೆ..... ಗಳ ಪ್ರತಿಯೊಂದು ವಿವರವೂ ಆಕೆಯ ನೆನಪಿನಲ್ಲಿದೆ. ಹೆಚ್ಚೆಂದರೆ ಎರಡು ಮಕ್ಕಳನ್ನು ಹಡೆದು ನಿಲ್ಲಿಸುವ ನಮಗೆ ನಮ್ಮ ಮಕ್ಕಳ ಒಂದನೇ ಎರಡನೇ ವರ್ಷದ ಮುಖದ ಚಹರೆ, ಆಟಪಾಠ ಮೊದಲಾದ ಯಾವ ನೆನಪೂ ಇರುವುದಿಲ್ಲವಲ್ಲ?

ಅದೇನೋ ಎಲ್ಲರೂ ಎಲ್ಲದಕ್ಕೂ ಆಕೆಯನ್ನೇ ಆಶ್ರಯಿಸುತ್ತಿದ್ದರು. ಬಾಣಂತನಕ್ಕೆ, ಕೂಸುಗಳ ಸ್ನಾನ ಮಾಡಿಸಲಿಕ್ಕೆ, ಹೋಳಿಗೆ ತಟ್ಟುವುದಕ್ಕೆ ಹೀಗೆ ಆಕೆಯ ಗಮನ ಬಯಸುತ್ತಿದ್ದ ಈ ನಾನಾ ಮನುಷ್ಯ ಜೀವಿಗಳ ಜೊತೆಗೆ ಇನ್ನೂ ಹೆಚ್ಚಿನ ಗಮನ ಬೇಡುತ್ತಿದ್ದ ಒಂದು ಜೀವಿ ಆ ಮನೆಯಲ್ಲಿತ್ತು. ಆ ಜೀವಿ ಒಂದು ಹೆಣ್ಣು ಬೆಕ್ಕು. ಸದಾ ಕಾಲವೂ ಅಜ್ಜಿಯ ಕಾಲಸಂದಿಯಲ್ಲಿ ಸುಳಿದಾಡಿಕೊಂಡಿರುತ್ತಿದ್ದ ಆ ಬೆಕ್ಕು ಅಜ್ಜಿಯ ಎಡೆಬಿಡದ ಸಂಗಾತಿ. ಅಜ್ಜಿ ಸಂಜೆಯ ಕಾಫಿಗೆಂದು ಒಲೆ ಹಚ್ಚಿದಾಗ ಮೇಲೆದ್ದ ಜ್ವಾಲೆಯ ಉರಿ ತಗುಲಿ ಎಚ್ಚರಗೊಂಡು ಕಿರುಚುತ್ತಾ ಈಚೆಗೆ ಓಡಿ ಬಂದು ಅಜ್ಜಿಯಿಂದ ಚೆನ್ನಾಗಿ ಬೈಸಿಕೊಳ್ಳುತ್ತಿತ್ತು. ಅಜ್ಜಿ ಅಪರೂಪಕ್ಕೊಮ್ಮೆ ಮಧ್ಯಾಹ್ನದ ಹೊತ್ತು ಸ್ವಲ್ಪ ಹೊತ್ತು ಕಣ್ಣುಮುಚ್ಚಿ ಎರಡೂ ಕೈಗಳ ಹೆಬ್ಬೆರಳುಗಳನ್ನು ಜೋಡಿಸಿ ಒಂದು ವಿಶಿಷ್ಟ ವಿನ್ಯಾಸದಲ್ಲಿ ತಿರುಗಿಸುತ್ತಾ



ಧ್ಯಾನಸ್ಥ ಸ್ಥಿತಿಯಲ್ಲಿ ಕೂರುತ್ತಿದ್ದಳು. ಬೆಕ್ಕುಕೂಡ ಅಜ್ಜಿಯ ಎದುರಿನಲ್ಲಿ ಕಣ್ಣುಮುಚ್ಚಿ ಅದೇ ರೀತಿ ಕೂರುತ್ತಿತ್ತು. ಈ ಧ್ಯಾನಸ್ಥ ಸ್ಥಿತಿಯನ್ನು ಅಜ್ಜಿ ಬೆಕ್ಕಿನಿಂದ ಕಲಿತಳೋ ಅಥವಾ ಬೆಕ್ಕು ಅಜ್ಜಿಯಿಂದ ಕಲಿಯಿತೋ ಗೊತ್ತಿಲ್ಲ.

ಅಜ್ಜಿ ಎಷ್ಟೇ ಗಡಿಬಿಡಿಯ ಕೆಲಸಗಳಲ್ಲಿ ತೊಡಗಿಕೊಂಡರೂ, ಹೊತ್ತಲ್ಲದ ಹೊತ್ತಲ್ಲಿ ಅತಿಥಿಗಳು ಬಂದಾಗ, ಒಲೆಗಿಕ್ಕಲು ಒಣಸೌದೆಗೆ ಗತಿಯಿಲ್ಲದಾಗ ಕೈಕಾಲು ಮುರಿದು ಒಲೆಗಿಕ್ಕಲೇ ಎಂಬಂತಹ ಸಂಕಟದ ಸನ್ನಿವೇಶದಲ್ಲಿಯೂ ಬೆಕ್ಕಿಗೆ ಒಂದು ತುತ್ತು ಹಾಲನ್ನು ಹಾಕುವುದನ್ನು ಮರೆಯುತ್ತಿರಲಿಲ್ಲ. ಅಜ್ಜಿಯ ಪಾಲಿಗೆ ಅದು ಎಂದೂ ಒಂದು ಅನ್ಯಜೀವಿಯಾಗಲೇ ಇಲ್ಲ.

ಪ್ರಾಣಿದಯೆ ಎಂಬುದು ಅಜ್ಜಿಯ ಸ್ವಭಾವವೇ ಆಗಿದ್ದಿರಬೇಕು. ಕೊಟ್ಟಿಗೆಯ ಎಮ್ಮೆ ಮೇವಿಗಾಗಿ ಅರಚಿದ್ದು, ಕರು ನೀರಿಗಾಗಿ ಕೂಗಿದ್ದು ಮನೆಯಲ್ಲಿದ್ದ ಯಾವ ಕಿವಿಗಳನ್ನೂ ತಲುಪದೆ, ಅಡುಗೆಮನೆಯ ಕೆಲಸಗಳಲ್ಲಿ ಮುಳುಗಿದ್ದ ಅಜ್ಜಿಯ ಕಿವಿಯನ್ನೇ ತಲುಪುತ್ತಿತ್ತು.

ಅಜ್ಜಿಯ ಹಲವು ಮಂದಿ ಮೊಮ್ಮಕ್ಕಳಲ್ಲಿ ಚಿಕ್ಕವಳಾದ ಗೌರಿ ಮಹಾ ಧೈರ್ಯ, ತುಂಟಾಟಗಳ ಹುಡುಗಿ. ಅವಳಿಗೆ ಆಗ 15–16 ವರ್ಷವಿರಬಹುದು. ಎಳೆಯ ಮಕ್ಕಳನ್ನು ಎದೆಗವಚಿಕೊಂಡು ಮರ ಹತ್ತಿಬಿಡುತ್ತಿದ್ದಳು. ಕಾಂಪೌಡ್ ಗೋಡೆ ಏರಿ ಜಂಪ್ ಮಾಡುವ ಮಕ್ಕಳಿಗೆ ಹುಷಾರು ಎಂದು ಎಚ್ಚರಿಸುತ್ತಿರುವಷ್ಟರಲ್ಲಿ ಅವಳು ಕಿಟಕಿಯ ಸಜ್ಜಾ ಹಿಡಿದು ತಾರಸಿ ಏರಿರುತ್ತಿದ್ದಳು. ಒಂದು ಸಲ ಅವಳು ಒಂದು ಗಿಳಿಮರಿ ತಂದಳು. ನಾವೆಲ್ಲ ಅವಳ ಕೈಚಳಕವನ್ನು ಪ್ರಶಂಸಿಸುತ್ತಾ ಕೂತಿದ್ದೆವು. ಅದೆಲ್ಲಿಗೋ ಹೋದ ಅಜ್ಜಿ ಬಂದವಳೇ, ತಡವರಿಸುತ್ತಾ ಕುಪ್ಪಳಿಸುತ್ತಿದ್ದ ಆ ಗಿಳಿಮರಿಯನ್ನು ನೋಡಿದಳು. ಕೂಡಲೇ ಅವಳ ಕರುಳು ಚುರುಕ್ಕೆಂದಿತು. "ಅದನ್ಯಾಕೆ ತಂದೆ, ಬಿಟ್ಟು ಬಿಡು" ಅಂದಳು. "ಅಯ್ಯೋ! ಬಿಟ್ಟರೂ ಅದಕ್ಕೆ ಹಾರಕ್ಕಾಗಲ್ಲ ಅಜ್ಜಿ" ಅಂದಳು ಗೌರಿ. ಅವಳು ಅದರ ರೆಕ್ಕೆ ಕತ್ತರಿಸಿ ಹಾಕಿದ್ದು ಅಜ್ಜಿಗೆ ಸ್ಪಷ್ಟವಾಯಿತು. ಅಜ್ಜಿಗೆ ಇನ್ನಷ್ಟು ಸಂಕಟವಾಯಿತು. "ತಗೀ ಪುಟ್ಟಾ, ಇದು ನೀನು ಮಾಡುವ ಕೆಲಸವಲ್ಲ" ಅಂದಳು. ಇಂಥ ಜೀವಹಿಂಸೆಯನ್ನು ಯಾರೂ ಮಾಡಬಾರದು. ಅದರಲ್ಲೂ ಹೆಣ್ಣಾದವಳು ಮಾಡಲೇಬಾರದು ಎಂಬ ತೀವ್ರ ಆಕ್ಷೇಪ ಆ ಮಾತಿನಲ್ಲಿ ಅಡಕವಾಗಿತ್ತು. ಅದುವರೆಗೆ ಗೌರಿಯ ಸಾಹಸಗಳನ್ನು ಮೆಚ್ಚಿಕೊಳ್ಳುತ್ತಿದ್ದ ನಮಗೆ ನಾಚಿಕೆಯಿಂದ ತಲೆ ತಗ್ಗಿಸುವಂತಾಯಿತು.

ಅಜ್ಜಿಯ ಕಾರ್ಯಸ್ಥಳ ಒಂದು ರೀತಿ ಪ್ರಾಣಿ ಪ್ರಪಂಚವೇ ಆಗಿತ್ತು. ಅಡುಗೆಮನೆ ಸ್ಟೋರ್‌ರೂಂನ ಮೂಲೆಗಳಲ್ಲಿ ಬಹಳ ಕಾಲ ಬಳಸದೆ ಇಟ್ಟಿದ್ದ ಡಬ್ಬಗಳಲ್ಲಿ ಚೇಳುಗಳ ಸಂಸಾರವೇ ಇರುತ್ತಿತ್ತು. ರಾತ್ರಿಯ ಹೊತ್ತು ದೊಡ್ಡ ಹಿತ್ತಿಲ ಇನ್ನೊಂದು ತುದಿಯಲ್ಲಿದ್ದ ಕಕ್ಕಸುಮನೆಗೆ ಹೋಗುವ ದಾರಿಯಲ್ಲಿ ಆಕೆ ನೋಡಿದ ಹಾವುಗಳಿಗೆ ಲೆಕ್ಕವೇ ಇಲ್ಲ. ಆಕೆಯ ಪಾಲಿಗೆ ಹಾವುಗಳ ಓಡಾಟ ಮನೆಯಲ್ಲಿ ಇರುವೆ ಓಡಾಡಿದಷ್ಟೇ ಸಾಮಾನ್ಯ ಸಂಗತಿ. ಸಣ್ಣಪುಟ್ಟ ಹಾವುಗಳನ್ನು ಕಂಡ ಸಂಗತಿಯನ್ನು ಆಕೆ ತಿಳಿಸುತ್ತಲೇ ಇರಲಿಲ್ಲ. ದೊಡ್ಡ ಹಾವು ನೋಡಿದೆ ಎಂದರೆ ಅದು ನಾವೂ ನೀವೂ ಎಂದೂ ಎಲ್ಲೂ ನೋಡಿರದಷ್ಟು ದೊಡ್ಡ ಹಾವು ಎಂದೇ ಅರ್ಥ. ಅಂತಹ ಎಷ್ಟೋ ಹಾವುಗಳು ಆಕೆಯ ಕಾಲಬುಡದಲ್ಲಿ ಸರಿದು ಹೋಗಿರುತ್ತಿದ್ದವು. ಧಾರಾಕಾರ ಮಳೆ ಬೀಳುತ್ತಿದ್ದ ರಾತ್ರಿಗಳಲ್ಲಿ ಮಿಂಚುಬಡಿದಾಗ ಅವು ಮಿಂಚಿ ಮರೆಯಾಗಿರುತ್ತಿದ್ದವು. ಅಜ್ಜಿ ಆ ಬಗ್ಗೆ ಹೇಳುವುದನ್ನು ನಾವು ಉಸಿರು ಬಿಗಿ ಹಿಡಿದು ಕೇಳುತ್ತಿದ್ದೆವು. ಇಷ್ಟಾಗಿಯೂ ಅಜ್ಜಿಯನ್ನು ಎಂದೂ ಯಾವ ಹಾವಾಗಲೀ, ಕೀಟವಾಗಲೀ ಕಚ್ಚಿದ್ದಿಲ್ಲ. ಬಹುಶಃ ಅಜ್ಜಿಯ ಮೈವಾಸನೆ ಅವುಗಳಿಗೆ ಚಿರಪರಿಚಿತ ಆಗಿದ್ದಿರಬೇಕು. ಅಜ್ಜಿಯನ್ನು ಅವು ತಮ್ಮ ಬಳಗಕ್ಕೆ, ತಮ್ಮ ಪ್ರಪಂಚಕ್ಕೆ ಸೇರಿದ ಜೀವಿ ಎಂದು ಒಪ್ಪಿಕೊಂಡಿದ್ದಿರಬೇಕು.



ಪ್ರಾಚೀನ ಕಾಲದಲ್ಲಿ ಕಾಡಿನಲ್ಲಿ ಕೂತು ತಪಸ್ಸು ಮಾಡುತ್ತಿದ್ದ ಋಷಿಗಳ ಬಗ್ಗೆಯೂ ಇಂಥದ್ದೇ ವಿವರಗಳಿವೆ. ಅವರ ಮೈಮೇಲೆ ಹುತ್ತ ಬೆಳೆದು ಹಾವುಗಳು ಹರಿದಾಡುತ್ತಿದ್ದವಂತೆ, ಜಟೆಯಲ್ಲಿ ಗುಬ್ಬಿ ಗೂಡು ಕಟ್ಟುತ್ತಿದ್ದವಂತೆ, ಹುಲಿ, ಸಿಂಹ, ಆನೆ, ಜಿಂಕೆ ಮೊದಲಾದ ಸಕಲ ಪ್ರಾಣಿಗಳೂ ಸ್ನೇಹಭಾವದಿಂದ ತಪಸ್ವಿಯ ಸುತ್ತ ಸುಳಿದಾಡಿಕೊಂಡು ಇರುತ್ತಿದ್ದವಂತೆ..... ಅದರೂ ಸಂಸಾರದಲ್ಲಿದ್ದುಕೊಂಡು ಪ್ರಾಣಿಗಳೊಂದಿಗೆ ಇಂಥ ಒಡನಾಟ ಸಾಧಿಸಿದ ಅಜ್ಜಿ ಅವರೆಲ್ಲರಿಗಿಂತ ದೊಡ್ಡವಳು ಅನ್ನಿಸುತ್ತದೆ.

***– ಕೆ.ಆರ್. ಸಂಧ್ಯಾ ರೆಡ್ಡಿ***

**ಕೆ.ಆರ್. ಸಂಧ್ಯಾ ರೆಡ್ಡಿ**

ಇವರು ಕನ್ನಡದ ಪ್ರಮುಖ ಬರಹಗಾರ್ತಿಯವರಲ್ಲಿ ಒಬ್ಬರು. ಇವರ ಹಲವಾರು ಕತೆ ಮತ್ತು ಲೇಖನಗಳು ಲಂಕೇಶ್ ಪತ್ರಿಕೆ, ಉದಯವಾಣಿ ಮುಂತಾದ ಕನ್ನಡದ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಡಾ। ಸಬಿಹಾ ಅವರು ಸಂಪಾದಿಸಿದ 'ಪ್ರಬಂಧ ರ್ಗ್ಗ' ಎಂಬ ಸಂಕಲನದಲ್ಲಿ ಪ್ರಕಟವಾದ 'ಅಜ್ಜಿಯ ಕ್ಲೋಸ್ ಫ್ರೆಂಡ್ಸ್' ಎಂಬ ಇವರ ಪ್ರಬಂಧದ ಆಧಾರದಲ್ಲಿ ಈ ಪಾಠವನ್ನು ಸಿದ್ಧಪಡಿಸಲಾಗಿದೆ.

- ಒಂದು ಕುಟುಂಬದ ಅಭಿವೃದ್ಧಿಯಲ್ಲಿ ಆ ಕುಟುಂಬದ ವೃದ್ಧೆಯರ ಪಾತ್ರ ಮಹತ್ತರವಾದುದು ಎಂಬುದನ್ನು ಈ ಪ್ರಬಂಧದ ಆಧಾರದಲ್ಲಿ ಸಮರ್ಥಿಸಿರಿ.
- ಅಜ್ಜಿಯ ಬದುಕಿನ ಘಟನೆಗಳನ್ನು ಆಕೆಯೇ ಹೇಳಿಕೊಳ್ಳುವಂತೆ ಬರೆಯಿರಿ.
- ಈ ಪ್ರಬಂಧದಲ್ಲಿ ಬಂದ ಅನ್ಯದೇಶೀಯ ಪದಗಳನ್ನು ಪಟ್ಟಿಮಾಡಿರಿ.
- ಹಿರಿಯ ನಾಗರಿಕರೊಬ್ಬರನ್ನು ಭೇಟಿಮಾಡಿ ಅವರ ಅನುಭವಗಳನ್ನು ಸಂಗ್ರಹಿಸಿ ಅದರ ಆಧಾರದಲ್ಲಿ ಲೇಖನವೊಂದನ್ನು ಬರೆಯಿರಿ.

* * *

## ಬಾಳಸಂಜೆ

ಮಗನಿಗೆ ದೊಡ್ಡ ವಹಿವಾಟು
ಮುಂಬಯಿಯಲ್ಲಿ
    ಮಗಳು ಮದುವೆಯಾಗಿ
    ಮಕ್ಕಳೊಂದಿಗೆ ಕಲ್ಕತ್ತೆಯಲ್ಲಿ
ಹಣ್ಣು ಹಣ್ಣು ಮುದುಕ – ಮುದುಕಿ
ಸಾಗರದ ಒಂದು ಮೂಲೆ
ಚಿಕ್ಕ ಹಳ್ಳಿಯಲ್ಲಿ






ದೊಡ್ಡ ಮನೆ –
ಮಂಕಾಗಿ ಉರಿಯುವುದು ದೀಪ
ಭರವಸೆಯಲ್ಲಿ
ಸುಳಿದಾಡುವುದು
ನಿರೀಕ್ಷೆಯ ದೆವ್ವ
ದೊಡ್ಡ ತೋಟದಲ್ಲಿ
ಹೇಗಿರುವೆಯಮ್ಮ?
ವಿಚಾರಿಸಿಕೊಳ್ಳುವಳು
ಮಗಳು ತಪ್ಪದೇ ಫೋನಿನಲ್ಲಿ
ನಾನಿಲ್ಲದಿದ್ದರೆ ಮುಳುಗಿಯೇ
ಹೋಗುವುದು ಕಂಪನಿ
ಬರಲಾರೆ, ಗೀಚಿರುವನು
ಮಗ ಕಾಗದದಲ್ಲಿ
ತಪ್ಪದೇ ಬರುವುದು ಮನಿಯಾರ್ಡರು
ತಿಂಗಳ ಕೊನೆಯಲ್ಲಿ
'ಮನೆ ಕಡೆ ಹುಶಾರು'
'ಕೊಡಿ, ತೆಂಗು, ಅಡಿಕೆಗೆ ನೀರು'
ಸಂದೇಶವಿರುವುದು ಮೂಲೆಯಲ್ಲಿ

*– ಸವಿತಾ ನಾಗಭೂಷಣ*

**ಸವಿತಾ ನಾಗಭೂಷಣ**

ಸವಿತಾ ನಾಗಭೂಷಣ ಆಧುನಿಕ ಕನ್ನಡ ಕವಯತ್ರಿಯರ ನಡುವೆ ವಿಶಿಷ್ಟ ಸ್ಥಾನಮಾನವನ್ನು ಗಳಿಸಿಕೊಂಡವರು. ಇವರು ಶಿವಮೊಗ್ಗದಲ್ಲಿ ಜನಿಸಿದರು. ಅಂಚೆ ಇಲಾಖೆಯಲ್ಲಿ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿಯನ್ನು ಪಡೆದಿದ್ದಾರೆ. 'ನಾ ಬರುತ್ತೇನೆ ಕೇಳು', 'ಚಂದ್ರನನ್ನು ಕರೆಯಿರಿ ಭೂಮಿಗೆ', 'ಹೊಳೆಮಗಳು', 'ಜಾತ್ರೆಯಲ್ಲಿ ಶಿವ' – ಇವುಗಳು ಅವರ ಪ್ರಮುಖ ಕವನ ಸಂಕಲನಗಳು. ಅವರ 'ಸ್ತ್ರೀಲೋಕ' ಕಾದಂಬರಿ ವಿಮರ್ಶಕರ ಗಮನ ಸೆಳೆದಿದೆ. 'ನಾ ಬರುತ್ತೇನೆ ಕೇಳು' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ. ಪ್ರಸ್ತುತ ಕವನವನ್ನು ಅವರ 'ಜಾತ್ರೆಯಲ್ಲಿ ಶಿವ' ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

❒ 'ಬಾಳ ಸಂಜೆ' ಕವನದ ಆಸ್ವಾದನ ಟಿಪ್ಪಣಿ ಬರೆಯಿರಿ.

## ಹಕ್ಕಿಗಳು ಹಾರಿದವು

ಹಕ್ಕಿಗಳು ಹಾರಿದವೆ ಗೂಡಿಂದಲಿ ಮರಿ
ಹಕ್ಕಿಗಳು ಹಾರಿದವೆ ಗೂಡಿಂದಲಿ ।।ಪಲ್ಲವಿ।।

ಒಂದೊಂದು ಗರಿ ತಂದು ನಾನಿದನು ಕಟ್ಟಿದೆನು
ಮನದೊಡತಿ ನೀ ಬಂದು ಶೃಂಗರಿಸಿದೆ
ಎನ್ನೊಡಲ ಅಂಗಳದಿ ಹೂವುಗಳ ಅರಳಿಸಿದೆ
ಕೃತಕೃತ್ಯ ಭಾವದಲಿ ನಾ ತೇಲಿಹೋದೆ ।।

ಬಿರುಬಿಸಿಲು ಜಡಿಮಳೆಗೆ ನಾನವಕೆ ಕೊಡೆಯಾದೆ
ಹಸಿವು ಬಾಯಾರಿಕೆಗೆ ನೀನು ರಸಧುನಿಯಾದೆ
ಬಲಿತೊಡನೆ ಪುಕ್ಕಗಳು ತೊರೆದವೆ ಈ ಮಡಿಲು
ಸೋಲುತಿವೆ ನಿರೀಕ್ಷೆಯಲ್ಲಿ ಈ ಕಂಗಳು ।।

ಬಾಗಿರುವ ಬೆನ್ನಿನಲಿ ನೆನಪುಗಳ ಕಂತೆಯಿದೆ
ಮಂಜಾದ ಕಣ್ಣಿನಲಿ ಕನಸುಗಳ ಸಂತೆಯಿದೆ
ಕಳೆದ ದಿನಗಳು ಈಗ ಕತೆಯಾಗಿ ಉಳಿದಿದೆ
ವ್ಯಥೆಯ ನೀಗಲು ನನಗೆ ಜೊತೆಗಾತಿ ನೀನೆ
ವ್ಯಥೆಯ ನೀಗಲು ನನಗೆ ಜೊತೆಗಾರ ನೀನೆ

*– ಶಕುಂತಲಾ ಕಿಣಿ*

**ಶಕುಂತಲಾ ಕಿಣಿ**

ಶ್ರೀಮತಿ ಶಕುಂತಲಾ ಕಿಣಿಯವರು ಕಾಸರಗೋಡು ಜಿಲ್ಲೆಯ ಬಳ್ಳಂಬೆಟ್ಟಿನವರು. ಅವರು ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಅನೇಕ ಕವಿತೆಗಳನ್ನು ಕವಿಗೋಷ್ಠಿಯಲ್ಲಿ ಓದುವುದಕ್ಕಾಗಿ ಹಾಗೂ ಬಾನುಲಿ ಪ್ರಸಾರಕ್ಕಾಗಿ ರಚಿಸಿದ್ದಾರೆ. ಅವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಎಂ.ಎ. ಪದವಿಯನ್ನು ಪ್ರಥಮ ರ್‍ಯಾಂಕ್‌ನೊಂದಿಗೆ ಪಡೆದಿದ್ದಾರೆ. ಅವರು ಕಾಲೇಜು ಉಪನ್ಯಾಸಕಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಕಳೆದ 29 ವರ್ಷಗಳಿಂದ ಅವರು ಮಂಗಳೂರು ಆಕಾಶವಾಣಿಯ ಉದ್ಘೋಷಕಿಯಾಗಿದ್ದಾರೆ.

- ❒ ಈ ಕವನವನ್ನು 'ಬಾಳಸಂಜೆ' ಕವನದೊಂದಿಗೆ ಹೋಲಿಸಿ ತುಲನಾತ್ಮಕ ಲೇಖನವನ್ನು ಬರೆಯಿರಿ.
- ❒ ಸಮಾಜದ ಏಳಿಗೆಗಾಗಿ ಶ್ರಮಿಸಿದ ಹಿರಿಯರು ಇಂದು ನಮ್ಮೊಂದಿಗಿದ್ದಾರೆ. ಅವರಿಗಾಗಿ ಸರಕಾರ ಹಾಗೂ ಸಮಾಜ ಏನು ಮಾಡಬಹುದು ಎಂಬ ವಿಚಾರವಾಗಿ ವಿಶ್ವ ವೃದ್ಧರ ದಿನಾಚರಣೆಯ ಸಂದರ್ಭದಲ್ಲಿ ಮಂಡಿಸಲು ಭಾಷಣವೊಂದನ್ನು ತಯಾರಿಸಿರಿ.

***



# ಪದಕೋಶ

## ಅ

| | | |
|---|---|---|
| ಅಂಗಾಧಿಪತಿ | – | ಅಂಗದೇಶದ ಒಡೆಯ, ಕರ್ಣ |
| ಅಂಚು | – | ಬದಿ |
| ಅಂತ | – | ಕೊನೆ |
| ಅಂತು | – | ಹಾಗೆ |
| ಅಂತುಟು | – | ಹಾಗೆ, ಅಷ್ಟು |
| ಅಂಧ | – | ಕುರುಡ |
| ಅಂಧಕಾರ | – | ಕತ್ತಲೆ |
| ಅಂಬಲಿ | – | ಗಂಜಿ |
| ಅಂಬೋಳು | – | ಅನ್ನುವವಳು |
| ಅಕ್ಕರೆ | – | ಪ್ರೀತಿ |
| ಅಕ್ಕುಂ | – | ಆಗುವುದು |
| ಅಗ್ಗಲಿಸಿದ | – | ಹೆಚ್ಚಳ ಹೊಂದಿದ |
| ಅಗ್ರಜ | – | ಅಣ್ಣ |
| ಅಗ್ರಜಾತೆ | – | ಹಿರಿಯ ಸಹೋದರಿ, ಅಕ್ಕ |
| ಅಚಲ | – | ಚಲನೆ ಇಲ್ಲದ, ಸ್ಥಿರ |
| ಅಟ್ಯಾಚ್ಡ್ | – | ತಾಗಿಕೊಂಡ |
| ಅಡಿ | – | ಪಾದ |
| ಅಣಬೆ | – | ನಾಯಿಕೊಡೆ |
| ಅಣಿಯಾಗು | – | ಸಿದ್ಧನಾಗು |
| ಅಣ್ಮು | – | ಪರಾಕ್ರಮ, ಸಾಹಸ |
| ಅದಟು | – | ಪರಾಕ್ರಮ |
| ಅನಾಹುತ | – | ಅಪಾಯ |
| ಅನಿತು | – | ಅಷ್ಟು |
| ಅನುವಾಗು | – | ತಯಾರಾಗು |
| ಅನ್ನೆಗಂ | – | ಅಲ್ಲಿಯವರೆಗೆ |
| ಅನ್ಯ | – | ಹೊರಗಿನ |
| ಅನ್ಯೋನ್ಯ | – | ಆತ್ಮೀಯ, ಪ್ರೀತಿಯ |
| ಅಭಿಮುಖ | – | ಮುಖಮಾಡಿ |
| ಅಭಿನ್ನ | – | ಬೇರೆಯಲ್ಲದ್ದು, ಸಮಾನವಾದುದು |
| ಅಭ್ಯುದಯ | – | ಶ್ರೇಯಸ್ಸು |
| ಅಮರಾಪಗೆ | – | ದೇವನದಿ, ಗಂಗೆ |
| ಅಮರೇಂದ್ರ | – | ದೇವೇಂದ್ರ |

| | | |
|---|---|---|
| ಅಯ್ಯ | – | ತಂದೆ |
| ಅರಿ | – | ಶತ್ರು |
| ಅರಿದು | – | ಅಸಾಧ್ಯ |
| ಅರಿವಿ (ಅರಿವೆ) | – | ಬಟ್ಟೆ |
| ಅರುಣ | – | ಕೆಂಪು |
| ಅರುಹು | – | ಹೇಳು |
| ಅರ್ತಿ | – | ಪ್ರೀತಿ |
| ಅಲ್ತು | – | ಅಲ್ಲ |
| ಅವಕರ್ಣಿಸು | – | ಕೇಳು |
| ಅಷ್ಟಿಯಾ | – | ಅಷ್ಟೇನೆ, ಅಷ್ಟೆ |
| ಅಸಹನೆ | – | ತಾಳ್ಮೆ ಇಲ್ಲದಿರುವುದು |
| ಅಸುಹೃತ್ | – | ಶತ್ರು, ವೈರಿ |
| ಅಹಿತರ್ | – | ಶತ್ರುಗಳು |
| ಅಳಿ | – | ನಾಶ |
| ಅಳಿಯು | – | ನಾಶವಾಗು |

**ಆ**

| | | |
|---|---|---|
| ಆಂತರ್ಯ | – | ಅಂತರಂಗ |
| ಆಂತು | – | ಧರಿಸಿ, ಹೊಂದಿ |
| ಆಕುಲ | – | ವ್ಯಾಕುಲ, ದುಃಖ |
| ಆಗರ | – | ಮೂಲ |
| ಆಜಿ | – | ಯುದ್ಧ |
| ಆಡಂಬರ | – | ಆದ್ದೂರಿ, ವೈಭವ |
| ಆತಪ | – | ಬಿಸಿಲು |
| ಆತ್ಮಿಕಶಕ್ತಿ | – | ಆತ್ಮಶಕ್ತಿ |
| ಆದರ | – | ಮರ್ಯಾದೆ |
| ಆನಲ್ | – | ಇದಿರಿಸು |
| ಆನನ | – | ಮುಖ |
| ಆಪ್ಯಾಯನ | – | ಸುಖಕರ, ಹಿತಕರ |
| ಆಮೇಕಿ | – | ಆಮೇಲೆ |
| ಆಮಿಷ | – | ಆಸೆ |
| ಆಯತ | – | ವಿಸ್ತಾರ, ವೈಭವ |
| ಆರಂಗ | – | ಒಂದು ಬಗೆಯ ಧಾನ್ಯ |
| ಆರೋಗಣೆ | – | ಭೋಜನ |
| ಆಸತ್ತು | – | ದಣಿದು |

| | | |
|---|---|---|
| ಆಸರು | – | ದಣಿವು |
| ಆಸರೆ | – | ಆಶ್ರಯ |
| ಆಸರೆಗೋಲು | – | ಊರುಗೋಲು |
| ಆಸ್ಥೆ | – | ಆಸೆ, ಚಿಂತೆ |

### ಇ

| | | |
|---|---|---|
| ಇಕ್ಕೆ | – | ಇರುವ ಸ್ಥಳ |
| ಇಟುಗೊಂಡು | – | ಇಟ್ಟುಕೊಂಡು |
| ಇದಿರ್ಚು | – | ಇದುರಿಸು |
| ಇನಿಸು | – | ಇಷ್ಟು |
| ಇನ್ನಿನಿಸು | – | ಇನ್ನು ಕೆಲವುಕಾಲ |
| ಇ¥pವ | – | ಕೊಲ್ಲುವ, ಹೊಡೆಯುವ |
| ಇñpಕೆವಡೆ | – | ಕಡಿಮೆಯಾಗು |

### ಈ

| | | |
|---|---|---|
| ಈಡುಮಾಡು | – | ಗುರಿಪಡಿಸು |
| ಈಪಾಟಿ | – | ಇದಿಷ್ಟು, ಹೀಗೆ ತುಂಬ |
| ಈಯು | – | ಕೊಡು, ನೀಡು |
| ಈವರಂ | – | ಇದುವರೆಗೆ |

### ಉ

| | | |
|---|---|---|
| ಉಗ್ಗಡಿಸು | – | ಹೊಗಳು |
| ಉದಾರಿ | – | ಧಾರಾಳಿ |
| ಉದ್ದಾಮ | – | ಉತ್ತಮ |
| ಉದ್ಧತ | – | ಸಮರ್ಥ, ಸೊಕ್ಕಿದ |
| ಉದ್ವಿಗ್ನ | – | ಆವೇಶಭರಿತ |
| ಉನ್ಮಾದ | – | ಸೊಕ್ಕು, ಹುಚ್ಚು, ಅವಿವೇಕ |
| ಉದ್ಧಾರೋನ್ಮುಖ | – | ಉದ್ಧಾರದ ಕಡೆಗೆ ಮುಖಮಾಡಿದ |
| ಉಪಹತಿ | – | ಕೊಲೆ, ಕೇಡು, ನಾಶ, ತೊಂದರೆ |
| ಉಬ್ಬೆಗ | – | ಉದ್ವೇಗ, ಕಳವಳ, ಹೆದರಿಕೆ, ಆತುರ |
| ಉಮ್ಮಳ | – | ದುಃಖ |
| ಉಯ್ದು | – | ಒಯ್ದು, ಸಾಗಿಸಿ |
| ಉರಿಯೂತ | – | ಸಿಟ್ಟಿನಿಂದ ಉರಿಯುತ್ತ |
| ಉರುಹೊಡೆ | – | ಬಾಯಿ ಪಾಠಮಾಡು, ಪುನಃ ಪುನಃ ಹೇಳು |
| ಉರ್ಕು | – | ಹೆಚ್ಚು ಉತ್ಸಾಹ |

| | | |
|---|---|---|
| ಉ¥ದೆ | – | ಧೈರ್ಯದಿಂದ |
| ಉಲಿ | – | ಹೇಳು |
| ಉಳಿ | – | ಬಿಡು |
| ಉಲ್ಬಣಿಸು | – | ಅಧಿಕವಾಗು |
| ಉಲ್ಲೇಖಿಸು | – | ಪ್ರಮುಖವಾಗಿ ಮಾಡಿ ಹೇಳು, ಪ್ರತ್ಯೇಕಮಾಡಿ ಹೇಳು |
| ಉಸ್ಲಿ | – | ಪಚ್ಚೆ ಹೆಸರನ್ನಾಗಲೀ ಕಡ್ಲೆಯನ್ನಾಗಲೀ ಬೇಯಿಸಿ ಸಿದ್ಧ ಪಡಿಸಿದ ಒಂದು ಬಗೆಯ ಖಾದ್ಯ. ಬ್ರೆಡ್ ಅವಲಕ್ಕಿ ಇತ್ಯಾದಿಗಳಿಂದಲೂ ತಯಾರಿಸುತ್ತಾರೆ. |

**ಊ**

| | | |
|---|---|---|
| ಊಡಿ | – | ಉಣ್ಣಿಸಿ, ತಿನ್ನಿಸಿ |

**ಎ**

| | | |
|---|---|---|
| ಎಂತು | – | ಹೇಗೆ |
| ಎಕ್ಕಡ | – | ಚಪ್ಪಲಿ |
| ಎಟತಾಕು | – | ಹೋಗಿಬರು |
| ಎಡೆ | – | ಅವಕಾಶ |
| ಎಡೆಮಾಡು | – | ನೈವೇದ್ಯಮಾಡು, ಊಟಕ್ಕೆ ಬಡಿಸು |
| ಎಣೆ | – | ಸಾಮ್ಯ, ಹೋಲಿಕೆ, ಜೋಡಿ, ಸಮಾನ |

**ಏ**

| | | |
|---|---|---|
| ಏಕದಲ್ಲಿ | – | ಒಮ್ಮೆಲೇ, ಒಮ್ಮೆಗೇ |
| ಏತರದ | – | ಯಾವುದೋ ರೀತಿಯ |
| ಏಡು | – | ಎರಡು |
| ಏಡುಬೇಳೆ ಪೈರು | – | ಮೊಳಕೆ ಸಸಿ (ಬಾಲ್ಯ) |
| ಏರು | – | ಹೆಚ್ಚಳ, ಮೇಲೆಹೋಗು |
| ಏವುದು | – | ಯಾವುದು |

**ಒ**

| | | |
|---|---|---|
| ಒಂಟೆತ್ತು | – | ಒಂಟಿ ಎತ್ತು |
| ಒಕ್ಕಲಿಗರು | – | ರೈತರು |
| ಒಕ್ಕುಡಿತೆ | – | ಒಂದು ಕುಡುತೆ |
| ಒಗೆಯು | – | ಹುಟ್ಟು, ಮೂಡು |
| ಒಡಲು | – | ಶರೀರ |
| ಒತ್ತಿನ | – | ಪಕ್ಕದ, ಹತ್ತಿರದ |

| | | |
|---|---|---|
| ಒದರು | – | ಕೊಡಹು |
| ಒಪ್ಪು | – | ಸರಿ, ಸಮ್ಮತಿಸು |
| ಒರಲು | – | ಕೂಗಿಕೊಳ್ಳು |
| ಒಲೆಯು | – | ತೂಗಾಡು, ಅಲ್ಲಾಡು |

## ಓ

| | | |
|---|---|---|
| ಓಜೆ | – | ಕ್ರಮ |
| ಓಜೆಯಿಂದ | – | ಕ್ರಮವಾಗಿ |
| ಓರಗೆ | – | ನೆರೆಕರೆಯ |
| ಓವದೆ | – | ಪ್ರೀತಿಸದೆ, ಕಾಪಾಡದೆ, ಸಿಟ್ಟಿನಿಂದ |

## ಕ

| | | |
|---|---|---|
| ಕಂತು | – | ಮನ್ಮಥ |
| ಕಗ್ಗ | – | ಒಣಮಾತು, ಹರಟೆ |
| ಕಟ್ಟುಮಸ್ತು | – | ಬಲಾಢ್ಯ, ಪುಷ್ಟ |
| ಕಣಕಣವಾದ | – | ಒಡೆದುಹೋಗು, ತುಂಡು ತುಂಡಾಗು |
| ಕಣ್ಗೆಟ್ಟ | – | ಕಣ್ಣು ಕಾಣದ |
| ಕನಲು | – | ಸಿಟ್ಟುಗೊಳ್ಳು |
| ಕಮಟುವಾಸನೆ | – | ಕೆಟ್ಟ ವಾಸನೆ |
| ಕರಮೆ | – | ಹೆಚ್ಚಾಗಿ |
| ಕರಾಪು | – | ಕ್ರಾಪು |
| ಕರಿ | – | ಆನೆ |
| ಕರುಬು | – | ಅಸೂಯೆ ಪಡು |
| ಕರ್ಣಕಠೋರ | – | ಕೇಳುವುದಕ್ಕೆ ಬಿರುಸಾದ |
| ಕಲರವ | – | ಆಕರ್ಷಕವಾದ ಧ್ವನಿ |
| ಕಲಾಸಿ | – | ದೊಡ್ಡ ಭಾರವನ್ನೆತ್ತುವ ಕೆಲಸದವ, ನಾವಿಕ |
| ಕಲ್ಲೋಲ | – | ದೊಡ್ಡ ತೆರೆ |
| ಕಸರತ್ತು | – | ದೊಂಬರಾಟ, ಸರ್ಕಸ್ಸು |
| ಕಾಂಚನ | – | ಚಿನ್ನ |
| ಕಾಜಗ | – | ಕಾಗದ |
| ಕಾಟಾಚಾರ | – | ಕೇವಲ ಕ್ರಮ, ಸಂಪ್ರದಾಯ |
| ಕಾತರ | – | ಆತಂಕ |
| ಕಾದು | – | ಯುದ್ಧಮಾಡು |
| ಕಾದುದೈ | – | ಕಾಪಾಡಿದುವು |
| ಕಾನನ | – | ಕಾಡು, ಅರಣ್ಯ |

| | | |
|---|---|---|
| ಕಾಯಕ | – | ಕೆಲಸ |
| ಕಾಯು | – | ಕಾಪಾಡು |
| ಕಾಳ್ಗಿಡೆ | – | ಕೆಟ್ಟದಾಗಿ ಹೇಳು, ದೂರು |
| ಕಾಷ್ಠ | – | ಮರದಕೊರಡು |
| ಕಿನಿಸು | – | ಸಿಟ್ಟುಗೊಂಡು |
| ಕಿರಸ್ತಾನರು | – | ಕ್ರೈಸ್ತರು |
| ಕಿವಿದೆರೆ | – | ಕಿವಿಯ ಹಾಳೆ |
| ಕೀಳ್ಗೆಯ್ಮೆ | – | ಕೆಟ್ಟ ಕೆಲಸ |
| ಕುಂಭಸಂಭವ | – | ಕೊಡದಲ್ಲಿ ಹುಟ್ಟಿದವ, ದ್ರೋಣ, ಅಗಸ್ತ್ಯ |
| ಕುಕ್ಕರಿಸು | – | ಕುಳಿತುಕೊಳ್ಳು, ಕೂರು |
| ಕುಡಿ | – | ಚಿಗುರು |
| ಕುಡಿನೋಟ | – | ಪ್ರೀತಿಯ ನೋಟ |
| ಕುಪ್ಪಸ | – | ರವಿಕೆ |
| ಕುಪ್ಪೆ | – | ರಾಶಿ |
| ಕುಬ್ಜ | – | ಕುಳ್ಳ |
| ಕುಲಜರು | – | ಒಳ್ಳೆಯ ಕುಲದಲ್ಲಿ ಹುಟ್ಟಿದವರು |
| ಕುಸುಮ | – | ಹೂವು |
| ಕೂರಲಗಿನ ಅಸ್ತ್ರ | – | ಹರಿತವಾದ ಬಾಯಿಯುಳ್ಳ ಆಯುಧ |
| ಕೂರಲಗು | – | ಹರಿತವಾದ ಕತ್ತಿ |
| ಕೂರ್ಮ | – | ಆಮೆ |
| ಕೂರ್ಮಗಡಿಯಾಗಿರ್ಪ | – | ಕೂರ್ಮನೇ ಗಡಿಯಾಗಿರುವ |
| ಕೂರ್ಮೆ | – | ಸ್ನೇಹ, ನಲ್ಮೆ, ಪ್ರೀತಿ |
| ಕೂಳು | – | ಅನ್ನ |
| ಕ್ರೇನು | – | ಭಾರ ಎತ್ತುವ ಯಂತ್ರ |
| ಕೃತಕೃತ್ಯ | – | ಧನ್ಯ, ಸಾರ್ಥಕ |
| ಕೆಡೆ | – | ಬೀಳಿಸು, ಕೆಡವು |
| ಕೆಮ್ಮಗೆ | – | ಸುಮ್ಮನೆ, ವ್ಯರ್ಥವಾಗಿ |
| ಕೇರುಮಾಡದೆ | – | ಗಮನ ಕೊಡದೆ |
| ಕೈಗೂಸು | – | ಕೈಯ ಮಗು |
| ಕೈಸದರದವರು | – | ಕೈಗೆ ಸಿಕ್ಕಿದವರು |
| ಕೊಂಚಕೆ | – | ಸ್ವಲ್ಪದರಲ್ಲಿ |
| ಕೊರಕೊರ | – | ಕಿರಿಕಿರಿ |
| ಕ್ರತು | – | ಯಾಗ |
| ಕ್ವಾ | – | ಇಕೋ |
| ಕ್ಷಾಮ | – | ಬರಗಾಲ |

### ಖ

| | | |
|---|---|---|
| ಖಾದ್ಯ | – | ತಿನ್ನುವ ವಸ್ತುಗಳು |
| ಖಾಸ | – | ಸ್ವಂತ |
| ಖಾಸಗಿ | – | ಸ್ವಂತ |

### ಗ

| | | |
|---|---|---|
| ಗಡಿಪಾಯ | – | ದೊಡ್ಡಹಾರೆ |
| ಗಣ್ಯೆ | – | ಮರ್ಯಾದಸ್ಥೆ |
| ಗಿಜಿಗುಟ್ಟು | – | ತುಂಬಿತುಳುಕು, ಒತ್ತೊತ್ತಾಗಿರು |
| ಗುಡ್ಡೆಹಾಕು | – | ರಾಶಿ ಹಾಕು |
| ಗುಣ್ಪು | – | ಆಳ |
| ಗುಮ್ಮಿ | – | ಹೊಂಡ |
| ಗೋರಿ | – | ಸಮಾಧಿ |
| ಗೋಳ್ಗರೆದು | – | ಮೊರೆಯಿಟ್ಟು |
| ಗೋಳ್ದನಿ | – | ದೈನ್ಯದ ಕೂಗು, ಗಟ್ಟಿಯಾದ ಕೂಗು |
| ಗ್ಯಾನ | – | ಜ್ಞಾನ, ಮೈಮೇಲಿನ ಎಚ್ಚರ |
| ಗ್ರಹಿಸು | – | ಅರ್ಥಮಾಡಿಕೊಳ್ಳು, ತಿಳಿದುಕೊಳ್ಳು |

### ಘ

| | | |
|---|---|---|
| ಘನತರ | – | ದೊಡ್ಡದಾದ |
| ಘಲ್ಲಣೆ | – | ಭಯಂಕರ ಶಬ್ದ |
| ಘೂರ್ಮಿಸು | – | ಮೇರೆ ಮೀರಿ ಬರು |

### ಚ

| | | |
|---|---|---|
| ಚಂಚಲಾಕ್ಷಿ | – | ಚಂಚಲವಾದ ಕಣ್ಣುಳ್ಳವಳು |
| ಚಕಮಕಿ | – | ಘರ್ಷಣೆ, ತಿಕ್ಕಾಟ |
| ಚಕಳ | – | ಚರ್ಮ |
| ಚಕಿತ | – | ಆಶ್ಚರ್ಯಗೊಂಡ |
| ಚಕ್ರಿ | – | ಚಕ್ರವನ್ನು ಧರಿಸಿದವ, ಕೃಷ್ಣ |
| ಚಣ | – | ಕ್ಷಣ |
| ಚತುರಂಗ ಬಲ | – | ಆನೆ, ಕುದುರೆ, ರಥ, ಪದಾತಿಗಳೆಂಬ ನಾಲ್ಕು ಬಗೆಯ ಸೇನಾಬಲ |
| ಚತುರೋಪಾಯ | – | ಸಾಮ, ದಾನ, ಭೇದ, ದಂಡವೆಂಬ ನಾಲ್ಕು ಉಪಾಯಗಳು |
| ಚರುಮ | – | ಚರ್ಮ |
| ಚಹರೆ | – | ಗುರುತು |
| ಚಿನಾರಿ | – | ಚೂಟಿಯಾದ |

| | | |
|---|---|---|
| ಚಿನಾಲಿ | – | ಬೈಗಳು |
| ಚೆಕ್ಕೆ | – | ತೆಳ್ಳನೆಯ ಚೂರು, ದಾಲಚಿನ್ನಿ |
| ಚೌಕ | – | ಚೌಕಾಕಾರದ ಬಟ್ಟೆಯ ತುಂಡು |

**ಜ**

| | | |
|---|---|---|
| ಜಂಗಮಲತೆ | – | ನಡೆದಾಡುವ ಬಳ್ಳಿ |
| ಜಂಜಾಟ | – | ತೊಂದರೆ |
| ಜಟಿಲ | – | ಸಂಕೀರ್ಣ, ಕ್ಲಿಷ್ಟ |
| ಜನಪತಿ | – | ರಾಜ |
| ಜಸ | – | ಕೀರ್ತಿ |
| ಜಾನು | – | ಮಂಡಿ |
| ಜಂಘೆ | – | ಮೀನಖಂಡ, ಕಣಕಾಲು |
| ಜಾಲ | – | ಸಮೂಹ, ಗುಂಪು, ಬಲೆ |
| ಜಿನಸು | – | ಬೇಳೆ ಕಾಳು |
| ಜಿನುಗಿ | – | ಹನಿಹನಿಯಾಗಿ ಮೂಡಿ |
| ಜುಲಾಬು | – | ಭೇದಿ |

**ಟ**

| | | |
|---|---|---|
| ಟಕ್ಕು | – | ಮೋಸ |
| ಟಿಸಿಲು | – | ಕವಲು, ಕೊಂಬೆ, ರೆಂಬೆ |

**ಠ**

| | | |
|---|---|---|
| ಠಾವು | – | ತಾಣ |

**ಢ**

| | | |
|---|---|---|
| ಢಾಳಾಗಿ | – | ವ್ಯಾಪಕವಾಗಿ |

**ತ**

| | | |
|---|---|---|
| ತಬ್ಬಲಿ | – | ಅನಾಥ |
| ತತ್ | – | ಆ |
| ತವ | – | ನಿನ್ನ, ನಿಮ್ಮ |
| ತರವೇ | – | ಯೋಗ್ಯವೇ |
| ತರಾವರಿ | – | ಹಲವು ಬಗೆಯ |
| ತರು | – | ವೃಕ್ಷ |
| ತರುಬು | – | ಅಟ್ಟು, ಓಡಿಸು |

| | | |
|---|---|---|
| ತವೆ | – | ಕಾವಲಿ |
| ತಲ್ಪ | – | ಹಾಸಿಗೆ |
| ತ್ತೊ¥p | – | ಮೇಲೆ ಬಿದ್ದು ಕಾದಾಡು |
| ತಾಜಾ | – | ಶುದ್ಧ |
| ತಾಳ್ದ | – | ಒಂದು ಬಗೆಯ ತಿಂಡಿ |
| ತಿಪ್ಪೆ | – | ಕಸಹಾಕುವ ಸ್ಥಳ |
| ತಿರೆ | – | ಭೂಮಿ |
| ತಿಲಾನ್ನ | – | ಉತ್ತರ ಕ್ರಿಯೆಯಲ್ಲಿ ಬಳಸುವ ಎಳ್ಳು ಬೆರೆಸಿದ ಅನ್ನ |
| ತೀಕ್ಷ್ಣ | – | ಹರಿತ |
| ತಿರ್ಗಾ | – | ಪುನಃ |
| ತೀಕ್ಷ್ಣಮತಿ | – | ಬುದ್ಧಿವಂತ |
| ತೆಂಕ | – | ದಕ್ಷಿಣ |
| ತುಚ್ಛಂ | – | ವ್ಯರ್ಥ, ನಿಂದ್ಯ |
| ತುಟಿಪಿಟಕೆನ್ನು | – | ಬಾಯಿತೆರೆ |
| ತುಪ್ಪಟ | – | ಹಕ್ಕಿಗಳ ಮೈಮೇಲಿನ ಗರಿ |
| ತುಬ್ಬು | – | ತೋರಿಸಿಕೊಡು |
| ತೇಜ | – | ಕಾಂತಿ, ಬೆಳಕು |
| ತೊಟ್ಟಿ | – | ಮರ ಅಥವಾ ಲೋಹದಿಂದ ಮಾಡಿದ ನೀಳವಾದ ಪಾತ್ರೆ |
| ತೊಪ್ಪೆ | – | ರಾಶಿ |
| ತೊಳಲಾಡು | – | ಒದ್ದಾಡು |
| ತೌರು | – | ತವರು, ತಾಯಿಮನೆ |
| ತ್ರಾಣ | – | ಶಕ್ತಿ |

## ಥ

| | | |
|---|---|---|
| ಥರಾವರಿ | – | ಬಗೆ ಬಗೆಯ |

## ದ

| | | |
|---|---|---|
| ದಂಟು | – | ಕಾಂಡ, ಕೋಲು |
| ದಂಡೆ | – | ದಡ, ತೀರ |
| ದಗ್ಧ | – | ಉರಿದ |
| ದರ್ಪಣ | – | ಕನ್ನಡಿ |
| ದಾಯ | – | ಭಾಗ, ಪಾಲು, ದಾನ, ಪಿತ್ರಾರ್ಜಿತ ಆಸ್ತಿಯಲ್ಲಿರುವ ಪಾಲು |
| ದಾಯಾದ್ಯ | – | ಪಿತ್ರಾರ್ಜಿತ ಆಸ್ತಿಯ ಪಾಲುಗಾರ, ಕುಟುಂಬದವ, ರಕ್ತ ಸಂಬಂಧಿಕ |
| ದಾವಾಗ್ನಿ | – | ಕಾಡಿನ ಬೆಂಕಿ |
| ದಿವಿಜತಟಿನಿ | – | ದೇವಲೋಕದ ನದಿ, ಗಂಗೆ |

| | | |
|---|---|---|
| ದಿಂಡು | – | ಮರದ ತುಂಡು, ಕಾಂಡ, ಮೂಟೆ |
| ದಿಂಡುರುಳು | – | ಮರದ ತುಂಡಿನಂತೆ ಬೀಳು, ಬಿದ್ದು ಹೊರಳು |
| ದುಕ್ತಿ | – | ದುಃಖ |
| ದುಗುಡ | – | ಚಿಂತೆ |
| ದುಡ | – | ದೃಢತೆ |
| ದುನಿಯಾ | – | ಪ್ರಪಂಚ |
| ದುಪ್ಪಟಿ | – | ವಸ್ತ್ರ |
| ದುಬಾರಿ | – | ಅತಿಯಾದ ಬೆಲೆ, ಎರಡು ಪಟ್ಟು |
| ದುಮ್ಮಾನ | – | ಬೇಸರ, ಚಿಂತೆ |
| ದುರ್ಗತಿ | – | ಹೀನ ಸ್ಥಿತಿ |
| ದೇವಾಂಗನೆ | – | ಅಪ್ಸರ ಸ್ತ್ರೀ |
| ದೈನ್ಯಂಬಡು | – | ದೀನನಾಗಿಬೇಡು |
| ದೊರೆ | – | ಒಡೆಯ, ಲಭಿಸು, ಸರಿಯೇ |
| ದ್ವಾರಾ | – | ಮೂಲಕ |

## ಧ

| | | |
|---|---|---|
| ಧರಾಧೀಶರು | – | ರಾಜರು, ಭೂಮಿಯ ಒಡೆಯರು |
| ಧರ್ಮಬಾಹಿರರು | – | ಧರ್ಮಕ್ಕೆ ಹೊರಗಾದವರು, ಹೀನ ಮನುಷ್ಯರು |
| ಧವಳ | – | ಶ್ವೇತವರ್ಣ, ಬಿಳಿ |
| ಧಿಮಾಕು | – | ಸೊಕ್ಕು, ಧಾರ್ಷ್ಟ್ಯ |

## ನ

| | | |
|---|---|---|
| ನಕ್ಷೆ | – | ನಕಾಶೆ |
| ನಗ | – | ಪರ್ವತ |
| ನಚ್ಚು | – | ನಂಟು, ವಿಶ್ವಾಸವಿಡು |
| ನಡವಳಿ | – | ವರ್ತನೆ, ನಡವಳಿಕೆ |
| ನಡು | – | ಸೊಂಟ |
| ನಲುಗು | – | ಸೊರಗು |
| ನಲುವು | – | ನಲಿವು, ಸಂತೋಷ |
| ನವಣೆ | – | ಒಂದು ಬಗೆಯ ಧಾನ್ಯ |
| ನಾಣ್ಣುಡಿ | – | ರೂಢಿಯ ಮಾತು, ಗಾದೆಮಾತು |
| ನಾಸ್ತಿಕರು | – | ದೇವರನ್ನು ನಂಬದವರು |
| ನಿಕ್ಷಿಪ್ತ | – | ಹುದುಗಿದ, ಹೂತಿದ್ದ |
| ನಿಗೂಢ | – | ರಹಸ್ಯವಾದ, ಕಣ್ಣಿಗೆ ಕಾಣದ |
| ನಿಚ್ಚಂ | – | ನಿತ್ಯ |

| | | |
|---|---|---|
| ನಿಟ್ಟೆಲ್ | – | ಬೆನ್ನೆಲುಬು |
| ನಿಟ್ಟೆಲ್ವಂ | – | ಬೆನ್ನೆಲುಬನ್ನು |
| ನಿಡಿದು | – | ನೀಳ, ದೀರ್ಘ |
| ನಿಡುಸುಯ್ಯು | – | ನಿಟ್ಟುಸಿರು ಬಿಡು |
| ನಿಬ್ಬರ | – | ವೇಗವಾಗಿ |
| ನಿರ್ಜನೆ | – | ಜನರಿಲ್ಲದ, ಒಂಟಿ |
| ನಿರಕ್ಷರಕುಕ್ಷಿ | – | ಅಕ್ಷರಜ್ಞಾನವಿಲ್ಲದವ |
| ನಿದರ್ಶನ | – | ಉದಾಹರಣೆ |
| ನಿಷ್ಣಾತ | – | ನಿಪುಣ, ಪರಿಣತ |
| ನಿಸರ್ಗ | – | ಪ್ರಕೃತಿ |
| ನೀಟಿ | – | ಚಾಚಿ |
| ನೃಪ, ನೃಪತಿ | – | ರಾಜ |
| ನೆಂಚಿಕೆ | – | ಜೊತೆಯಲ್ಲಿ ಸೇವಿಸುವುದು |
| ನೆಗಳ್ದು | – | ಪ್ರಸಿದ್ಧಿಯನ್ನು ಪಡೆದು |
| ನೆಗೆಯೋದು | – | ಹಾರುವುದು |
| ನೆನಹು | – | ನೆನಪು |
| ನೆಪ್ಪಿಡಿಯ ತೊಡಗು | – | ನೆನಪುಮಾಡು |
| ನೆಪ್ಪು | – | ನೆನಪು |
| ನೆರಕೆ | – | ಬಿದಿರಿನ ತಟ್ಟಿ |
| ನೆರೆದು | – | ಸೇರಿ |
| ನೆಳಲು | – | ನೆರಳು |
| ನೊಣೆ | – | ನುಂಗು, ಗಬಗಬನೆ ತಿನ್ನು |
| ನೊರಜು | – | ಸಣ್ಣಜಾತಿಯ ಕೀಟ (ಸೊಳ್ಳೆ) |

## ಪ

| | | |
|---|---|---|
| ಪಂತಿ | – | ಸಾಲು, ಪಂಕ್ತಿ |
| ಪಗೆವರ | – | ವೈರಿಗಳ |
| ಪಗೆವಾಡಿ | – | ಶತ್ರುಸೈನ್ಯ |
| ಪಚ್ಚೆಲೆಯ ತರು | – | ಹಸುರೆಲೆಯ ಮರ |
| ಪಚ್ಚೆ | – | ಪಟ್ಟಿ |
| ಪಟ್ನಪ್ನೋರ | – | ಪಟ್ಟಣದವರ |
| ಪಟ್ಟು | – | ಪತ್ತು, ಹಿಡಿತ |
| ಪಡಲಿಡು | – | ಚಲ್ಲಾಪಿಲ್ಲಿ ಮಾಡು |
| ಪಡುವೆಣ್ಗಾವುದ | – | ಪಶ್ಚಿಮ ದಿಕ್ಕಿಗೆ ಎಂಟು ಗಾವುದ |
| ಪಡ್ಡೆ | – | ಪೋಲಿ, ಜವಾಬ್ದಾರಿಯಿಲ್ಲದ |

| | | |
|---|---|---|
| ಪತರಗುಟ್ಟು | – | ಚಡಪಡಿಸು |
| ಪತ್ತಲ | – | ತೆಳುವಾದ ಸೀರೆ, ರೇಶ್ಮೆ ಸೀರೆ |
| ಪದಯುಗ | – | ಎರಡು ಪಾದಗಳು |
| ಪದ್ಮಾಸನ | – | ಒಂದು ಬಗೆಯ ಆಸನ |
| ಪಯಿಂಛಾಸಿರ್ವರ್ | – | ಹತ್ತು ಸಾವಿರ ಜನರು |
| ಪರಿ | – | ರೀತಿ |
| ಪರಿಕರ | – | ಸಾಮಗ್ರಿ |
| ಪರಿಕಿಸು | – | ಪರೀಕ್ಷಿಸು |
| ಪರಿಚಾರಕ | – | ಸೇವಕ |
| ಪರಿಧಿ | – | ವ್ಯಾಪ್ತಿ |
| ಪರಿಹೃತ | – | ನಿವಾರಣೆಯಾದ |
| ಪಲ್ಯಂಕ | – | ಒಂದು ಬಗೆಯ ಆಸನ, ಕುಳಿತುಕೊಳ್ಳುವ ಭಂಗಿ |
| ಪಲ್ಯಂಕಾಸನ | – | ಒಂದು ಬಗೆಯ ಆಸನ |
| ಪಲ್ಲವಿ | – | ಹಾಡಿನ ಆರಂಭದಲ್ಲಿದ್ದು ನುಡಿಗೊಂದು ಸಲ ಪುನರಾವರ್ತನೆಗೊಳ್ಳುವ ಭಾಗ |
| ಪಳಂಚಲೆದಪೆ | – | ಮೇಲೆಬಿದ್ದು, ತಾಕಲಾಟ |
| ಪಾಪಗೇಡಿ | – | ಪಾಪಿ ಮತ್ತು ಕೇಡಿ |
| ಪಿಚ್ಚು | – | ಕಣ್ಣಿನ ಕೊಳೆ |
| ಪಿಂಡ | – | ಅನ್ನದ ಉಂಡೆ |
| ಪಿರಿಂಟ್ | – | ಮುದ್ರಣ |
| ಪಿಸುರು | – | ಕಣ್ಣಿನ ಕೊಳೆ |
| ಪುಕ್ಕ | – | ಬಾಲ, ಹಕ್ಕಿಗಳ ಹಿಂಬದಿಯ ಗರಿ |
| ಪೃಥಾಸುತ | – | ಕುಂತಿಯ ಮಗ |
| ಪೊಗಳ್ದು | – | ಹೊಗಳು |
| ಪೊಟ್ಟಳಿಸು | – | ಗರ್ವಿಸು |
| ಪೊಡರ್ಪು | – | ಸಾಮರ್ಥ್ಯ |
| ಪೊರಮಟ್ಟು | – | ಹೊರಟು |
| ಪ್ರಮೇಯ | – | ಉದ್ದೇಶ |
| ಪ್ರವೃತ್ತಿ | – | ರೀತಿ, ಕ್ರಮ, ಮನದ ಒಲವು |
| ಪ್ರಶಸ್ತ | – | ಯೋಗ್ಯ, ಸೂಕ್ತ |
| ಪ್ರಾಣಾಂತಿಕ | – | ಜೀವ ತೆಗೆಯಬಲ್ಲ |
| ಪ್ರಾಣಿಜನ್ಯ | – | ಪ್ರಾಣಿಗಳಿಂದ ಸಿಗುವ |
| ಪ್ರಾತಃವಿಧಿ | – | ಬೆಳಗ್ಗಿನ ಕೆಲಸ |
| ಫುಟಪಾತು | – | ಕಾಲುದಾರಿ |

## ಬ

| | | |
|---|---|---|
| ಬಂಜರು | – | ಒಣ, ಫಲಬಾರದ |
| ಬಗನಿ | – | ತಾಳೆ ಜಾತಿಯ ಒಂದು ಮರ |
| ಬಗೆ | – | ಮನುಸ್ಸು |
| ಬಗೆದು | – | ವಿಚಾರಮಾಡಿ |
| ಬಗಲು | – | ಹೆಗಲು |
| ಬಜಾರು | – | ಪೇಟೆ |
| ಬಡಬ | – | ಸಮುದ್ರದಲ್ಲಿ ಅಡಗಿರುವ ಬೆಂಕಿ |
| ಬಯಲು | – | ಶೂನ್ಯ, ವ್ಯರ್ಥವಾಗು, ಕೈಗೆಸಿಗದಿರು |
| ಬರೂಮಟ | – | ಬರುವಾಗ, ಬರುವ ಹೊತ್ತಿಗೆ |
| ಬಲಸಂಧಾನದಲಿ | – | ಬಲದೊಂದಿಗೆ |
| ಬಲಿಯು | – | ಮಾಡು, ರಚಿಸು, ಬೆಳೆಯು |
| ಬಲ್ಮೆ | – | ಹಿರಿಮೆ |
| ಬಲ್ಲಿದ | – | ತಿಳಿದವ, ಪಂಡಿತ |
| ಬವಣಿ | – | ಕಷ್ಟ |
| ಬವಣೆ | – | ಒದ್ದಾಡು, ಕಷ್ಟ |
| ಬಾಜೂ | – | ಹತ್ತಿರ |
| ಬಾಹಿರರು | – | ಹೊರಗಾದವರು |
| ಬಿಜಯಂಗೆಯ್ | – | ಚಿತ್ತಯಿಸು, ದಯೆಯಿಟ್ಟು ಬರು |
| ಬಿನ್ನವಿಸು | – | ವಿನಂತಿಸು |
| ಬಿರ್ನೆ | – | ವೇಗವಾಗಿ, ಬೇಗನೆ |
| ಬಿರಾಮರು | – | ಬ್ರಾಹ್ಮಣರು |
| ಬಿರುಸು | – | ವೇಗ |
| ಬುದ್ಬುದ | – | ಗುಳ್ಳೆ, ನೀರುಗುಳ್ಳೆ |
| ಬೂರುಗ | – | ಒಂದು ಜಾತಿಯ ಮರ |
| ಬೆಡಂಗಿಯರು | – | ಸುಂದರಿಯರು |

## ಭ

| | | |
|---|---|---|
| ಭಕ್ಷ್ಯಭೋಜ್ಯ | – | ತಿನ್ನ ತಕ್ಕುದು, ಸಿಹಿ ತಿನಿಸು |
| ಭತ್ತೆ | – | ವಿಶೇಷ ಸಂಬಳ |
| ಭಣಗುಡು | – | ಒಣಗು |
| ಭರ | – | ಆವೇಶ, ವೇಗ |
| ಭಾಜನ | – | ಪಾತ್ರೆ |
| ಭಾವೈಕ್ಯ | – | ಭಾವನಾತ್ಮಕವಾದ ಹೊಂದಾಣಿಕೆ |

| | | |
|---|---|---|
| ಭೀಷಣ | – | ಭಯ ಹುಟ್ಟಿಸುವ |
| ಭೂವರ | – | ರಾಜ, ಅರಸ |
| ಭೈರಿಗೆ | – | ತೂತುಕೊರೆಯುವ ಸಾಧನ |
| ಭೋಜಿಸು | – | ತಿನ್ನು, ಸೇವಿಸು |

## ಮ

| | | |
|---|---|---|
| ಮಂದೆ | – | ಸಮೂಹ, ಗುಂಪು |
| ಮಟ್ಟ | – | ಸ್ಥಾನಮಾನ |
| ಮಂಡಿ | – | ಅಂಗಡಿ |
| ಮತ್ | – | ನನ್ನ |
| ಮದಕರಿ | – | ಮದ ತುಂಬಿದ ಆನೆ |
| ಮನದಣಿಯು | – | ಮನಸ್ಸು ತೃಪ್ತಿಪಡುವಷ್ಟು |
| ಮನೋರಥ | – | ಬಯಕೆ, ಇಚ್ಛೆ |
| ಮರೆಗೊಳ್ಳು | – | ಆಶ್ರಯಿಸು |
| ಮರ್ಮ | – | ಗುಟ್ಟು |
| ಮಹಾಜಿರಂಗ | – | ದೊಡ್ಡ ಯುದ್ಧರಂಗ |
| ಮಹಾಪೂರ | – | ನೆರೆ, ಮಹಾ ಪ್ರವಾಹ |
| ಮಾತಂಗ | – | ಆನೆ, ಬೇಡ, ಒಂದು ಪರ್ವತ |
| ಮಾನವಪತಿ | – | ರಾಜ |
| ಮಾರು | – | ಎರಡು ಗಜ ಉದ್ದ |
| ಮಾರ್ಮಲೆದವನ್ | – | ಸೊಕ್ಕಿನಿಂದ ಮೆರೆದಾಡಿದವನು |
| ಮಾಳ | – | ಬಯಲು |
| ಮಿಸುಕು | – | ಅಲುಗಾಡು |
| ಮಿಸ್ಸು | – | ಮಿಶನ್ |
| ಮಂದಲಿಗೆ | – | ಹುಲ್ಲಿನ ಚಾಪೆ |
| ಮುಂಡಾಡು | – | ಮುದ್ದಾಡು |
| ಮುಖಾಂತರ | – | ಮೂಲಕ |
| ಮುಖಾಮುಖಿ | – | ಎದುರು ಬದುರು |
| ಮುಣುಗು | – | ಮುಳುಗು |
| ಮುನಿ | – | ಸಿಟ್ಟು, ಋಷಿ |
| ಮುನ್ನಂ | – | ಮುಂಚೆ, ಮೊದಲು |
| ಮುರುಡು | – | ಮುದುಡು, ಒರಟಾದುದು |
| ಮುರುದು | – | ಕತ್ತರಿಸಿ, ಮುರಿದು |
| ಮುಸುಡು | – | ಮುಖ |

| | | |
|---|---|---|
| ಮೂಜಗ | – | ಮೂರು ಜಗ, ತ್ರಿಲೋಕ |
| ಮೂಡಿಗೆ | – | ಬತ್ತಳಿಕೆ, ಬಾಣದ ಚೀಲ |
| ಮೂಳೆ | – | ಎಲುಬು |
| ಮೃಗತತಿ | – | ಪ್ರಾಣಿ ಸಮೂಹ |
| ಮೃದುತರ | – | ನುಣುಪಾದ |
| ಮೃಷ್ಟಾನ್ನ | – | ರುಚಿಯ ಊಟ |
| ಮೇವು | – | ಆಹಾರ, ತಿನಿಸು |
| ಮೇಳವಿಸು | – | ಒಂದಾಗು |
| ಮೊಕ್ಕಳಂ | – | ಬಹಳವಾಗಿ, ವಿಶೇಷವಾಗಿ |
| ಮೋಹನಾಂಗಿ | – | ಚೆಲುವೆ |
| ಮೋಡಿ | – | ಮಾಯೆ |
| ಆಮ್ಯಾಕೆ | – | ಆ ಬಳಿಕ, ಆಮೇಲೆ |

## ಯ

| | | |
|---|---|---|
| ಯಥೇಷ್ಟ | – | ಧಾರಾಳ |
| ಯದೃಚ್ಛಾ | – | ಸ್ವಚ್ಛಂದ, ಮನಬಂದಂತೆ, ತನಗೆ ತಾನೇ |
| ಯಾಕಡಿ | – | ಯಾವ ಕಡೆ |
| ಯೋಷೆ | – | ಸ್ತ್ರೀ, ಹೆಂಗಸು |

## ರ

| | | |
|---|---|---|
| ರವವಿಹೀನೆ | – | ಸ್ವರವಿಲ್ಲದ |
| ರವಿ | – | ಸೂರ್ಯ |
| ರಾಸು | – | ಜಾನುವಾರು |
| ರುಮಾಲು | – | ಮುಂಡಾಸು |
| ರೇಗು | – | ಸಿಟ್ಟಾಗು |
| ರೇವು | – | ಹಡಗಿನ ನಿಲುದಾಣ, ಬಂದರು |

## ಲ

| | | |
|---|---|---|
| ಲಳಿ | – | ವೇಗ, ಕೌಶಲ್ಯ |
| ಲಾಗಾಯ್ತು | – | ಆ ಬಳಿಕ |
| ಲಿಂಗವಂತರು | – | ಲಿಂಗಾಯತರು, ವೀರಶೈವರು |
| ಲುಳಿ | – | ಚಾಕಚಕ್ಯತೆ, ಸೊಗಸು, ಕಾಲಿನ ಒಂದು ಆಭರಣ |
| ಲೋಕಾಂತ | – | ಲೋಕದ ಜೊತೆ ಒಂದಾಗು |

## ವ

| | | |
|---|---|---|
| ವಚನ | – | ಮಾತು, ಒಂದು ಸಾಹಿತ್ಯ ಪ್ರಕಾರ |
| ವರೇಣ್ಯ | – | ಶ್ರೇಷ್ಠ |
| ವಲಸೆ | – | ಒಕ್ಕಲು ಹೋಗುವುದು |
| ವಸ್ತುಲ | – | ಹೊಸ್ತಿಲಿನ |
| ವಾಡಿಕೆ | – | ಕ್ರಮ, ರೀತಿ |
| ವಾಜಿ | – | ಕುದುರೆ |
| ವಾಯ (ತ್ಭ) | – | ವ್ಯಾಜ (ಸಂ) ನೆಪ, ಕಾರಣ, ಮೋಸ |
| ವಾರ್ಧಿ | – | ಸಮುದ್ರ |
| ವಿಕೃತಿ | – | ಕುರೂಪ |
| ವಿಮಲ | – | ಪರಿಶುದ್ಧ |
| ವಿಮುಖಿ | – | ಮುಖತಿರುಗಿಸಿದವ |
| ವಿಮೋಹಿಸಿ | – | ಅತಿಯಾಗಿ ಆಸೆಪಟ್ಟು |
| ವಿದ್ಯುನ್ಮಾನ ಮಾಧ್ಯಮ | – | ಟಿವಿ, ರೇಡಿಯೋ ಮೊದಲಾದ ಮಾಧ್ಯಮಗಳು |
| ವಿಲಸತ್ | – | ಶೋಭಿಸುವ |
| ವಿಲಸನ್ಮೌಳಿ | – | ಶೋಭಿಸುವ ತಲೆ |
| ವಿಷಮ | – | ಜಟಿಲ, ಕ್ರಮ ತಪ್ಪಿದ |
| ವೃಂದಾರಕ | – | ದೇವತೆ |
| ವೃಂದಾರಕೋಪಮಂ | – | ದೇವತೆಗಳಿಗೆ ಸಮಾನನಾದವನು |
| ವೆಂಟಣಿಸು | – | ಆವರಿಸು, ಹೆಚ್ಚಾಗು |
| ವೈಖರಿ | – | ಶೈಲಿ, ರೀತಿ |
| ವೈಣಿಕ | – | ವೀಣಾವಾದಕ |
| ವೊಡ್ಕೊಳ್ಳು | – | ಬಡಬಡಾಯಿಸು |
| ವ್ಯಾಕುಲ | – | ಚಿಂತೆ, ಆಯಾಸ |
| ವ್ಯಾಖ್ಯಾನ | – | ವಿವರಣೆ |

## ಶ

| | | |
|---|---|---|
| ಶಕ್ತಾನುಸಾರ | – | ಸಾಮರ್ಥ್ಯಕ್ಕೆ ಅನುಗುಣವಾಗಿ, ಶಕ್ತಿಯ ಅನುಸಾರ |
| ಶತಪಥ | – | ಆಚೀಚೆ ಹೆಜ್ಜೆ ಹಾಕು |
| ಶಯ್ಯಾಗೃಹ | – | ಮಲಗುವ ಕೊಠಡಿ, ಬೆಡ್‌ರೂಂ |
| ಶರತ್ತು | – | ನಿಯಮ |
| ಶಹರ | – | ಪಟ್ಟಣ |
| ಶಾವಿಗೆ | – | ಸೇಮಿಗೆ |
| ಶುಭಾಕರ | – | ಶುಭಕ್ಕೆ ಆಕರವಾದ, ಶುಭಕರವಾದ, ಮಂಗಳಕರವಾದ |
| ಶೈತ್ಯೋಪಚಾರ | – | ತಂಪು ಉಪಚಾರ |

## ಸ

| | | |
|---|---|---|
| ಸಂಕಷ್ಟ ತಿಥಿ | – | ಕಷ್ಟದ ದಿನ |
| ಸಂಕುಲ | – | ಸಮೂಹ |
| ಸಂಗರ | – | ಯುದ್ಧ |
| ಸಂಚಿಸು | – | ತಯಾರಿಸು |
| ಸಂಜೀವನ ರಸ | – | ಶರೀರಕ್ಕೆ ಚೈತನ್ಯ ನೀಡುವ ರಸ |
| ಸದಾ | – | ಯಾವಾಗಲೂ |
| ಸನ್ನಿಭ | – | ಸಮಾನ |
| ಸನ್ನಿಹಿತ | – | ಹತ್ತಿರದಲ್ಲಿರುವ |
| ಸಪೋರ್ಟು | – | ಬೆಂಬಲ |
| ಸಮೀಕರಿಸಿ | – | ಒಂದಾಗಿ, ಒಟ್ಟಾಗಿಸಿ |
| ಸಮೀಕ್ಷೆ | – | ಅವಲೋಕನ, ಪರಿಶೀಲನೆ |
| ಸರವು | – | ಹುಲ್ಲಿನ ಹಗ್ಗ, ದಾರ |
| ಸವುತಿ | – | ಗಂಡನ ಮತ್ತೊಬ್ಬಳು ಹೆಂಡತಿ, ಸವತಿ |
| ಸವಾಲು | – | ಪ್ರಶ್ನೆ, ಸಮಸ್ಯೆ |
| ಸವುರಿ | – | ಸವರಿ, ನೇವರಿಸಿ |
| ಸವ್ಯಸಾಚಿ | – | ಎರಡೂ ಕೈಗಳಲ್ಲಿ ಬಾಣ ಪ್ರಯೋಗಿಸಬಲ್ಲವನು, ಅರ್ಜುನ |
| ಸಾಂಗತ್ಯ | – | ಹೊಂದಾಣಿಕೆ |
| ಸಾಂಗವಾಗಿ | – | ಪರಿಪೂರ್ಣವಾಗಿ, ಯಾವುದೇ ತೊಂದರೆ ಇಲ್ಲದೆ |
| ಸಾಂಗ್ಯ | – | ಸಂಪ್ರದಾಯಬದ್ಧವಾದ ಆಚರಣೆ, ದೃಷ್ಟಿದೋಷ ತೆಗೆಯುವುದು |
| ಸಾಧಕ ಬಾಧಕ | – | ಒಳಿತು ಕೆಡುಕು |
| ಸಾಬರು | – | ಮುಸಲ್ಮಾನರು |
| ಸಾಮರಸ್ಯ | – | ಸಮರಸವಾಗಿರುವಿಕೆ, ಹೊಂದಾಣಿಕೆ |
| ಸಾಮೆ | – | ಒಂದು ಬಗೆಯ ಧಾನ್ಯ |
| ಸಾರ | – | ಸತ್ವ |
| ಸಾವಿಗೆಣೆ | – | ಸಾವಿಗೆ ಸಮಾನ |
| ಸಿಂಗ | – | ಸಿಂಹ |
| ಸಿಡಿಲ್ದು | – | ಸಿಡಿದೆದ್ದು |
| ಸುಕ್ಕು | – | ನೆರಿಗೆ |
| ಸುಧಾಂಗ | – | ಚಂದ್ರ |
| ಸುಸ್ತು | – | ಆಯಾಸ |
| ಸುಳುವು | – | ಪತ್ತೆ, ಗುರುತು |

| | | |
|---|---|---|
| ಸೂಗ್ವಡೆ | – | ಸರದಿಯನ್ನು ಹೊಂದು |
| ಸೆಣಸಾಟ | – | ಹೋರಾಟ |
| ಸೆರಗು | – | ಹೊದಿಕೆ, ಸೀರೆಯ ಅಂಚು |
| ಸೊರ್ಕು | – | ಸೊಕ್ಕು, ಗರ್ವ |
| ಸೋಹು | – | ಓಡಿಸುವ, ಅಟ್ಟು |

### ಹ

| | | |
|---|---|---|
| ಹಗೆ | – | ಶತ್ರು |
| ಹಟ್ಟಿ | – | ಗುಡಿಸಲು |
| ಹರಿಗ | – | ಅರಿಕೇಸರಿಯ ಒಂದು ಹೆಸರು, ಅರ್ಜುನ |
| ಹರಿವಾಣ | – | ಹಿತ್ತಾಳೆ ತಟ್ಟೆ |
| ಹಸ್ತಪ್ರಕ್ಷಾಲನ | – | ಕೈಯನ್ನು ತೊಳೆಯುವುದು |
| ಹಾಫೀಸರ | – | ಆಫೀಸರ್, ಅಧಿಕಾರಿ |
| ಹಾಲಿ | – | ಸದ್ಯ, ಈಗ |
| ಹಾವಳಿ | – | ಉಪಟಳ |
| ಹೆಂಟೆ | – | ಮಣ್ಣಿನ ದೊಡ್ಡ ಉಂಡೆ |
| ಹೆಬ್ಬೆಟ್ಟ | – | ದೊಡ್ಡ ಪರ್ವತ |
| ಹೆಡ್ತಿ | – | ಹೆಂಡತಿ |
| ಹೈಕಳು | – | ಮಕ್ಕಳು |
| ಹೈದ, ಹೈದಗೆ | – | ಹುಡುಗ |
| ಹೊಟ್ಟೆಹೊರೆ | – | ಹೊಟ್ಟೆತುಂಬಿದ |
| ಹೊಲೆ | – | ಹೊಲಸು |
| ಹೊತ್ತುನಂತೆ | – | ಬೆಳಗ್ಗಿನಿಂದ |
| ಹೊತ್ತೂಡು | – | ಬೆಳಗಾಗು |
| ಹೊದರು | – | ಪೊದರು |

• • •